ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮಾರ್ಚ್ 9 ಸೋಮವಾರ 2026

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 46 | ಸಂಚಿಕೆ: 318 | ಪುಟಗಳು: 10
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಭಾರತ ಟಿ20 ವಿಶ್ವಕಪ್ ಸಾಮ್ರಾಟ

● 3ನೇ ಬಾರಿಗೆ ಟಿ20 ವಿಶ್ವಕಪ್ ಗೆದ್ದು ಇತಿಹಾಸ ನಿರ್ಮಿಸಿದ ಭಾರತ ● ಕೋಟ್ಯಾಂತರ ಅಭಿಮಾನಿಗಳ ಕನಸು ಮತ್ತೊಮ್ಮೆ ನನಸು ● ನ್ಯೂಜಿಲೆಂಡ್ ರನ್ನರ್ ಅಪ್ ● ದೇಶಾದ್ಯಂತ ಕ್ರಿಕೆಟ್ ಅಭಿಮಾನಿಗಳ ಸಂಭ್ರಮಾಚರಣೆ ● ಗಣ್ಯರಿಂದ ಶುಭಾಶಯ

ಅಹಮದಾಬಾದ್, ಮಾ.8– ದೇಶದ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳ ಕನಸ್ಸನ್ನು ಮತ್ತೊಮ್ಮೆ ನನಸು ಮಾಡಿದ ಭಾರತ ಟಿ20 ವಿಶ್ವಕಪ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ.

ಆ ಮೂಲಕ ತಾನು ಚುಟುಕು ಕ್ರಿಕೆಟ್‌ನಲ್ಲಿ ನಂ.1 ತಂಡ ಎಂಬುದನ್ನು ನಿರೂಪಿಸಿದ ಭಾರತ ತಂಡ 3ನೇ ಬಾರಿಗೆ ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಚುಟುಕು ಕ್ರಿಕೆಟ್ ಜಗತ್ತಿನ ಸಾಮ್ರಾಟನಾಗಿದೆ. ಮತ್ತೊಂದೆಡೆ ಚೊಚ್ಚಲ ಟ್ರೋಫಿ ಗೆಲ್ಲುವ ನ್ಯೂಜಿಲೆಂಡ್ ತಂಡದ ಕನಸು ಭಗ್ನವಾಗಿದೆ.

ಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ವಿರುದ್ಧ 96 ರನ್‌ಗಳಿಂದ ಗೆಲ್ಲುವ ಮೂಲಕ ಭಾರತ ತವರಿನಂಗಳದಲ್ಲಿ ಚೊಚ್ಚಲ ಟ್ರೋಫಿ ಗೆದ್ದ ತಂಡವಾಗಿ ಇತಿಹಾಸ ಬರೆದಿದ್ದು, ಸತತ ಎರಡನೇ ಬಾರಿಗೆ(2024, 2026) ಟಿ20 ವಿಶ್ವಕಪ್ ಗೆಲ್ಲುವ ಮೂಲಕ ಟ್ರೋಫಿಯನ್ನು ತನ್ನಲ್ಲೇ ಉಳಿಸಿಕೊಂಡ ಮೊದಲ ತಂಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇದರೊಂದಿಗೆ ಭಾರತ ಆಕರ್ಷಕ ಟ್ರೋಫಿ, 27.48 ಕೋಟಿ ರೂ. ನಗದು ಬಹುಮಾನದೊಂದಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದರೇ, ನ್ಯೂಜಿಲೆಂಡ್ 14.56 ಕೋಟಿ ರೂ. ನಗದು ಬಹುಮಾನದೊಂದಿಗೆ ರನ್ನರ್ ಅಪ್ ಸ್ಥಾನಕ್ಕೆ ತೃಪ್ತಿಪಟ್ಟುಕೊಂಡಿತು.

ಈ ಹಿಂದೆ ಎಂ.ಎಸ್.ಧೋನಿ ನಾಯಕತ್ವದಲ್ಲಿ 2007 ರಲ್ಲಿ ಚೊಚ್ಚಲ ಬಾರಿಗೆ ಟಿ20 ವಿಶ್ವಕಪ್ ಗೆದ್ದಿದ್ದ ಭಾರತ ತಂಡ, 2024ರಲ್ಲಿ ರೋಹಿತ್ ಶರ್ಮಾ ನಾಯಕತ್ವದಲ್ಲಿ ಎರಡನೇ ಬಾರಿಗೆ ಟ್ರೋಫಿ ಜಯಿಸಿತ್ತು. ಈಗ ಸೂರ್ಯ ಕುಮಾರ್ ಯಾದವ್ ನೇತೃತ್ವದಲ್ಲಿ ಟ್ರೋಫಿ ಗೆಲ್ಲುವ ಮೂಲಕ ಮೂರನೇ ಬಾರಿಗೆ ಚುಟುಕು ವಿಶ್ವಕಪ್ ಗೆದ್ದು ಬೀಗಿದೆ.

ಇಲ್ಲಿನ ನರೇಂದ್ರ ಮೋದಿ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಟಿ20 ವಿಶ್ವಕಪ್ ಫೈನಲ್ ಪಂದ್ಯದಲ್ಲಿ ಟಾಸ್ ಗೆದ್ದ ನ್ಯೂಜಿಲೆಂಡ್ ಬೌಲಿಂಗ್ ಆರಿಸಿಕೊಂಡು ■ 6ನೇ ಪುಟಕ್ಕೆ



ವಿಶ್ವಕಪ್ ಟ್ರೋಫಿಯೊಂದಿಗೆ ಟೀಂ ಇಂಡಿಯಾ ಆಟಗಾರರ ಸಂಭ್ರಮಾಚರಣೆ

ಐಸಿಸಿ ಪುರುಷರ ಟಿ20 ವಿಶ್ವಕಪ್ ಗೆದ್ದ ಭಾರತ ತಂಡಕ್ಕೆ ಅಭಿನಂದನೆಗಳು. ಈ ಗಮನಾರ್ಹ ಗೆಲುವು ಅಸಾಧಾರಣ ಕೌಶಲ್ಯ, ದೃಢನಿಶ್ಚಯ ಮತ್ತು ತಂಡದ ಕೆಲಸವನ್ನು ಪ್ರತಿಬಿಂಬಿಸುತ್ತದೆ. ಅವರು ಪಂದ್ಯಾವಳಿಯಾದ್ಯಂತ ಅತ್ಯುತ್ತಮ ಧೈರ್ಯವನ್ನು ತೋರಿಸಿದ್ದಾರೆ. ಈ ಗೆಲುವು ಪ್ರತಿಯೊಬ್ಬ ಭಾರತೀಯ ಹೃದಯವನ್ನು ಹೆಮ್ಮೆ ಮತ್ತು ಸಂತೋಷದಿಂದ ತುಂಬಿದೆ. ಟೀಮ್ ಇಂಡಿಯಾಗೆ ಅಭಿನಂದನೆಗಳು.



-ನರೇಂದ್ರ ಮೋದಿ, ಪ್ರಧಾನ ಮಂತ್ರಿ

:ವಿಶ್ವಕಪ್ ಹೈಲೈಟ್ಸ್:

ಫೈನಲ್ಸ್ ಪಂದ್ಯದ ಪಂದ್ಯಶ್ರೇಷ್ಠ: ಜಸ್‌ಪ್ರಿತ್ ಬುಮ್ರಾ (15ಕ್ಕೆ4)
ಸರಣಿ ಶ್ರೇಷ್ಠ ಆಟಗಾರ: ಸಂಜು ಸ್ಯಾಮ್ಸನ್ (321 ರನ್, 3 ಅರ್ಧಶತಕ)
ಅತ್ಯಧಿಕ ರನ್ ಗಳಿಸಿದ ಆಟಗಾರ: ಶಾಹಿಬ್‌ಜಾದಾ ಫರ್ಹಾನ್ (383 ರನ್)
ವೈಯಕ್ತಿಕ ಗರಿಷ್ಠ ರನ್: ಯುವರಾಜ್ ಸಮ್ರಾ (110 ರನ್)
ಅತ್ಯುತ್ತಮ ಸರಾಸರಿ: ಬ್ರಿಯಾನ್ ಬೆನೆಟ್ (146.00)
ಅತ್ಯುತ್ತಮ ಸ್ಟ್ರೈಕ್‌ರೇಟ್: ಫಿನ್ ಆಲೆನ್ (200.00)
ವೈಯಕ್ತಿಕ ಅತೀ ಹೆಚ್ಚು ಶತಕ: ಶಾಹಿಬ್‌ಜಾದಾ ಫರ್ಹಾನ್ (2 ಶತಕ)
ವೈಯಕ್ತಿಕ ಅತಿ ಹೆಚ್ಚು ಅರ್ಧಶತಕ: ಟೀಮ್ ಸೈಫರ್ಟ್ (4 ಅರ್ಧಶತಕ)
ವೈಯಕ್ತಿಕ ಅತಿ ಹೆಚ್ಚು ಬೌಂಡರಿ: ಶಾಹಿಬ್‌ಜಾದಾ ಫರ್ಹಾನ್ (37 ಫೋರ್ಸ್)
ವೈಯಕ್ತಿಕ ಅತಿ ಹೆಚ್ಚು ಸಿಕ್ಸರ್: ಸಂಜು ಸ್ಯಾಮ್ಸನ್ (24 ಸಿಕ್ಸರ್)
ಅತ್ಯಧಿಕ ವಿಕೆಟ್ ಕಿತ್ತ ಆಟಗಾರ: ಜಸ್‌ಪ್ರಿತ್ ಬುಮ್ರಾ (14 ವಿಕೆಟ್)
ಅತ್ಯುತ್ತಮ ಬೌಲಿಂಗ್ ಪ್ರದರ್ಶನ: ರೋಮರಿಯೋ ಶೇಫರ್ಡ್ (5–20)
ಪಂದ್ಯವೊಂದರಲ್ಲಿ 5 ವಿಕೆಟ್: ಜುನೈದ್ ಸಿದ್ಧಿಕಿ, ರೋಮರಿಯೋ ಶೇಫರ್ಡ್
ಅತ್ಯುತ್ತಮ ಬೌಲಿಂಗ್ ಎಕಾನಮಿ: ಜಸ್‌ಪ್ರಿತ್ ಬುಮ್ರಾ (6.21)
ಅತ್ಯುತ್ತಮ ಬೌಲಿಂಗ್ ಸ್ಟ್ರೈಕ್ ರೇಟ್: ಶ್ಯಾಡ್ಲಿ ವ್ಯಾನ್ ಶಾಲ್ಕ್‌ವಿಕ್ (6.85)

ವಿರಾಟ್ ದಾಖಲೆ ಮುರಿದ ಸಂಜು



ಅಹಮದಾಬಾದ್: 2026ರ ಟಿ20 ವಿಶ್ವಕಪ್ ಸಂಜು ಸ್ಯಾಮ್ಸನ್ ಪಾಲಿಗೆ ವರದಾನವಾಗಿದೆ. ರಿಂಕು ಅವರ ಅನುಪಸ್ಥಿತಿಯಲ್ಲಿ ತಂಡದಲ್ಲಿ ಸ್ಥಾನ ಪಡೆದ ಸಂಜು ಸತತ 3 ಅರ್ಧಶತಕಗಳನ್ನು ಬಾರಿಸುವ ಮೂಲಕ 12 ವರ್ಷಗಳ ಹಳೆಯ ವಿರಾಟ್ ಕೊಹ್ಲಿ ದಾಖಲೆ ಮುರಿದಿದ್ದಾರೆ. 2016ರಲ್ಲಿ ಕೊಹ್ಲಿ 6 ಇನ್ನಿಂಗ್ಸ್‌ನಲ್ಲಿ 106.33 ಸರಾಸರಿಯಲ್ಲಿ 319 ರನ್ ಬಾರಿಸಿದ್ದರು. ಇತ್ತ ಸಂಜು 5 ಇನ್ನಿಂಗ್ಸ್‌ನಲ್ಲಿ 80.25ರ ಸರಾಸರಿಯಲ್ಲಿ 321 ರನ್ ಚಚ್ಚಿ ವಿರಾಟ್ ಹೆಸರಲ್ಲಿದ್ದ ದಾಖಲೆಯನ್ನು ತಮ್ಮದಾಗಿಸಿಕೊಂಡರು.

ಮಧ್ಯಪ್ರಾಚ್ಯದಲ್ಲಿ ಹೆಚ್ಚಿದ ಯುದ್ಧದ ಕಿಚ್ಚು; ನಾಗರಿಕ ಮೂಲ ಸೌಕರ್ಯ, ತೈಲ ಸಂಸ್ಕರಣಾಗಾರದತ್ತ ಭೀಕರ ದಾಳಿ

● ಸರ್ವೋಚ್ಚ ನಾಯಕ ಖಮೇನಿ ಹತ್ಯೆಗೆ ಟ್ರಂಪ್ ಬೆಲೆ ತೆರಲೇಬೇಕು: ಇರಾನ್
● ನಮ್ಮ ನಾಗರಿಕರನ್ನು ಕೊಂದರೆ, ಬೆದರಿಕೆ ಹಾಕಿದರೆ ಗಂಭೀರ ಪರಿಣಾಮ: ಅಮೆರಿಕ

ನವದೆಹಲಿ: ಮಧ್ಯಪ್ರಾಚ್ಯದಲ್ಲಿ ಯುದ್ಧದ ಕಿಚ್ಚು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದ್ದು, ಅಮೆರಿಕ ಮತ್ತು ಇಸ್ರೇಲ್ ನಿರಂತರ ದಾಳಿಗೆ ಇರಾನ್ ಕೂಡ ಎದಿರೇಟು ನೀಡುತ್ತಿದೆ.

ಇರಾನ್‌ನ ನಾಗರಿಕ ಮೂಲಸೌಕರ್ಯ ಹಾಗೂ ಕೈಗಾರಿಕಾ ತಾಣಗಳನ್ನು ಗುರಿಯಾಗಿಸಿಕೊಂಡು ಅಮೆರಿಕ ಹಾಗೂ ಇಸ್ರೇಲ್ ದಾಳಿ ಮುಂದುವರೆಸಿರುವುದರಿಂದ ಯುದ್ಧವು ಸಂಪೂರ್ಣವಾಗಿ ಹೊಸ ಹಂತಕ್ಕೆ ತಲುಪುವ ಸಾಧ್ಯತೆ ದಟ್ಟವಾಗಿದೆ. ಪ್ರತಿದಾಳಿಯನ್ನು ತೀವ್ರಗೊಳಿಸಿರುವ ಇರಾನ್, ತನ್ನ ಸರ್ವೋಚ್ಚ ನಾಯಕರಾಗಿದ್ದ ಆಯತೊಲ್ಲಾ ಅಲಿ ಖಮೇನಿ ಅವರನ್ನು ಹತ್ಯೆಗೈದಿರುವುದಕ್ಕೆ ಅಮೆರಿಕ ಅಧ್ಯಕ್ಷ ಟ್ರಂಪ್ ತಕ್ಕ ಬೆಲೆ ತೆರಬೇಕಾಗುತ್ತದೆ ಎಂದು ಗುಡುಗಿದೆ. ಮತ್ತೊಂದೆಡೆ ನಮ್ಮ ನಾಗರಿಕರನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಯಾವುದೇ ದೇಶ ಗಂಭೀರ



ಪರಿಣಾಮ ಎದುರಿಸಬೇಕಾಗುತ್ತದೆ ಎಂದು ಅಮೆರಿಕ ಎಚ್ಚರಿಕೆ ನೀಡಿದೆ. ಒಂಬತ್ತನೇ ದಿನವೂ ಇಸ್ರೇಲ್–ಇರಾನ್ ನಡುವೆ ಭೀಕರ ವೈಮಾನಿಕ ದಾಳಿ ನಡೆದಿದೆ. ಇಸ್ರೇಲ್ ರಕ್ಷಣಾ ಪಡೆಗಳು ಇರಾನ್‌ನ ಪ್ರಮುಖ ನಗರವಾದ ಇಸ್ಫಹಾನ್ ಮೇಲೆ ದಾಳಿ ನಡೆಸಿದ್ದು, ಇರಾನ್ ವಾಯು ಪಡೆಯ ಹೆಮ್ಮೆಯ ಎಫ್–14 ಯುದ್ಧ ವಿಮಾನಗಳನ್ನು ಧ್ವಂಸಗೊಳಿಸಿರುವುದಾಗಿ ಘೋಷಿಸಿವೆ. ಇಸ್ರೇಲ್ ಗುಪ್ತಚರ ಸಂಸ್ಥೆಗಳ ನಿಖರ ಮಾಹಿತಿಯ ಮೇರೆಗೆ ಈ ದಾಳಿ ನಡೆದಿದೆ ಎನ್ನಲಾಗಿದೆ.

ಇಸ್ರೇಲ್‌ನ 80ಕ್ಕೂ ಹೆಚ್ಚು ಅತ್ಯಾಧುನಿಕ ಯುದ್ಧ ವಿಮಾನಗಳು ಇರಾನ್‌ನ ಇಸ್ಫಹಾನ್ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಗುರಿಯಾಗಿಸಿಕೊಂಡು ನಡೆಸಿದ ಕಾರ್ಯಾಚರಣೆಯಲ್ಲಿ ಇಸ್ರೇಲ್ ವಿಮಾನಗಳಿಗೆ ಅಡ್ಡಿಯಾಗಬಹುದಾದ ಇರಾನ್‌ನ ರೇಡಾರ್ ವ್ಯವಸ್ಥೆ ಮತ್ತು ಅತ್ಯಾಧುನಿಕ ವಾಯು ರಕ್ಷಣಾ ಬ್ಯಾಟರಿಗಳನ್ನು ಕೂಡ ಸಂಪೂರ್ಣವಾಗಿ ನಾಶಪಡಿಸಲಾಗಿದೆ ಎಂದು ವರದಿಯಾಗಿದೆ. ■ 6ನೇ ಪುಟಕ್ಕೆ

ಕೆಎಸ್‌ಐಸಿ ಕಾರ್ಖಾನೆ ಮುಚ್ಚುವುದಿಲ್ಲ

ತಮ್ಮನ್ನು ಭೇಟಿ ಮಾಡಿದ ಪ್ರಮೋದಾದೇವಿ ಒಡೆಯರ್‌ಗೆ ಸಚಿವ ಮಹದೇವಪ್ಪ ಭರವಸೆ

ಮೈಸೂರು, ಮಾ.8(ಬಿಎಲ್‌ಯು)– ಮೈಸೂರಿನ ತಿ.ನರಸೀಪುರದ ಭೈರಾಪುರದಲ್ಲಿರುವ ಕೆಎಸ್‌ಐಸಿ ರೇಷ್ಮೆ ನೂಲು ನೇಯ್ಗೆ ಕಾರ್ಖಾನೆಯನ್ನು ಮುಚ್ಚುವುದಿಲ್ಲ ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ. ಹೆಚ್.ಸಿ. ಮಹದೇವಪ್ಪ ಸ್ಪಷ್ಟ ಭರವಸೆ ನೀಡಿದ್ದಾರೆ ಎಂದು ಮೈಸೂರು ರಾಜವಂಶಸ್ಥರಾದ ಪ್ರಮೋದಾ ದೇವಿ ಒಡೆಯರ್ ಅವರು ತಿಳಿಸಿದ್ದಾರೆ.



ಪ್ರಮೋದಾ ದೇವಿ

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಕಾರ್ಖಾನೆ ಮುಚ್ಚುತ್ತಾರೆಂಬ ಸುದ್ದಿಯ ಹಿನ್ನೆಲೆಯಲ್ಲಿ ಮೈಸೂರು ಹಾಗೂ ಬೆಂಗಳೂರಿನ ಕೆಲವು ವರ್ಗದವರು ನನ್ನ ಬಳಿ ತಮ್ಮ ಕಳವಳವನ್ನು ವ್ಯಕ್ತಪಡಿಸಿದರು. ಈ ಹಿನ್ನೆಲೆಯಲ್ಲಿ ಡಾ. ಮಹದೇವಪ್ಪ ಅವರನ್ನು ನಾನು ಭೇಟಿ ಮಾಡಿದ್ದೆ ಎಂದು ಹೇಳಿದ್ದಾರೆ. ಮೈಸೂರು ಮಹಾರಾಜರಾದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಸ್ಥಾಪಿಸಿದ ಈ ಕಾರ್ಖಾನೆಯಲ್ಲಿ ತಯಾರಾಗುವ ಮೈಸೂರು ರೇಷ್ಮೆ ತನ್ನ ಸಾಂಪ್ರದಾಯಿಕತೆಗೆ ಹೆಸರಾಗಿದೆ. ಅಲ್ಲದೆ ಮೈಸೂರು ವಿನ್ಯಾಸದ ಸೀರೆಗಳು ಹಾಗೂ ಪಂಚೆ (ಧೋತಿ)ಗಳಿಗೆ ಪ್ರಖ್ಯಾತಿಯಾಗಿದೆ. ಜೊತೆಗೆ ಮೈಸೂರು ರೇಷ್ಮೆಗೆ ಭೌಗೋಳಿಕ ಸೂಚನೆ (ಜಿಐ) ಟ್ಯಾಗ್ ನೀಡಲಾಗಿದೆ. ಇದು ಮೈಸೂರು ರೇಷ್ಮೆಯ ವೈಶಿಷ್ಟತೆ ಹಾಗೂ ಗುಣಮಟ್ಟವನ್ನು ಪ್ರಮಾಣಿಕರಿಸುತ್ತದೆ ಎಂದು ಇದರ ಮಹತ್ವವನ್ನು ಪ್ರಮೋದಾ ದೇವಿ ಒಡೆಯರ್ ಅವರು ವಿವರಿಸಿದ್ದಾರೆ.



ಮಹದೇವಪ್ಪ

ಮೈಸೂರು ರೇಷ್ಮೆ ಭಾರತದ ಶ್ರೀಮಂತ ಜವಳಿ ಪರಂಪರೆಗೆ ಸಾಕ್ಷಿಯಾಗಿದೆ. ಅದರ ಸೊಬಗು, ಕರಕುಶಲತೆ, ಅನನ್ಯತೆ ಹಾಗೂ ಆಳವಾದ ಐತಿಹಾಸಿಕ, ಸಾಂಸ್ಕೃತಿಕ ಮಹತ್ವ ಹೊಂದಿದೆ. ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಪಾಲಿಸಬೇಕಾದ ಪರಂಪರೆಯಾಗಿ ರವಾನಿಸಲಾಗಿದೆ. ಜಾಗತಿಕ ಫ್ಯಾಷನ್ ■ 6ನೇ ಪುಟಕ್ಕೆ

ಮೈಸೂರಲ್ಲಿ ಮಿನಿ ದಸರಾ ಮಾದರಿ ಸ್ವಚ್ಛತಾ ರೋಡ್ ಶೋ

■ ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ, ಸ್ವಚ್ಛತೆ ನಮ್ಮ ಕರ್ತವ್ಯ, ಸ್ವಚ್ಛ ನಗರ–ಸುಂದರ ನಗರ, ಮಾಲಿನ್ಯ ಮುಕ್ತ ಪರಿಸರ ಆರೋಗ್ಯಕರ ಭಾರತ ಸಂದೇಶ ಸಾರಿದ ಸ್ವಚ್ಛತಾ ಪ್ರೇಮಿಗಳು
■ ಗಮನ ಸೆಳೆದ ವಿಂಟೇಜ್ ಕಾರುಗಳು, ಸ್ವಚ್ಛತಾ ರಾಯಬಾರಿಗಳು, ಸ್ವಚ್ಛತಾ ಎಕ್ಸ್‌ಪೋ



ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮದೊಂದಿಗೆ ನಗರ ಪಾಲಿಕೆ, ನಗರಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ 'ಸ್ವಚ್ಛ ಸರ್ವೇಕ್ಷಣೆ–2025–26 ರ ಅಂಗವಾಗಿ ಭಾನುವಾರ 'ರಾಜ್ಯಮಟ್ಟದ ಬೃಹತ್ ಸ್ವಚ್ಛತಾ ರೋಡ್ ಶೋ' ನಡೆಯಿತು.



ಸಾಂಸ್ಕೃತಿಕ ನಗರಿ ಮೈಸೂರಿನ ಸ್ವಚ್ಛತೆ ಕಾಪಾಡುತ್ತಿರುವ ಸ್ವಚ್ಛತಾ ಸಿಪಾಯಿಗಳಾದ ಪೌರಕಾರ್ಮಿಕರನ್ನು ಅಭಿನಂದಿಸುತ್ತೇನೆ. ಹಾಗೆಯೇ ಮೈಸೂರಿನ ಸ್ವಚ್ಛತೆಯ ಬಗ್ಗೆ ಪ್ರತಿಯೊಬ್ಬರು ಕಾಳಜಿ ವಹಿಸಬೇಕು. ಸಾರ್ವಜನಿಕ ಪ್ರದೇಶದಲ್ಲಿ ಎಲ್ಲೆಂದರಲ್ಲಿ ಉಗುಳುವುದು, ಕಸ ಹಾಕುವುದು, ಸಾಕು ಪ್ರಾಣಿಗಳಿಂದ ಮಲ–ಮೂತ್ರ ವಿಸರ್ಜನೆ ಮಾಡಿಸುವ ಪ್ರವೃತ್ತಿಯನ್ನು ತೊರೆಯಬೇಕು. ಶಿಸ್ತು ರೂಢಿಸಿಕೊಂಡರೆ ಮೈಸೂರು ನಗರ ಕೂಡ ಸುಂದರವಾಗುತ್ತದೆ.

- ಡಾ.ಹೆಚ್.ಸಿ.ಮಹದೇವಪ್ಪ, ಜಿಲ್ಲಾ ಉಸ್ತುವಾರಿ ಸಚಿವ

ಮೈಸೂರು, ಮಾ.8(ಎಂಕೆ)– ವಿಶ್ವ ಪ್ರಸಿದ್ಧ ಸಾಂಸ್ಕೃತಿಕ ನಗರಿ ಮೈಸೂರಿನ ಅರಮನೆ ಅಂಗಳದಲ್ಲಿ 'ಸ್ವಚ್ಛ ಮೈಸೂರು–ನನ್ನಿಂದ ಆರಂಭ' ಎಂಬ ಧ್ಯೇಯವಾಕ್ಯದೊಂದಿಗೆ 'ರಾಜ್ಯ ಮಟ್ಟದ ಬೃಹತ್ ಸ್ವಚ್ಛತಾ ರೋಡ್ ಶೋ' ಮೂಲಕ ಮೈಸೂರನ್ನು ದೇಶದ ಮಾದರಿ ಸ್ವಚ್ಛ ಮತ್ತು ಹಸಿರುಮಯ ನಗರವನ್ನಾಗಿಸುವ ಸಂಕಲ್ಪ ಮಾಡಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಭ್ರಮದೊಂದಿಗೆ ನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ 'ಸ್ವಚ್ಛ ಸರ್ವೇಕ್ಷಣೆ–2025–26 ರ ಅಂಗವಾಗಿ ಭಾನುವಾರ ಹಮ್ಮಿಕೊಂಡಿದ್ದ 'ಸ್ವಚ್ಛತಾ ರೋಡ್ ಶೋ'ನಲ್ಲಿ ಹಸಿರು ಸೀರೆಯನ್ನುಟ್ಟು ಕಂಗೊಳಿಸುತ್ತಾ ಹೆಜ್ಜೆ ಹಾಕಿದ ಮಹಿಳಾ ಪೌರಕಾರ್ಮಿಕರು, ಸಾಂಸ್ಕೃತಿಕ ಕಲಾ ತಂಡಗಳ ನಡುವೆ 'ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ', 'ಸ್ವಚ್ಛತೆ ನಮ್ಮ ಕರ್ತವ್ಯ', 'ಸ್ವಚ್ಛ ನಗರ–ಸುಂದರ ನಗರ', 'ಮಾಲಿನ್ಯ ಮುಕ್ತ ಪರಿಸರ ಆರೋಗ್ಯಕರ ಭಾರತ' ಎಂಬಿತ್ಯಾದಿ ಜಾಗೃತಿ ಸಂದೇಶಗಳ ಫಲಕಗಳನ್ಹಿಡಿದು ಸ್ವಚ್ಛತಾ ಸಂದೇಶ ಸಾರಿದರು.

ಮಿನಿ ದಸರಾ ಮಾದರಿಯಲ್ಲಿ ಕಳೆಗಟ್ಟಿದ್ದ 'ಸ್ವಚ್ಛತಾ ರೋಡ್ ಶೋ' ಅರಮನೆ ಆವರಣದಿಂದ ಆರಂಭವಾಗಿ ಡಿ.ದೇವರಾಜ ಅರಸು ರಸ್ತೆ ಮಾರ್ಗವಾಗಿ ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂದೆ ಸಾಗಿ, ಕೆ.ಆರ್ ವೃತ್ತ, ಡಿ.ದೇವರಾಜು ಅರಸು ರಸ್ತೆ ಮಾರ್ಗವಾಗಿ, ಜೆಎಲ್‌ಬಿ ರಸ್ತೆ, ಮುಡಾ ಕಚೇರಿ ಮುಂದೆ ಸಾಗಿ, ಓವೆಲ್ಸ್ ಮೈದಾನ, ಬುಲೇವಾರ್ಡ್ ರಸ್ತೆ ಮೂಲಕ ಮಹಾರಾಜ ಕಾಲೇಜು ಮೈದಾನದಲ್ಲಿ ಸಂಪನ್ನಗೊಂಡಿತು.

3 ಸಾವಿರಕ್ಕೂ ಹೆಚ್ಚು ಪೌರ ಕಾರ್ಮಿಕರು ಹಾಗೂ ವಿವಿಧ ಸ್ವಚ್ಛತಾ ಸಂಘ–ಸಂಸ್ಥೆಗಳ ಸ್ವಯಂ ಸೇವಕರ ಜೊತೆಗೆ ಕಂಸಾಳೆ, ಕೊಂಬುಕಹಳೆ, ಚಿಲಿಪಿಲಿ ಗೊಂಬೆ, ಡೊಳ್ಳುಕುಣಿತ, ಲಂಬಾಣಿ ನೃತ್ಯ ಸೇರಿದಂತೆ ಹತ್ತಾರು ಸಾಂಸ್ಕೃತಿಕ ಕಲಾತಂಡಗಳು ಸಾಂಸ್ಕೃತಿಕವಾಗಿ ಆಕರ್ಷಿಸಿದರೆ, ಎನ್‌ಸಿಸಿ ಕೆಡೆಟ್‌ಗಳು ಹಾಗೂ ಏರ್ ಫೋರ್ಸ್, ನೇವಿ ಸಂಸ್ಥೆ ವಿದ್ಯಾರ್ಥಿಗಳ ಶಿಸ್ತಿನ ಹೆಜ್ಜೆ ಸಾರ್ವಜನಿಕರ ಗಮನ ಸೆಳೆಯಿತು.

ಗಮನ ಸೆಳೆದ ವಿಂಟೇಜ್ ಕಾರುಗಳು: ಸ್ವಚ್ಛತಾ ರೋಡ್ ಶೋನಲ್ಲಿ ಸಾಗಿದ 1980ರ ಮರ್ಸಿಡಿಸ್ ಡ್ಲ್ಯೂ123, 1963ರ ವೋಕ್ಸ್‌ವ್ಯಾಗನ್ ಬೀಟಲ್, 1995ರ ಹಿಂದೂಸ್ತಾನ್ ಮೋಟಾರ್ಸ್ ಕಾಂಟೆಸ್ಸಾ, 2001 ಹಿಂದೂಸ್ತಾನ್ ಮೋಟಾರ್ಸ್ ಕಾಂಟೆಸ್ಸಾ, 1971ರ ಜೀಪ್ ಸಿಜೆ3ಬಿ, 1988ರ ಪ್ರೀಮಿಯರ್ ಪದ್ಮಿನಿ, 1986 ಮಾರುತಿ ಸುಜುಕಿ ಎಸ್‌ಎಸ್80, 1995ರ ಮರ್ಸಿಡಿಸ್ ಬೆಂಜ್ ಡ್ಲ್ಯೂ124, ಹಾಗೂ 1977ರ ಅಂಬಾಸಿಡರ್ ಮಾರ್ಕ್ 3 ವಿಂಟೇಜ್ ಕಾರುಗಳು ನೋಡುಗರ ಗಮನ ಸೆಳೆದವು. ಜೊತೆಗೆ ರಾಯಲ್ ಎನ್‌ಫೀಲ್ಡ್, ಹೋಂಡಾ ಸೇರಿದಂತೆ ಐಷಾರಾಮಿ ಬೈಕ್‌ಗಳನ್ನೇರಿದ ಮಹಿಳಾ ರೈಡರ್‌ಗಳ ಬೈಕ್ ರ್‍ಯಾಲಿ ವಿಶೇಷವಾಗಿತ್ತು.

ಸ್ವಚ್ಛತಾ ರಾಯಭಾರಿಗಳು ಭಾಗಿ: ಸ್ವಚ್ಛ ಸರ್ವೇಕ್ಷಣೆ–2026ರ ರಾಯಭಾರಿಗಳಾದ ಖ್ಯಾತ ಶಿಲ್ಪಿ ಅರುಣ್ ಯೋಗಿರಾಜ್, ಗಾಯಕಿ ಅನನ್ಯ ಭಟ್, ಯುವ ಗಾಯಕ ಜಸ್ಕರಣ್ ಸಿಂಗ್, ರ್‍ಯಾಪರ್ ಅಲೋಕ್ ಹಾಗೂ ಬಿಗ್‌ಬಾಸ್ ರಿಯಾಲಿಟಿ ಶೋ ಖ್ಯಾತಿಯ ಸೂರಜ್ ಸಿಂಗ್ ತೆರೆದ ಜೀಪ್‌ನಲ್ಲಿ ಅಭಿಮಾನಿಗಳತ್ತ ಕೈ ಬೀಸುತ್ತಾ 'ಮೈಸೂರನ್ನು ಮತ್ತೊಮ್ಮೆ ದೇಶದ ನಂ.1 ಸ್ವಚ್ಛ ನಗರವನ್ನಾಗಿಸುವಂತೆ ಕೋರಿದರು.

ಸ್ವಚ್ಛತಾ ಎಕ್ಸ್‌ಪೋ: ಸ್ವಚ್ಛತಾ ರೋಡ್ ಶೋ ಬಳಿಕ ಮಹಾರಾಜ ಕಾಲೇಜು ಮೈದಾನದಲ್ಲಿ ಸ್ವಚ್ಛತಾ ಎಕ್ಸ್‌ಪೋ ಆಯೋಜಿಸಲಾಗಿತ್ತು. ಸ್ವಚ್ಛತಾ ಕಾರ್ಯಚಟುವಟಿಕೆಗಳಿಗೆ ಬಳಕೆ ಮಾಡುವ ಯಂತ್ರೋಪಕರಣಗಳು, ಸ್ವಚ್ಛತಾ ಸಲಕರಣೆಗಳನ್ನು ಪ್ರದರ್ಶಿಸಲಾಯಿತು. ಹಾಗೆಯೇ ಗಾಯಕರಾದ ಅನನ್ಯ ಭಟ್, ಜಸ್ಕರಣ್ ಸಿಂಗ್ ಮತ್ತು ರ್‍ಯಾಪರ್ ಅಲೋಕ್ ಸಂಗೀತ ಕಾರ್ಯಕ್ರಮ ನೀಡುವ ಮೂಲಕ ನೆರೆದಿದ್ದವರನ್ನು ರಂಜಿಸಿದರು. ■ 6ನೇ ಪುಟಕ್ಕೆ

ಇಂದಿನಿಂದ ವರಕೋಡು ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ

ಸಿಎಂ ಸಿದ್ದರಾಮಯ್ಯರಿಂದ ಉದ್ಘಾಟನೆ



ಮೈಸೂರು,ಮಾ.8(ಎಂಟಿವೈ)– ಮೈಸೂರು ತಾಲೂಕು, ವರುಣಾ ಹೋಬಳಿಯ ವರಕೋಡಿನ ಶ್ರೀ ಬೀರೇ ಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣೆ, ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಪೂಜಾ ಮಹೋತ್ಸವವು ಮಾ.9ರಿಂದ 14ರವರೆಗೆ ನಡೆಯಲಿದೆ.

ಮಾ.9ರಂದು ಬೆಳಗ್ಗೆ ವರಕೋಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ, ಹೊಸಹುಂಡಿ ಗ್ರಾಮಗಳಲ್ಲಿರುವ ಎಲ್ಲಾ ಮೂಲ ದೇವಸ್ಥಾನಗಳಲ್ಲಿ ಹೋಮ ನಡೆಯಲಿದೆ. ಮಾ.10ರಂದು ಗ್ರಾಮದ ಬನ್ನಿಮಹಾಕಾಳೇಶ್ವರಿ ದೇವಾಲಯದಲ್ಲಿ ಹೋಮ ನಡೆಯಲಿದೆ.

ಮಾ.11ರಂದು ಸ್ಥಳಶುದ್ಧಿ, ಗಣಪತಿ ಹೋಮ, ಧ್ವಜಾರೋಹಣ, ಮೂಲ ದೇವತಾ ಪ್ರಾರ್ಥನೆ, ಶ್ರೀ ಬೀರೇಶ್ವರ ಸ್ವಾಮಿ ಕೊಳ ಕಲ್ಯಾಣಿ ಹೋಮ, ಮಹಾದ್ವಾರ ಪೂಜೆ, ದೀಪಪೂಜೆ, ಕುಂಕುಮಾರ್ಚನೆ, ದುದ್ದ ಗೆರೆ, ಸಿದ್ದರಾಮನಹುಂಡಿ, ತಾಯೂರು, ಕಾಳಿಸಿದ್ದನಹುಂಡಿ, ಬಿದರಹಳ್ಳಿಹುಂಡಿ, ಹಾಗೂ ಅಹಲ್ಯ ದೇವರ ಗಡಿಕೂಟಗಳ ಆಗಮನ, ಮಹಾಮಂಗಳಾರತಿ, ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 7ಗಂಟೆಗೆ ವರಕೋಡಿನಲ್ಲಿ ಕಲ್ಯಾಣಿಯಿಂದ ದೇವಸ್ಥಾನದವರೆಗೂ ಮಹಿಳೆಯರಿಂದ ದೀಪೋತ್ಸವ ನಡೆಯಲಿದೆ.

ಮಾ.12ರಂದು ಬೆಳಗ್ಗೆ 7.30ರಿಂದ ಗಣಪತಿ ಪೂಜೆ, ನವಗ್ರಹ ಹೋಮ, ಗೋಪೂಜೆ, ಯೋಗಶಾಲಾ ಪ್ರವೇಶ, ದೀಪಸ್ಥಂಭ ಪೂಜೆ, ಪಂಚಾಮೃತ ಅಭಿಷೇಕ, 101 ಹೆಣ್ಣು ಮಕ್ಕಳಿಂದ ದೇವರ ಪೂರ್ಣ ಕುಂಭ ಮೆರವಣಿಗೆಯು ವರಕೋಡು ಕಲ್ಯಾಣಿಯಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸಾಗಿ ಶ್ರೀ ಬೀರೇಶ್ವರ ದೇವಾಲಯ ತಲುಪಲಿದೆ.

ಮೆರವಣಿಗೆಯಲ್ಲಿ ನಂದಿಧ್ವಜ ಕುಣಿತ, ವೀರಗಾಸೆ ಕುಣಿತ, ವಾದ್ಯ ಮೇಳ, ತಮಟೆವಾದ್ಯ, ಕಂಸಾಳೆ ಕಲಾತಂಡ, ಸೇರಿದಂತೆ ವಿವಿಧ ಜಾನಪದ ಕಲಾ ತಂಡಗಳು ಭಾಗವಹಿಸಲಿವೆ. ರಾತ್ರಿ 10 ಗಂಟೆಗೆ ಮೂಡಲ ಹುಂಡಿ ಕಲಾ ತಂಡದಿಂದ ದಕ್ಷಯಜ್ಞ ಅಥವಾ ಭೃಗು ಮುನಿಯ ಗರ್ವಭಂಗ ಪೌರಾಣಿಕ ನಾಟಕ ಏರ್ಪಡಿಸಲಾಗಿದೆ.

ಮಾ.13ರಂದು ಬೆಳಗ್ಗೆ 5.10ರಿಂದ 6.10ರ ಬ್ರಾಹ್ಮಿ ಮುಹೂರ್ತದಲ್ಲಿ ಶ್ರೀ ಬೀರೇಶ್ವರಸ್ವಾಮಿಯ ದೇವಸ್ಥಾನದಲ್ಲಿ ಲಿಂಗ ಮತ್ತು ಕಳಸ ಪ್ರತಿಷ್ಠಾಪನೆ, ಕುಂಭಾಭಿಷೇಕ, ಮಹಾಮಂಗಳಾರತಿ ಕಾರ್ಯಕ್ರಮ ಹಾಗೂ ಮಧ್ಯಾಹ್ನ 1 ಗಂಟೆಗೆ ಮಹಾ ಪ್ರಸಾದ ವಿನಿಯೋಗ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮದಲ್ಲಿ ಕಾಗಿನೆಲೆ ಮಹಾಸಂಸ್ಥಾನ ಮಠದ ಶ್ರೀ ನಿರಂಜನಾನಂದಪುರಿ ಮಹಾಸ್ವಾಮೀಜಿ, ಕೆ.ಆರ್. ನಗರ ಕಾಗಿನೆಲೆ ಶಾಖಾಮಠದ ಶ್ರೀ ಶಿವಾನಂದಪುರಿ ಸ್ವಾಮೀಜಿ, ವರಕೋಡು ಗಡಿ ಗುರು ಮಠದ ಗುರುಗಳಾದ ಗುರುಸ್ವಾಮಿ, ಗುರುದೇವು ಹಾಗೂ ವರಕೋಡು ಗಡಿಯ ಗುಡ್ಡಪ್ಪಂದಿರು ದಿವ್ಯಸಾನಿಧ್ಯ ವಹಿಸಲಿದ್ದಾರೆ.

ದೇವಸ್ಥಾನದ ಉದ್ಘಾಟನಾ ಕಾರ್ಯಕ್ರಮವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ನೆರವೇರಿಸಲಿದ್ದು, ಈ ವೇಳೆ ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯರು, ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷ ಡಾ.ಯತೀಂದ್ರ ಸಿದ್ದರಾಮಯ್ಯ, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಭೈರತಿ ಸುರೇಶ್, ಸಂಸದ ಸುನೀಲ್ ಬೋಸ್, ಮಾಜಿ ಸಚಿವ ಹೆಚ್.ಎಂ.ರೇವಣ್ಣ, ಶಾಸಕರಾದ ಡಿ.ರವಿಶಂಕರ್, ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ಸೇರಿದಂತೆ ಪ್ರಮುಖ ರಾಜಕೀಯ ಗಣ್ಯರು ಭಾಗಿಯಾಗಲಿದ್ದಾರೆ. ಮಾ.14ರಂದು ಬೆಳಗ್ಗೆ 9 ಗಂಟೆಗೆ ಗಡಿ ದೇವರುಗಳ ಕೂಟ ವಿರ್ಸಜನೆ ಕಾರ್ಯಕ್ರಮ ನಡೆಯಲಿದೆ.

ರಾಜ್ಯ ಬಜೆಟ್‌ನಲ್ಲಿ ಕನ್ನಡ ಶಾಲೆಗಳ ಕಡೆಗಣನೆ ಆರೋಪ

ಮಾ.12, ರಾಜ್ಯದಲ್ಲಿ ಕನ್ನಡ ಶಾಲೆಗಳ ಬಂದ್

ಮೈಸೂರು, ಮಾ.8(ಜಿಎ)–ರಾಜ್ಯ ಬಜೆಟ್‌ನಲ್ಲಿ ಕನ್ನಡ ಶಾಲೆಗಳ ಕಡೆಗಣನೆ ಮಾಡಲಾಗಿದೆ ಎಂದು ಆರೋಪಿಸಿ ಮಾ.12ರಂದು ಕನ್ನಡ ಶಾಲೆಗಳ ಬಂದ್‌ಗೆ ಕರೆ ನೀಡುತ್ತೇವೆ ಎಂದು ವಾಟಾಳ್ ನಾಗರಾಜ್ ತಿಳಿಸಿದ್ದಾರೆ.

ಬಜೆಟ್‌ನಲ್ಲಿ ಕನ್ನಡ ಶಾಲೆಗಳ ಕಡೆಗಣನೆ ವಿರೋಧಿಸಿ, ಮೈಸೂರಿನ ಹಾರ್ಡಿಂಜ್ ವೃತ್ತದಲ್ಲಿ ಪ್ರತಿಭಟನೆ ನಡೆಸಿ, ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಮಾ.12ರಂದು ರಾಜ್ಯಾದ್ಯಂತ ಇರುವ ಕನ್ನಡ ಶಾಲೆಗಳ ಬಂದ್ ಮಾಡುತ್ತೇವೆ. ಇಂಗ್ಲಿಷ್ ಶಾಲೆಗಳಿಗೆ 3,900 ಕೋಟಿ ಕೊಟ್ಟಿದ್ದೀರಿ. ಕನ್ನಡ ಶಾಲೆಗಳ ಅಭಿವೃದ್ಧಿಗೆ ನಯಾ ಪೈಸೆ ಘೋಷಣೆ ಮಾಡಿಲ್ಲ ಯಾಕೆ ಎಂದು ಪ್ರಶ್ನಿಸಿದರು.

ಸಿದ್ದರಾಮಯ್ಯ ಕನ್ನಡವನ್ನು ನಿರ್ಲಕ್ಷ್ಯ ಮಾಡಿದ್ದಾರೆ. ಖಾಸಗಿ ಶಾಲೆಗಳಲ್ಲಿ ಕನ್ನಡ ಮಾಧ್ಯಮವೇ ಇಲ್ಲ. ಕನ್ನಡ ಮಾಧ್ಯಮ ಇರುವುದು ಸರ್ಕಾರಿ ಶಾಲೆಗಳಲ್ಲಿ. ಸರ್ಕಾರಿ ಶಾಲೆ ಅಭಿವೃದ್ಧಿಗೆ ವಿಶೇಷ ಕಾರ್ಯಕ್ರಮಗಳನ್ನು ಕೊಡಬೇಕಿತ್ತು ಸರ್ಕಾರದ ಧೋರಣೆಯನ್ನು ಖಂಡಿಸುತ್ತೇನೆ. ಈ ವಿಚಾರವನ್ನು ಮುಂದಿಟ್ಟುಕೊಂಡು ಮಾ.12ರಂದು ಎಲ್ಲಾ ಕನ್ನಡ ಶಾಲೆಗಳ ಬಂದ್ ಮಾಡಲು ವಿವಿಧ ಕನ್ನಡ ಪರ ಸಂಘಟನೆಗಳು ಕೈ ಜೋಡಿಸಬೇಕು ಎಂದರು.



ರಾಜ್ಯ ಬಜೆಟ್‌ನಲ್ಲಿ ಕನ್ನಡ ಶಾಲೆಗಳ ಕಡೆಗಣನೆ ಖಂಡಿಸಿ ಭಾನುವಾರ ಹಾರ್ಡಿಂಜ್ ವೃತ್ತದಲ್ಲಿ ವಾಟಳ್ ನಾಗರಾಜ್ ಪ್ರತಿಭಟನೆ ನಡೆಸಿದರು.

ಟಿ.ನರಸೀಪುರ ಸಿಲ್ಕ್ ಕಾರ್ಖಾನೆ ಸ್ಥಳದಲ್ಲಿ ಕ್ರೀಡಾಂಗಣ ನಿರ್ಮಾಣ ವಿಚಾರವಾಗಿ ಪ್ರತಿಕ್ರಿಯಿಸಿ, ಅದು ರಾಜ ಮಹಾರಾಜರ ಕಾಲದ ಕಾರ್ಖಾನೆ. ನೂರಾರು ವರ್ಷಗಳ ಇತಿಹಾಸವಿರುವ ಕಾರ್ಖಾನೆ. ಕ್ರೀಡಾಂಗಣ ಮಾಡಲಿಕ್ಕೆ ಅದೇ ಜಾಗ ಬೇಕಾ ನಿಮಗೆ? ಬೇರೆ ಕಡೆ ಕ್ರೀಡಾಂಗಣ ಮಾಡಿ ಯಾರು ಬೇಡ ಅಂತಾರೆ. ಅದೇ ಜಾಗ ಯಾಕೆ ಬೇಕು ನಿಮಗೆ. ಏನಾದರೂ ಅಲ್ಲೇ ಮಾಡುತ್ತೇವೆ ಎಂದರೆ ದೊಡ್ಡ ಮಟ್ಟದ ಹೋರಾಟ ಮಾಡಬೇಕಾಗುತ್ತದೆ. ಟಿ.ನರಸೀಪುರ ರೇಷ್ಮೆ ಕಾರ್ಖಾನೆ ಬಳಿ ಕ್ರೀಡಾಂಗಣಕ್ಕೆ ಆಕ್ಷೇಪ ವ್ಯಕ್ತಪಡಿಸಿದರು.

ಮುಖ್ಯಮಂತ್ರಿ ಬದಲಾವಣೆ ವಿಚಾರ ಪ್ರತಿಕ್ರಿಯಿಸಿ, ಸಿದ್ದರಾಮಯ್ಯ ಇನ್ನೂ ಹತ್ತು ವರ್ಷ ಮುಖ್ಯಮಂತ್ರಿಯಾಗಿರುತ್ತಾರೆ. ಅವರನ್ನು ಬಿಟ್ಟರೆ ಉತ್ತಮ ವ್ಯಕ್ತಿ ಯಾರಿದ್ದಾರೆ. ಬಿಜೆಪಿ, ಜೆಡಿಎಸ್‌ನಲ್ಲಿ ಇರೋರು ಭ್ರಷ್ಟರು. ಇರೋದರಲ್ಲಿ ಸಿದ್ದರಾಮಯ್ಯನೇ ಉತ್ತಮ ವ್ಯಕ್ತಿ. ಅವರನ್ನ ಕೆಳಗಿಳಿಸೋಕೆ ಯಾರ ಕೈಯ್ಯಲ್ಲೂ ಆಗಲ್ಲ ಎಂದರು.

> "ರಾಜ್ಯದಲ್ಲಿ ಮಕ್ಕಳಿಗೆ ಮೊಬೈಲ್ ಬ್ಯಾನ್ ನಿರ್ಧಾರ ಸರಿಯಲ್ಲ. ಸರ್ಕಾರದ ನಡೆಯನ್ನು ನಾನು ಖಂಡಿಸುತ್ತೇನೆ. ನಿಷೇಧ ಹೇಗೆ ಮಾಡ್ತೀರಾ? ಮನೆಯಲ್ಲಿ ಅಪ್ಪ–ಅಮ್ಮನ ಮೊಬೈಲ್ ಎತ್ತಿಕೊಂಡು ನೋಡ್ತಾರೆ. ಅವರನ್ನು ಏನು ಮಾಡಲಿಕ್ಕೆ ಆಗುತ್ತೆ. ಅವರನ್ನು ಜೈಲಿಗೆ ಹಾಕೋಕೆ ಆಗುತ್ತಾ ಎಂದು ಪ್ರಶ್ನಿಸಿ, ಕೊರೊನಾ ವೇಳೆ ಮಕ್ಕಳಿಗೆ ಆನ್‌ಲೈನ್ ಕ್ಲಾಸ್ ಅಂತ ಯಾಕೆ ಮಾಡ್ತಿದ್ರು. ಮೊಬೈಲ್ ಇಡೀ ಜಗತ್ತಿನ ಮಾಹಿತಿ ತಿಳಿಯಲು ಅನುಕೂಲವಾಗಿದೆ. ಮೊಬೈಲ್ ಬ್ಯಾನ್ ಅಥವಾ ಸಾಮಾಜಿಕ ಜಾಲತಾಣ ನಿಷೇಧ ಎನ್ನುವುದು ಸರಿಯಲ್ಲ. ಸರ್ಕಾರದ ಈ ಆದೇಶ ಹಿಂಪಡೆಯಬೇಕು.
>
> –ವಾಟಾಳ್ ನಾಗರಾಜ್

ಅರಸು ಮಂಡಳಿ ಸಹಕಾರ ಸಂಘಕ್ಕೆ ಪದಾಧಿಕಾರಿಗಳ ಆಯ್ಕೆ

ಮೈಸೂರು,ಮಾ.8–ಮೈಸೂರಿನ ಅರಸು ಮಂಡಳಿ ಸಹಕಾರ ಸಂಘದ ಆಡಳಿತ ಮಂಡಳಿಗೆ ನಡೆದ ಚುನಾವಣೆಯಲ್ಲಿ ನೂತನ ಅಧ್ಯಕ್ಷರಾಗಿ ಜಿ.ಕೀರ್ತಿ ಪ್ರಕಾಶ್, ಉಪಾಧ್ಯಕ್ಷರಾಗಿ ಟಿ.ಎಲ್.ಅರವಿಂದರಾಜೇ ಅರಸ್, ನಿರ್ದೇಶಕರಾಗಿ ಎ.ಆರ್.ಮಲ್ಲರಾಜೇ ಅರಸ್, ಪಿ. ಸುಚಿತಾ, ಚೂಡ ಚಂದ್ರರಾಜೇ ಅರಸ್, ಎಂ.ಸಿ. ಸುರೇಶ್, ಕೆ.ಎಸ್. ಮಲ್ಲರಾಜೇ ಅರಸ್, ಪಿ.ಕೆ. ಚಿದಾನಂದ ದೇವರಾಜೇ ಅರಸ್, ಬಿ.ರವಿ, ಎ.ಆರ್. ನಿರಂಜನರಾಜೇ ಅರಸ್, ಎ.ವಿ.ವಿದ್ಯಾ, ಕಿರಣ್ ಜಿ.ಎಸ್. ಅರಸ್, ಎ.ಎಂ.ಮಲ್ಲರಾಜೇ ಅರಸ್, ಇಂದ್ರಾಣಿ, ಎನ್.ಎಸ್.ದಾಸ ರಾಜೇ ಅರಸ್, ಫಣಿ ನಂಜರಾಜೇ ಅರಸ್ ಆಯ್ಕೆಯಾಗಿದ್ದಾರೆ.

ಪಿಎಚ್.ಡಿ ಪದವಿ



ಮೈಸೂರು: ಡಾ. ಶೋಭಾ ಜಗನ್ನಾಥ್ ಮಾರ್ಗದರ್ಶನದಲ್ಲಿ ಪೂಜಾ.ಎನ್ ಅವರು ಸಸ್ಯ ಶಾಸ್ತ್ರ ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರ ಪಡಿಸಿದ ಮಹಾ ಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮಾ.15ರಂದು ವೀರಶೈವ ಲಿಂಗಾಯತ ವಧು–ವರರ ಸಮಾವೇಶ

ಮೈಸೂರು, ಮಾ.8– ಶ್ರೀ ಬಸವೇಶ್ವರ ವಧು–ವರರ ವಿವಾಹ ವೇದಿಕೆ ವತಿಯಿಂದ ವೀರಶೈವ ಲಿಂಗಾಯತ ವಧು–ವರರ ಸಮಾವೇಶವನ್ನು ಮೈಸೂರಿನ ಉತ್ತಾದಿಮಠದ ರಸ್ತೆ ಗನ್‌ಹೌಸ್ ಹತ್ತಿರದ ಶ್ರೀ ವಿದ್ಯಾಭಾರತಿ ಕಲ್ಯಾಣ ಮಂಟಪದಲ್ಲಿ ಮಾ.15ರಂದು ಮಧ್ಯಾಹ್ನ 3 ಗಂಟೆಯಿಂದ 6 ರವರೆಗೆ ಹಮ್ಮಿಕೊಳ್ಳಲಾಗಿದೆ.

ಸಮಾವೇಶದಲ್ಲಿ ಭಾಗವಹಿಸಲು ಆಸಕ್ತಿಯುಳ್ಳವರು ಮಾ.14ರೊಳಗೆ ತಮ್ಮ ಹೆಸರು ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ ಮೊ: 9686205346 ಮೂಲಕ ಸಂಪರ್ಕಿಸುವಂತೆ ಪ್ರಕಟಣೆ ತಿಳಿಸಿದೆ.

ಎಸ್ಸಿ ಮೀಸಲಿಗಾಗಿ ಮಡಿವಾಳ ಸಮುದಾಯ ಒಗ್ಗೂಡಲು ಕರೆ

ಮೈಸೂರು,ಮಾ.8–ಮಡಿವಾಳ ಸಮುದಾಯದವರು ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯಿಸುವ ನಿಟ್ಟಿನಲ್ಲಿ ಒಗ್ಗೂಡಿ ಹೋರಾಟ ನಡೆಸಬೇಕಿದೆ ಎಂದು ಕರ್ನಾಟಕ ರಾಜ್ಯ ಮಡಿವಾಳ ಮಾಚಿದೇವ ನಿಗಮದ ಅಧ್ಯಕ್ಷ ಸಿ.ನಂಜಪ್ಪ ತಿಳಿಸಿದರು.

ನಗರದ ನಜರಬಾದ್‌ನಲ್ಲಿರುವ ಅತಿಥಿ ಗೃಹದಲ್ಲಿ ಕರ್ನಾಟಕ ರಾಜ್ಯ ಮಡಿವಾಳರ ಸಂಘ ಹಾಗೂ ಎಸ್.ಸಿ.ಹೋರಾಟ ಸಮಿತಿ ನೇತೃತ್ವದಲ್ಲಿ ಮಾ.12ರಂದು ಬೆಂಗಳೂರಿನಲ್ಲಿ ನಡೆಯುತ್ತಿರುವ ಮೀಸಲಾತಿ ಹೋರಾಟದ ಪೂರ್ವಭಾವಿ ಸಭೆಗೆ ಎಲ್ಲರನ್ನು ಆಹ್ವಾನಿಸಿ ಮಾತನಾಡಿದರು. ಮಡಿವಾಳ ಜನಾಂಗವನ್ನು ಪರಿಶಿಷ್ಟ ಜಾತಿಗೆ ಸೇರಿಸಲು ಒತ್ತಾಯಿಸುವ ನಿಟ್ಟಿನಲ್ಲಿ ಸಮುದಾಯವರು ನಮ್ಮ ನಡುವಿನ ಮನಸ್ತಾಪಗಳನ್ನು ಮರೆತು ಒಗ್ಗೂಡಿ ಹೋರಾಡಬೇಕಿದೆ. ರಾಜ್ಯದಲ್ಲಿ ಮಡಿವಾಳರ ಮೇಲೆ ನಿರಂತರ ದೌರ್ಜನ್ಯಗಳು ನಡೆಯುತ್ತಿದ್ದು, ಇದನ್ನು ತಡೆಯಲು ಕ್ರಮವಹಿಸುವ ನಿಟ್ಟಿನಲ್ಲಿಯೂ ನಾವೆಲ್ಲರೂ ಒಂದಾಗಬೇಕಿದೆ. ಇತರ ಸಮುದಾಯಗಳಲ್ಲಿಯೂ ಸಮುದಾಯದ ವಿಚಾರ ಬಂದಾಗ ಶಕ್ತಿ ಪ್ರದರ್ಶನ ತೋರಬೇಕಿದೆ ಎಂದರು.



ಮೈಸೂರಲ್ಲಿ ಮಡಿವಾಳ ಸಮುದಾಯದ ಮುಖಂಡರು ಸಭೆ ನಡೆಸಿದರು.

ಬೆಂಗಳೂರಿನ ಯಶವಂತಪುರದ ಬಿಎಂಟಿಸಿ ನಿಲ್ದಾಣ ಸಮೀಪದ ವೈಮುನಿಯಪ್ಪ ಕಲ್ಯಾಣ ಮಂಟಪದಲ್ಲಿ ಮ.11.30ಕ್ಕೆ ಆಯೋಜಿಸಿರುವ ಪೂರ್ವಭಾವಿ ಸಭೆಯಲ್ಲಿ ಎಲ್ಲರೂ ಭಾಗವಹಿಸುವಂತೆ ಹೇಳಿದರು. ಪ್ರಧಾನ ಕಾರ್ಯದರ್ಶಿ ಪ್ರಕಾಶ್, ರಾಜ್ಯ ನಿರ್ದೇಶಕ ಮಹಾಲಿಂಗು, ಜಿಲ್ಲಾ ಖಜಾಂಚಿ ಮಂಜು, ಗೌರವಾಧ್ಯಕ್ಷ ವೀರಣ್ಣ, ಮೈಸೂರು ನಗರಾಧ್ಯಕ್ಷ ವರುಣ ಮಹದೇವ್, ಪ್ರಧಾನ ಕಾರ್ಯದರ್ಶಿ ನಂಜುಂಡಯ್ಯ, ಎಚ್.ಡಿ. ಕೋಟೆ ತಾಲೂಕು ಅಧ್ಯಕ್ಷ ಚಂದ್ರು, ಟಿ.ನರಸೀಪುರ ಅಧ್ಯಕ್ಷ ಕುರುಬೂರು ಮಹದೇವಸ್ವಾಮಿ, ನಂಜನಗೂಡು ಅಧ್ಯಕ್ಷ ಪ್ರಸನ್ನ, ಪ್ರಧಾನ ಕಾರ್ಯದರ್ಶಿ ಬಸವರಾಜು, ಹುಣಸೂರು ಅಧ್ಯಕ್ಷ ಶಂಕರ್, ಮುಖಂಡರಾದ ಮಹೇಶ್, ಹೇಮಂತ್, ಸಿದ್ದಪ್ಪಾಜಿ, ಜಯರಾಮ್, ಶಿವಣ್ಣ ಇನ್ನಿತರರಿದ್ದರು.

ವಿಜ್ಞಾನದಿಂದ ಸತ್ಯ ಶೋಧನೆ ಫೋರೆನ್ಸಿಯ–26 ಕಾರ್ಯಾಗಾರ

ಮೈಸೂರು: ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಪರಾಧಶಾಸ್ತ್ರ ಮತ್ತು ವಿಧಿವಿಜ್ಞಾನ ವಿಭಾಗದಿಂದ FORENSIA-26 Where Science Solves the Silence ಕುರಿತು ವಿಧಿ ವಿಜ್ಞಾನ ಕಾರ್ಯಾಗಾರ ಆಯೋಜಿಸಲಾಗಿತ್ತು. ಕಾರ್ಯಾಗಾರವು ವಿದ್ಯಾರ್ಥಿಗಳಿಗೆ ಅಪರಾಧ ತನಿಖೆಯಲ್ಲಿ ವಿಜ್ಞಾನದ ಪಾತ್ರ ಮತ್ತು ಅದರ ಪ್ರಾಯೋಗಿಕ ಬಳಕೆ ಕುರಿತು ಅಮೂಲ್ಯವಾದ ಅರಿವು ನೀಡಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲೆ ಡಾ.ಜಯಕುಮಾರಿ ಮಾತನಾಡಿ, ಇಂದಿನ ಸಮಾಜದಲ್ಲಿ ಅಪರಾಧಗಳನ್ನು ಪತ್ತೆಹಚ್ಚುವಲ್ಲಿ ಅಪರಾಧಶಾಸ್ತ್ರ ಮತ್ತು ವಿಧಿ ವಿಜ್ಞಾನ ಅತ್ಯಂತ ಪ್ರಮುಖ ಪಾತ್ರವಹಿಸುತ್ತದೆ. ವಿಜ್ಞಾನಾಧಾರಿತ ವಿಧಾನಗಳು ಆಧುನಿಕ ತಂತ್ರಜ್ಞಾನಗಳು ಹಾಗೂ ಸೂಕ್ಷ್ಮ ಸಾಕ್ಷ್ಯಾಧಾರಗಳ ವಿಶ್ಲೇಷಣೆಯ ಮೂಲಕ ಅಪರಾಧಗಳ ಪತ್ತೆ ಮತ್ತು ನ್ಯಾಯ ಸಾಧನೆ ಸಾಧ್ಯವಾಗುತ್ತದೆ ಎಂದರು. ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಾಯೋಗಾಲಯದ ಉಪನಿರ್ದೇಶಕ ಚಂದ್ರಶೇಖರ್, ಅಪರಾಧಗಳನ್ನು ಹೇಗೆ ಪತ್ತೆಹಚ್ಚುವಲ್ಲಿ ವೈಜ್ಞಾನಿಕ ವಿಧಾನಗಳ ಮಹತ್ವವನ್ನು ತಿಳಿಸಿಕೊಟ್ಟರು. ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯದ ಫೊರೆನ್ಸಿಕ್ ಫೋಟೋಗ್ರಫಿ ವಿಭಾಗದ ವೈಜ್ಞಾನಿಕ ಅಧಿಕಾರಿ ಕಾರ್ತಿಕ್, ಡಾ.ರಮೇಶ್, ಆಡಳಿತ ಸಲಹೆಗಾರರು ಉಪಸ್ಥಿತರಿದ್ದರು.



ಮಹಾಜನ ಪ್ರಥಮ ದರ್ಜೆ ಕಾಲೇಜಿನ ಅಪರಾಧಶಾಸ್ತ್ರ, ವಿಧಿವಿಜ್ಞಾನ ವಿಭಾಗದಿಂದ ಕಾರ್ಯಾಗಾರ ನಡೆಯಿತು.

ಒಳ ಮೀಸಲಾತಿ ಗೊಂದಲದ ಬಗ್ಗೆ ಎಚ್ಚರ

ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಸಲಹೆ

ಮೈಸೂರು, ಮಾ.8(ಬಿಎಲ್‌ಯು)– ಒಳ ಮೀಸಲಾತಿ ಪ್ರಕರಣ ನ್ಯಾಯಾಲಯದಲ್ಲಿದ್ದರೂ ಪ್ರಚಾರಕ್ಕಾಗಿ ಮಾದಿಗ ಸಮುದಾಯವನ್ನು ದಿಕ್ಕು ತಪ್ಪಿಸುತ್ತಿರುವವರ ಬಗ್ಗೆ ಎಚ್ಚರಿಕೆಯಿಂದ ಇರಬೇಕೆಂದು ಸಂವಿಧಾನ ಸಂರಕ್ಷಣಾ ಹೋರಾಟ ಸಮಿತಿ ರಾಜ್ಯಾಧ್ಯಕ್ಷ ಎನ್.ಭಾಸ್ಕರ್ ಮಾದಿಗ ಸಮುದಾಯದವರಿಗೆ ಸಲಹೆ ನೀಡಿದ್ದಾರೆ.



ಎನ್.ಭಾಸ್ಕರ್

ಈ ಕುರಿತು ಪತ್ರಿಕಾ ಹೇಳಿಕೆ ನೀಡಿರುವ ಅವರು, ಹಿಂದಿನ ಮೀಸಲಾತಿ ಅನ್ವಯದಂತೆ ನೇಮಕಾತಿ ಪ್ರಕ್ರಿಯೆಗೆ ಚಾಲನೆ ನೀಡಿದ ನಂತರ ಬಲಗೈ ನಾಯಕರ ದೂಷಣೆಗಳು ಮಿತಿ ಮೀರಿದೆ. ಇದು ಸಂಘರ್ಷಕ್ಕೆ ಕಾರಣವಾಗುವ ಅಪಾಯಕಾರಿ ಬೆಳವಣಿಗೆಯಾಗಿದೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಕೆಲವರು ಸ್ವಾರ್ಥ ರಾಜಕಾರಣಕ್ಕಾಗಿ ಇಬ್ಬರು ಕಿಡಿಗೇಡಿಗಳನ್ನು ಬಿಟ್ಟು ಗೊಂದಲ ಮೂಡಿಸುತ್ತಿದ್ದಾರೆ. ಒಂದು ಕಡೆ ಬಲಗೈ ಸಮುದಾಯದವರ ವಿರುದ್ಧ ಇಂತಹ ಪಿತೂರಿ, ಮತ್ತೊಂದು ಕಡೆ, ಬಲಗೈ ಸಮುದಾಯದ ಸಚಿವರ ಮನೆಗೆ ಹೋಗಿ ಅನ್ಯಾಯ ಸರಿಪಡಿಸಿ ಎಂದು ಕೇಳುತ್ತಿದ್ದಾರೆ. ಈ ಮೂಲಕ ದ್ವಿಮುಖ ನೀತಿ ಅನುಸರಿಸುತ್ತಿದ್ದು, ಇದನ್ನು ಜನರು ಅರ್ಥ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿ, ನಂತರ ಅನ್ಯಾಯ ಸರಿಪಡಿಸುವಂತೆ ಬೇಡಿಕೆ ಇಡುವುದನ್ನು ನಿಲ್ಲಿಸಿ ಎಂದು ಭಾಸ್ಕರ್ ಕಿವಿಮಾತು ಹೇಳಿದ್ದಾರೆ.

ಒತ್ತಡದಿಂದ ಮುಕ್ತಿಗೆ ರಾಜಯೋಗ ಧ್ಯಾನ ಸಹಕಾರಿ

ಹೃದ್ರೋಗ ತಜ್ಞ ಡಾ.ಮೋಹಿತ್ ದಯಾಳ್ ಗುಪ್ತ ಪ್ರತಿಪಾದನೆ

ಮೈಸೂರು,ಮಾ.8(ಎಸ್‌ಪಿಎನ್)– ಮನಸ್ಸಿನ ದುಗುಡ, ಅಧಿಕ ಒತ್ತಡದ ಜೀವನದಿಂದ ಮುಕ್ತಿ ಹೊಂದಲು ರಾಜಯೋಗದ ಕುರಿತು ಪ್ರತಿಯೊಬ್ಬರು ತಿಳಿದುಕೊಳ್ಳಬೇಕು ಎಂದು ನವದೆಹಲಿಯ ಖ್ಯಾತ ಹೃದ್ರೋಗ ತಜ್ಞ ಡಾ.ಮೋಹಿತ್ ದಯಾಳ್‌ಗುಪ್ತ ತಿಳಿಸಿದರು.

ಮೈಸೂರು ಯಾದವಗಿರಿಯ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿ ಮೈಸೂರು ಘಟಕದ ವತಿಯಿಂದ ಏರ್ಪಡಿಸಿದ್ದ 'ದಿ ಪವರ್ ಆಫ್ ಒನ್ ಥಾಟ್' ವಿಷಯ ಕುರಿತು ಮಾತನಾಡಿದ ಅವರು, ಸಮಾಜದಲ್ಲಿ ಒತ್ತಡದ ಜೀವನ ಶೈಲಿ ರೂಪಿಸಿಕೊಂಡಿರುವುದರಿಂದ ಅನೇಕ ರೋಗಗಳಿಗೆ ಆಹ್ವಾನ ನೀಡಿದಂತೆ. ಇದರಿಂದ ಮುಕ್ತಿ ಹೊಂದ ಬೇಕಾದರೆ, ಧ್ಯಾನ, ಯೋಗ, ಸಹನೆ ರೂಢಿಸಿಕೊಳ್ಳಬೇಕು ಎಂದು ಕಿವಿಮಾತು ಹೇಳಿದರು.



ನಮ್ಮೊಳಗಿನ ಒತ್ತಡ ಕಡಿಮೆಯಾಗಬೇಕಾದರೆ, ಋಣಾತ್ಮಕ ಭಾವನೆಗಳನ್ನು ತೊಡೆದು ಹಾಕಬೇಕು ಹಾಗೂ ರಾಜಯೋಗ ಧ್ಯಾನದ ಮೂಲಕ ಧನಾತ್ಮಕ ಭಾವನೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಆಗ ಮಾತ್ರ ಒತ್ತಡ ಮುಕ್ತ ಬದುಕು ರೂಪಿಸಿಕೊಳ್ಳಲು ಸಾಧ್ಯ ಎಂದರು.

ತಂತ್ರಜ್ಞಾನ ಮುಂದುವರೆದಿದ್ದರೂ ಪ್ರಾಚೀನ ಚಿಕಿತ್ಸಾ ಪದ್ಧತಿ ಕುರಿತು ಸಾರ್ವಜನಿಕವಾಗಿ ಚರ್ಚೆ ಆರಂಭವಾಗಬೇಕು. ಅಲ್ಲದೆ, ಅಧಿಕ ರಕ್ತದೊತ್ತಡ, ಮಧುಮೇಹ ಕಾಯಿಲೆಗಳು ಮುಂಜಾಗ್ರತಾ ಕ್ರಮವಾಗಿ ಬರದಂತೆ ತಡೆಗಟ್ಟಲು ಆಧುನಿಕ ಚಿಕಿತ್ಸೆಯೊಂದಿಗೆ ನಮ್ಮ ಪ್ರಾಚೀನ ಚಿಕಿತ್ಸಾ ಪದ್ಧತಿ ಅಳವಡಿಸಿಕೊಳ್ಳಬೇಕು ಎಂದರು.

ಪ್ರಸ್ತುತ ಎಲ್ಲಾ ಕ್ಷೇತ್ರದಲ್ಲೂ ಎಐ ತಂತ್ರಜ್ಞಾನ ಅವರಿಸಿಕೊಳ್ಳುತ್ತಿದೆ. ಇದು ಆರೋಗ್ಯ ಕ್ಷೇತ್ರಕ್ಕೂ ಕಾಲಿಟ್ಟಿದೆ. ಅಂತೆಯೇ ಎಐ ತಂತ್ರಜ್ಞಾನವನ್ನು ಶಸ್ತ್ರ ಚಿಕಿತ್ಸೆಗೂ ಅಳವಡಿಸುವ ಕುರಿತು ಸಂಶೋಧನೆಗಳು ನಡೆಯುತ್ತಿವೆ ಎಂದು ಮಾಹಿತಿ ನೀಡಿದರಲ್ಲದೆ, ಆಧುನಿಕ ತಂತ್ರಜ್ಞಾನ ಸಂಶೋಧನೆಗೊಂಡಿದ್ದರೂ ಪ್ರಾಚೀನ ಚಿಕಿತ್ಸಾ ಪದ್ಧತಿ ಕುರಿತು ಹೆಚ್ಚು ಹೆಚ್ಚು ಅಧ್ಯಯನ ನಡೆಯಬೇಕು ಎಂದು ಒತ್ತಿ ಹೇಳಿದರು.

ಇತ್ತೀಚಿನ ದಿನಗಳಲ್ಲಿ ವಯಸ್ಸಿನ ಮಿತಿಯಿಲ್ಲದೆ, ಹೃದಯ ಸಂಬಂಧಿ ಕಾಯಿಲೆಗಳು ಕಾಣಿಸಿಕೊಳ್ಳುತ್ತಿವೆ. ಇದಕ್ಕೆಲ್ಲಾ ಕಾರಣ ಹುಡುಕಿದಾಗ ನಾವು ಅಳವಡಿಸಿಕೊಂಡಿರುವ ಒತ್ತಡದ ಜೀವನ ಶೈಲಿಯೇ ಕಾರಣ. ಆಧುನಿಕ ತಂತ್ರಜ್ಞಾನ ದೊಂದಿಗೆ ಪ್ರಾಚೀನ ಚಿಕಿತ್ಸೆ ಪದ್ಧತಿಗಳನ್ನು ಜೋಡಿಸುವ ಕಾರ್ಯ ತ್ವರಿತವಾಗಿ ಆಗಬೇಕು ಎಂದು ಸಲಹೆ ನೀಡಿದರು. ಭಾಷಣದ ಕೊನೆಯಲ್ಲಿ ರಾಜಯೋಗದ ಧ್ಯಾನ ಪರಿಚಯಿಸಿದರು. ಸಭೆಯಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿವಿಯ ಮೈಸೂರು ಉಪವಲಯದ ಡಾ.ಲಕ್ಷ್ಮೀಜಿ ಇತರರಿದ್ದರು.

ಅರ್ಜಿ ಆಹ್ವಾನ

ಮೈಸೂರು: ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದಿಂದ ಪರಿಶಿಷ್ಟ ಪಂಗಡದ ಸ್ತ್ರೀಶಕ್ತಿ ಗುಂಪಿನ ಸದಸ್ಯರನ್ನು ಗುಂಪು ಚಟುವಟಿಕೆಗಳ ಮೂಲಕ ಆರ್ಥಿಕವಾಗಿ ಸಬಲರನ್ನಾಗಿ ಮಾಡಲು ಕಿರುಸಾಲ ಯೋಜನೆಯನ್ನು ಜಾರಿಗೆ ತರಲಾಗಿದೆ. ಕನಿಷ್ಠ 2 ಲಕ್ಷದಿಂದ ಗರಿಷ್ಠ ರೂ.20 ಲಕ್ಷಗಳವರೆಗೆ ಆಂತರಿಕ ಉಳಿತಾಯ ಹೊಂದಿರುವ, ತಾಲೂಕು ಸ್ತ್ರೀಶಕ್ತಿ ಒಕ್ಕೂಟದಲ್ಲಿ ನೋಂದಣಿಯಾಗಿರುವ ಸ್ತ್ರೀಶಕ್ತಿ ಗುಂಪಿನವರು ಮಾ.16ರೊಳಗಾಗಿ, ಮಹಿಳಾ–ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕರ ಕಚೇರಿ, ಸ್ತ್ರೀಶಕ್ತಿ ಭವನ, ವಿಜಯನಗರ 2ನೇ ಹಂತ ಇಲ್ಲಿಗೆ ಸಲ್ಲಿಸಲು ತಿಳಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ಸಂಖ್ಯೆ: 0821–2495432 ಸಂಪರ್ಕಿಸಬಹುದಾಗಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅಭಿನಂದನೆ...



ಮೈಸೂರು ವಕೀಲರ ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷರಾಗಿ ಶಂಭುಗೌಡ, ಉಪಾಧ್ಯಕ್ಷರಾಗಿ ಸೋಮನಾಯಕ ಆಯ್ಕೆಯಾಗಿದ್ದು, ಅವರನ್ನು ದಿ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಪಡುವಾರಹಳ್ಳಿ ಎಂ.ರಾಮಕೃಷ್ಣ, ವಕೀಲ ಸಿದ್ದನಾಯಕ, ಚಿನ್ನನಾಯಕ, ಗಂಗಾರತ್ನ, ಸುಣ್ಣದಕೇರಿ ಕೃಷ್ಣನಾಯಕ ಅಭಿನಂದಿಸಿದರು.

ಶೇ.33 ಮಹಿಳಾ ಮೀಸಲಾತಿಗೆ ಆಗ್ರಹ

ಮೈಸೂರು,ಮಾ.8–ರಾಜ್ಯ ಒಕ್ಕಲಿಗರ ಸಂಘದಲ್ಲಿ ಮಹಿಳೆಯರಿಗೆ ಶೇ.33ರಷ್ಟು ಮೀಸಲಾತಿ ನೀಡಬೇಕು ಎಂದು ಮೈಸೂರು–ಚಾಮರಾಜನಗರ ಜಿಲ್ಲಾ ಒಕ್ಕಲಿಗರ ಸಂಘದ ನಿರ್ದೇಶಕಿ ಸುಶೀಲ ನಂಜಪ್ಪ ಆಗ್ರಹಿಸಿದ್ದಾರೆ.



ಸುಶೀಲ

ಈ ವಿಚಾರವಾಗಿ ಮಾತನಾಡಿದ ಅವರು, ರಾಜ್ಯ ಒಕ್ಕಲಿಗರ ಸಂಘ ಸ್ಥಾಪನೆಯಾಗಿ 120 ವರ್ಷ ಕಳೆದರೂ ಮಹಿಳಾ ಮೀಸಲಾತಿ ಇಲ್ಲದೆ ಇರುವುದರಿಂದ ಇಲ್ಲಿಯವರೆಗೂ ಒಬ್ಬ ಮಹಿಳೆಯು ನಿರ್ದೇಶಕಿಯಾಗಿ ಆಯ್ಕೆಯಾಗಿಲ್ಲ. ಈ ವಿಚಾರವಾಗಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದು, ನ್ಯಾಯಾಲಯವು ಒಕ್ಕಲಿಗರ ಸಂಘಕ್ಕೆ ಮತ್ತು ಡೆಪ್ಯೂಟಿ ರಿಜಿಸ್ಟ್ರಾರ್ ಆಫ್ ಕೋ–ಆಪರೇಟಿವ್ ಸೊಸೈಟಿಗೆ ಶೋಕಾಸ್ ನೋಟಿಸ್ ಜಾರಿ ಮಾಡಿದೆ. ಮಾ.29ರಂದು ನಡೆಯುವ ಸಂಘದ ಸರ್ವ ಸದಸ್ಯರ ಸಭೆಯಲ್ಲಿ ಶೇ.33 ರ ಮಹಿಳಾ ಮೀಸಲಾತಿ ವಿಚಾರದ ಬಗ್ಗೆ ತೀರ್ಮಾನಿಸಿ, ಬೈಲಾ ತಿದ್ದುಪಡಿ ಮಾಡಿದ ನಂತರ ಸಂಘದ ಚುನಾವಣೆ ನಡೆಸಬೇಕು ಎಂದು ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ಇಂದು, ನಾಳೆ ಟೆರೇಸಿಯನ್ ಕಾಲೇಜಲ್ಲಿ ರಾಷ್ಟ್ರೀಯ ಕಾರ್ಯಾಗಾರ

ಮೈಸೂರು: ಮೈಸೂರಿನ ಸಿದ್ದಾರ್ಥನಗರದಲ್ಲಿರುವ ಟೆರೇಸಿಯನ್ ಕಾಲೇಜು ಸಂಶೋಧನಾ ಕೇಂದ್ರ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಮಾ.9, 10ರಂದು STRUCTURAL EQUATION MODELLING ಕುರಿತ ರಾಷ್ಟ್ರೀಯ ಕಾರ್ಯಾಗಾರವನ್ನು ಕಾಲೇಜಿನ ಅವೆಮರಿಯಾ ಗೋಲ್ಡನ್ ಜುಬಿಲಿ ಸಭಾಂಗಣದಲ್ಲಿ ಹಮ್ಮಿಕೊಂಡಿದೆ. ಕಾರ್ಯಾಗಾರದ ಉದ್ಘಾಟನೆಯನ್ನು ಮೈಸೂರು ವಿವಿ ಹಿರಿಯ ಪ್ರಾಧ್ಯಾಪಕ ಡಾ.ಎಂ.ಎಲ್.ಅಶೋಕ, ಪಾಂಡಿಚೇರಿ ವಿವಿ ಪ್ರಾಧ್ಯಾಪಕ ಡಾ.ಆರ್.ಕಾಸಿಲಿಂಗಂ, ಕಾಲೇಜಿನ ಪ್ರಾಂಶುಪಾಲರಾದ ಡಾ.ಸಿಸ್ಟರ್ ರೋಹಿಣಿ ನೆರವೇರಿಸಲಿದ್ದು, ಸಮಾರಂಭದಲ್ಲಿ ಸಂಶೋಧನಾ ನಿರ್ದೇಶಕಿ ಡಾ.ವೀಣಾ.ಎಂ.ಡಿ.ಅಲ್ಮೇಡಾ, ಸಹಾಯಕ ಪ್ರಾಧ್ಯಾಪಕ ಡಾ.ಪಿ.ಎಂ.ಶಿವಪ್ರಸಾದ್, ಐಕ್ಯೂಟಿಸಿ ಸಂಯೋಜಕ ವಿವೇಕ್ ಚಾರ್ಲ್ಸ್ ಭಾಗಿಯಾಗಲಿದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ


9.3.2026 ಸೋಮವಾರ, ಮಳೆ ನಕ್ಷತ್ರ: ಪೂರ್ವಾಭಾದ್ರ 4.03.2026 ರಿಂದ 17.03.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಫಾಲ್ಗುಣ ಮಾಸ, ಕೃಷ್ಣ ಪಕ್ಷ,
ತಿಥಿ: ಷಷ್ಠಿ, ನಕ್ಷತ್ರ: ವಿಶಾಖ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಬೆಳಗ್ಗೆ 6.30ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಕಿಡ್ನಿ ತಪಾಸಣೆ ಮತ್ತು ವಸಂತ ವಮನ ದೇಹಶುದ್ಧಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಪಿಸಿಓಡಿ ಮತ್ತು ಕುತ್ತಿಗೆ ನೋವು ಬಗ್ಗೆ ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾಳವೀಯ ಮಿಷನ್ ಅಧ್ಯಾಪಕರ ತರಬೇತಿ ಕೇಂದ್ರ:** ಕನ್ನಡ ಸಾಹಿತ್ಯದ ಬಹುಮುಖಿ ಕ್ಷೇತ್ರಗಳು ಕುರಿತು ರಾಷ್ಟ್ರೀಯ ತರಬೇತಿ ಕಾರ್ಯಾಗಾರ, ಉದ್ಘಾಟನೆ: ಸರ್ಕಾರಿ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಡಾ.ಗುಬ್ಬಿಗೂಡು ರಮೇಶ್, ಅಧ್ಯಕ್ಷತೆ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯ ನಿರ್ದೇಶಕಿ ಪ್ರೊ.ಎನ್.ಕೆ.ಲೋಲಾಕ್ಷಿ, ಸ್ಥಳ: ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ಅರಿವಿನ ಚಾವಡಿ ಸಂಶೋಧಕ ಸಂಘ, ದಲಿತ ವಿದ್ಯಾರ್ಥಿ ಒಕ್ಕೂಟ, ಮೈಸೂರು ವಿಶ್ವವಿದ್ಯಾನಿಲಯ, ಉಳುಮೆ ಪ್ರತಿಷ್ಠಾನ:** ಸ್ಪರ್ಧಾತ್ಮಕ ಪರೀಕ್ಷೆ ಕುರಿತು ವಿದ್ಯಾರ್ಥಿಗಳೊಂದಿಗೆ ಸಂವಾದ ಕಾರ್ಯಕ್ರಮ. ಅಧ್ಯಕ್ಷತೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಜಿಎಸ್‌ಟಿ ಉಪ ಆಯುಕ್ತ ಮಂಜುನಾಥ್ ಸೋಸ್ಲೆ, ಸ್ಥಳ: ಇಎಂಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ರಿಂದ.

ವರಕೋಡುವಿನಲ್ಲಿ ಇಂದು

- **ವರಕೋಡು ಗ್ರಾಮಸ್ಥರು:** ಶ್ರೀ ಬೀರೇಶ್ವರಸ್ವಾಮಿ ದೇವಸ್ಥಾನದ ಸಂಪ್ರೋಕ್ಷಣೆ, ಪುನರ್ ಪ್ರತಿಷ್ಠಾಪನೆ, ಕುಂಭಾಭಿಷೇಕ ಹಾಗೂ ಪೂಜಾ ಮಹೋತ್ಸವ, ವರಕೋಡು, ಬಡಗಲಹುಂಡಿ, ಮೂಡಲಹುಂಡಿ, ಕೆಂಪೇಗೌಡನಹುಂಡಿ ಮತ್ತು ಹೊಸಹುಂಡಿ ಗ್ರಾಮಗಳ ಮೂಲ ದೇವಸ್ಥಾನಗಳಲ್ಲಿ ಹೋಮ, ಸ್ಥಳ: ವರಕೋಡು, ವರುಣಾ ಹೋಬಳಿ, ಮೈಸೂರು ತಾಲೂಕು, ಬೆಳಗ್ಗೆ 7.30ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, ಡಾ.ಧನಂಜಯ ಸರ್ಜಿ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಡಾ.ಎಂ.ಎ.ಜ್ಯೋತಿ, ವ್ಯಾಖ್ಯಾನ–ಮೊರಬದ ಮಲ್ಲಿಕಾರ್ಜುನ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಕನ್ನಡ ಚಿತ್ರಗೀತೆಗಳು, 9.00 ನೆನಪಿನಂಗಳ (ಧ್ವನಿ ಭಂಡಾರದಿಂದ) ಮೈಸೂರು ಆಕಾಶವಾಣಿಯ ಸುವರ್ಣ ಮಹೋತ್ಸವ ಸಮಾರಂಭದ ಧ್ವನಿಮುದ್ರಣದಿಂದ ಆಯ್ದ ಅವತರಣಿಕೆಯ ಮೂರನೇ ಭಾಗ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ವಿ.ವಂಶೀಧರ್–ವೇಣುವಾದನ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಗೇಮ್ ಷೋ–ಪ್ರಸ್ತುತಿ: ಬಿ.ದಿಗ್ವಿಜಯ್, **ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಸ್ನೇಹಾ .ಎಚ್.ಎಸ್ ಮತ್ತು ಸಹನಾ.ಎಚ್.ಎಸ್, 12.45 ನಮ್ಮ ಆರೋಗ್ಯ–ಮಕ್ಕಳಲ್ಲಿ ಬೊಜ್ಜುತನ ಕಾರಣಗಳು ಮತ್ತು ಪರಿಹಾರ ಕುರಿತು ಡಾ.ಭುವನೇಶ್ವರ್.ವಿ.ಎಸ್ ಅವರೊಂದಿಗೆ ಮಾತುಕತೆ ಇವರೊಂದಿಗೆ ಭಾಗವಹಿಸುತ್ತಾರೆ–ತೇಜಸ್ವಿನಿ ಗಿರೀಶ್, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ–ಪ್ರಧಾನಮಂತ್ರಿ ಧನಧಾನ್ಯ ಯೋಜನೆ ಕುರಿತು ಮಾಹಿತಿ. 1.20 ಭಾವಗೀತೆಗಳು–ತೇಜಸ್ವಿನಿ.ಎ.ಆರ್, 2.30 ಪ್ರದೇಶ ಸಮಾಚಾರ, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಕದ್ರಿ ಗೋಪಾಲನಾಥ್–ಸ್ಯಾಕ್ಸೋಫೋನ್ ವಾದನ, 4.00 ಮಹಿಳಾರಂಗ–ಡಾಕ್ಟರ್ ಸಮಯ–ಮಹಿಳಾ ಆರೋಗ್ಯ ಕಾರ್ಯಕ್ರಮ. ವಿಷಯ–ಪರೀಕ್ಷೆಯ ಸಮಯದಲ್ಲಿ ಪೋಷಕರು ಹಾಗೂ ಮಕ್ಕಳ ಒತ್ತಡ ನಿರ್ವಹಣೆ, ಭಾಗವಹಿಸುತ್ತಾರೆ–ಮೈಸೂರು ವೈದ್ಯಕೀಯ ಕಾಲೇಜು ಹಾಗೂ ಸಂಶೋಧನಾ ಕೇಂದ್ರದ ಮನೋವೈದ್ಯಕೀಯ ವಿಭಾಗದ ಮುಖ್ಯಸ್ಥರಾದ ಡಾ.ರವೀಶ್ ಬಿ.ಎನ್. ಪ್ರಸ್ತುತಿ: ಕೀರ್ತನಾ.ವಿ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ ಪ್ರಸ್ತುತಿ : ಡಾ.ಮಾಧವಿ ಭಂಡಾರಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಜೈವಿಕ ಗೊಬ್ಬರಗಳ ಮಹತ್ವ ಕುರಿತು ಮಂಡ್ಯ ತಾಲೂಕು ವಿ.ಸಿ.ಫಾರಂ, ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಪ್ರಾಧ್ಯಾಪಕರಾದ ಡಾ.ಎನ್.ಎನ್.ಆಶಾ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ವಿಧಾನಮಂಡಲದಲ್ಲಿ ಇಂದು, 8.00 ಯುವವಾಣಿ: ಮೈಸೂರಿನ ಸಂತ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳಿಂದ ಕಾರ್ಯಕ್ರಮ ವೈವಿಧ್ಯದ ಮೊದಲನೇ ಭಾಗ. 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ– ಎನ್.ರವಿಕಿರಣ್, ಚಿತ್ರವೀಣಾ ವಾದನ, 10.00–ಶ್ರೀ ವಿದ್ಯಾವಿಶಾರದ ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್ ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ರಾಜ ಮಹಾರಾಜರ ಪ್ರೋತ್ಸಾಹದಿಂದ

ಕಲೆ ಇನ್ನೂ ಜೀವಂತ

'ನಾದ ವೈಭವಂ' ಕಾರ್ಯಕ್ರಮದಲ್ಲಿ ರೇವತಿ ಕಾಮತ್ ಅಭಿಪ್ರಾಯ

ಮೈಸೂರು, ಮಾ.8(ವಿವಿಹೆಚ್)– ಸಂಗೀತವನ್ನು ಪ್ರೀತಿಸುವ, ಪೋಷಿಸುವ ಊರೇ ಮೈಸೂರು. ಇಲ್ಲಿ ಕಲೆ, ಸಂಸ್ಕೃತಿಗೆ ಉನ್ನತ ಸ್ಥಾನ ಮಾನವಿದೆ. ರಾಜ ಮಹಾರಾಜರ ಪ್ರೋತ್ಸಾಹದಿಂದ ಇಲ್ಲಿ ಕಲೆ ಜೀವಂತವಾಗಿದೆ ಎಂದು ವೀಣಾ ಕಲಾವಿದೆ ರೇವತಿ ಕಾಮತ್ ಅಭಿಪ್ರಾಯಪಟ್ಟರು.



ರೋಟರಿ ಮೈಸೂರು, ರೋಟ್ರಾಕ್ಟ್ ಕ್ಲಬ್ ಆಫ್ ಅರಮನೆ ನಗರಿ ಸಹಯೋಗದಲ್ಲಿ ನಗರದ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಆಯೋಜಿಸಿದ್ದ 'ನಾದ ವೈಭವಂ' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಅಂತರಂಗದ ಆಳವನ್ನು ಅರಿಯುವ ಕೆಲಸವನ್ನು ಸಂಗೀತ ಮಾಡುತ್ತದೆ. ವಿಶೇಷ ವಾದನಗಳನ್ನು ನುಡಿಸುವ ಯುವ ಪ್ರತಿಭೆಗಳು ಇಂದು ಕಡಿಮೆಯಾಗುತ್ತ ಹೋಗುತ್ತಿದೆ. ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಕಲೆಯನ್ನು ಪ್ರಚುರ ಪಡಿಸಬೇಕಿದೆ ಎಂದು ಅಭಿಪ್ರಾಯಿಸಿದರು.

ಸಂಗೀತ ಎಂಬುದು ನನಗೆ ಎಲ್ಲವನ್ನೂ ತಂದುಕೊಟ್ಟಿದೆ. ಅದೊಂದು ದೇವರ ವರ, ಏಕಾಂತವನ್ನು ದೂರ ಮಾಡಿ, ಎಲ್ಲರೊಳಗೆ, ಎಲ್ಲರೊಂದಿಗೆ ಬೆರೆಯಲು ಸಂಗೀತ ಕಾರಣ. ಹಿಂದೆ ಸಂಗೀತ ಎಂದರೆ ಥೆರಪಿಯಾಗಿ ಕೆಲಸ ಮಾಡುತ್ತದೆ ಎಂದರು.

ಮೈಸೂರಲ್ಲಿ ಕಳೆದ 10 ರಿಂದ 15 ವರ್ಷಗಳಿಂದ ಯುವ ಸಮೂಹ ಮಾದಕ ವ್ಯಸನಿಗಳಾಗುತ್ತಿದ್ದಾರೆ. ಸಂಗೀತದ ಮೇಲಿನ ನಿರಾಸಕ್ತಿಯೇ ಇದಕ್ಕೆಲ್ಲಾ ಪ್ರಮುಖ ಕಾರಣ. ಎಲ್ಲರಿಗೂ ಯಾವುದಾದರೊಂದು ರೂಪದ ಸಂಗೀತ ಕಲಿಸುವ ಮೂಲಕ ಇಂತಹ ಸಾಮಾಜಿಕ ಪಿಡುಗುಗಳಿಂದ ಮಕ್ಕಳನ್ನು ಹೊರತರಬಹುದಾಗಿದೆ ಎಂದು ತಿಳಿಸಿದರು.

ನಂದನ್ ಕಶ್ಯಪ್, ಯದ್ನೇಶ್ ರೈಕರ್, ಕೇಶವ್ ಮೋಹನ್ ಕುಮಾರ್ ಹಾಗೂ ಮಯಾಂಕ್ ಬೆಡೆಕರ್ ನಾದ ವೈಭವಂ ಕಾರ್ಯಕ್ರಮ ನಡೆಸಿಕೊಟ್ಟರು.

ರೋಟರಿ ಮೈಸೂರು ಅಧ್ಯಕ್ಷ ರವಿ ಶಂಕರ್, ರೋಟ್ರಾಕ್ಟ್ ಕ್ಲಬ್ ಆಫ್ ಅರಮನೆ ನಗರಿ ಅಧ್ಯಕ್ಷ ಚಂದನ್, ಆಯೋಜಕ ರಜತ್ ಉಪಸ್ಥಿತರಿದ್ದರು.

ಅಧಿಕಾರ ಹಸ್ತಾಂತರದ ಚರ್ಚೆ ನಡುವೆ ಖರ್ಗೆ, ಡಿಕೆಶಿ ಭೇಟಿ

●ಒಂದೇ ವಿಮಾನದಲ್ಲಿ ಇಬ್ಬರೂ ದೆಹಲಿ ಪ್ರಯಾಣ ಭಾರೀ ಮಹತ್ವ ●ಮೂರು ಗಂಟೆಯ ಪ್ರಯಾಣದ ವೇಳೆ ಇಬ್ಬರ ನಡುವಿನ ಮಾತುಕತೆ ಬಗ್ಗೆ ತೀವ್ರ ಕುತೂಹಲ

ಕಲ್ಬುರ್ಗಿ, ಮಾ.8(ಬಿಎಲ್‌ಯು)– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಜೆಟ್ ನಂತರ ಅಧಿಕಾರ ಹಸ್ತಾಂತರ ಮಾಡುತ್ತಾರೆಂದು ರಾಜಕೀಯ ವಲಯದಲ್ಲಿ ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರು ಇಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಒಂದೇ ವಿಮಾನದಲ್ಲಿ ದೆಹಲಿಗೆ ತೆರಳಿರುವುದು ತೀವ್ರ ಕುತೂಹಲ ಮೂಡಿಸಿದೆ.

ಕಲ್ಬುರ್ಗಿಯಲ್ಲಿ ಇಂದು ನಡೆದ ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದಲ್ಲಿ ಭಾಗವಹಿಸಲು ಮಲ್ಲಿಕಾರ್ಜುನ ಖರ್ಗೆ ಅವರು ವಿಶೇಷ ವಿಮಾನದಲ್ಲಿ ದೆಹಲಿಯಿಂದ ತವರು ಜಿಲ್ಲೆಗೆ ಆಗಮಿಸಿದ್ದರು.

ಈ ಸಮಾರಂಭದಲ್ಲಿ ಭಾಗವಹಿಸಲು ಡಿ.ಕೆ.ಶಿವಕುಮಾರ್ ಸಹ ಇಂದು ವಿಶೇಷ ವಿಮಾನದಲ್ಲಿ ಬೆಂಗಳೂರಿನಿಂದ ಕಲ್ಬುರ್ಗಿಗೆ ಆಗಮಿಸಿದ್ದರು. ಕಲ್ಬುರ್ಗಿ ವಿಮಾನ ನಿಲ್ದಾಣದಲ್ಲಿ ಡಿ.ಕೆ.ಶಿವಕುಮಾರ್ ಅವರು ಮಲ್ಲಿಕಾರ್ಜುನ ಖರ್ಗೆ ಅವರನ್ನು ಈ ವೇಳೆ ಸ್ವಾಗತಿಸಿದರು.

ತರುವಾಯ ಏರ್ ಪೋರ್ಟ್ ನ ವಿಐಪಿ ಲಾಂಜ್‌ನಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿ.ಕೆ.ಶಿವಕುಮಾರ್ ಅವರು ಸೌಜನ್ಯಯುತವಾಗಿ ಮಾತುಕತೆ ನಡೆಸಿದರು. ಆ ವೇಳೆ ಸಚಿವರಾದ ಪ್ರಿಯಾಂಕ್ ಖರ್ಗೆ ಹಾಗೂ ಡಾ.ಶರಣ ಪ್ರಕಾಶ್ ಪಾಟೀಲ್ ಅವರು ಉಪಸ್ಥಿತರಿದ್ದ ಕಾರಣ ರಾಜಕೀಯವಾಗಿ ಯಾವುದೇ ವಿಚಾರದ ಬಗ್ಗೆ ಚರ್ಚೆ ಮಾಡಲಿಲ್ಲ.



ಕಲ್ಬುರ್ಗಿ ವಿಮಾನ ನಿಲ್ದಾಣದ ವಿಐಪಿ ಲಾಂಜ್ ನಲ್ಲಿ ಭಾನುವಾರ ಡಿ.ಕೆ.ಶಿವಕುಮಾರ್ ಅವರು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಮಾತುಕತೆ ನಡೆಸಿದರು.

ನಂತರ ಮಾತನಾಡಿದ ಡಿ.ಕೆ.ಶಿವಕುಮಾರ್ ಅವರು, ಕೇಂದ್ರ ಸರ್ಕಾರ ಬಡ, ಮಧ್ಯಮ ವರ್ಗದವರ ಪರವಾಗಿಲ್ಲ ಎಂದು ಆರೋಪ ಮಾಡಿದರು.

ಈ ವೇಳೆ ದೆಹಲಿ ಭೇಟಿ ಬಗ್ಗೆ ಕೇಳಿದಾಗ, ಡಿ.ಕೆ.ಶಿವಕುಮಾರ್ ಅವರು ಯಾವುದೇ ಉತ್ತರ ನೀಡದೆ ಅಲ್ಲಿಂದ ನಿರ್ಗಮಿಸಿದರು. ವಿವಿಧ ಅಭಿವೃದ್ಧಿ ಕಾಮಗಾರಿಗಳ ಶಂಕುಸ್ಥಾಪನೆ ಸಮಾರಂಭದ ನಂತರ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿ.ಕೆ.ಶಿವಕುಮಾರ್ ಅವರು ಒಂದೇ ವಿಮಾನದಲ್ಲಿ ದೆಹಲಿಗೆ ಪ್ರಯಾಣ ಬೆಳೆಸಿದರು.

ಏರ್‌ಪೋರ್ಟ್‌ನ ವಿಐಪಿ ಲಾಂಜ್‌ನಲ್ಲಿ ಕೆಲವು ಸಚಿವರಿದ್ದ ಕಾರಣ ಮಲ್ಲಿಕಾರ್ಜುನ ಖರ್ಗೆ ಅವರ ಬಳಿ ರಾಜಕೀಯವಾಗಿ ಯಾವುದೇ ರೀತಿಯ ಚರ್ಚೆ ಮಾಡಲು ಸಾಧ್ಯವಾಗಲಿಲ್ಲ. ಆದರೆ ಈಗ ಒಂದೇ ವಿಮಾನದಲ್ಲಿ ಇಬ್ಬರು ದೆಹಲಿಗೆ ಪ್ರಯಾಣ ಬೆಳೆಸಿದ್ದಾರೆ. ಮೂರು ಗಂಟೆಗಳ ವಿಮಾನ ಪ್ರಯಾಣದ ವೇಳೆ ಮಲ್ಲಿಕಾರ್ಜುನ ಖರ್ಗೆ ಅವರ ಜೊತೆ ಪ್ರತ್ಯೇಕ ಹಾಗೂ ರಹಸ್ಯವಾಗಿ ಮಾತುಕತೆ ನಡೆಸಲು ಡಿ.ಕೆ.ಶಿವಕುಮಾರ್ ಅವರಿಗೆ ಸದಾವಕಾಶ ದೊರೆತಿದೆ.

ಈ ಸಂದರ್ಭದಲ್ಲಿ ಅಧಿಕಾರ ಹಸ್ತಾಂತರದ ಬಗ್ಗೆ ಡಿ.ಕೆ.ಶಿವಕುಮಾರ್ ಅವರು ನಿಶ್ಚಿತವಾಗಿ ಮಲ್ಲಿಕಾರ್ಜುನ ಖರ್ಗೆ ಅವರ ಬಳಿ ಮಾತುಕತೆ ನಡೆಸಿರುತ್ತಾರೆ ಎನ್ನಲಾಗಿದೆ. ಒಟ್ಟಾರೆ ಅಧಿಕಾರ ಹಸ್ತಾಂತರದ ಚರ್ಚೆಗಳು ನಡೆಯುತ್ತಿರುವ ಸಂದರ್ಭದಲ್ಲಿ ಮಲ್ಲಿಕಾರ್ಜುನ ಖರ್ಗೆ ಹಾಗೂ ಡಿ.ಕೆ.ಶಿವಕುಮಾರ್ ಅವರ ಪ್ರತ್ಯೇಕ ಹಾಗೂ ರಹಸ್ಯ ಮಾತುಕತೆ ಬಹಳ ಮಹತ್ವ ಪಡೆದಿದೆ.

ದೆಹಲಿಗೆ ತೆರಳಿದ ನಂತರ ಡಿ.ಕೆ.ಶಿವಕುಮಾರ್ ಅವರು ಯಾರನ್ನು ಭೇಟಿ ಮಾಡುತ್ತಾರೆ, ತರುವಾಯದ ರಾಜಕೀಯ ಬೆಳವಣಿಗೆಗಳೇನು ಎಂಬುದು ತೀವ್ರ ಕುತೂಹಲ ಮೂಡಿಸಿದೆ.

ಈ ಎಲ್ಲಾ ಬೆಳವಣಿಗೆ ನಡುವೆ, ಹೈಕಮಾಂಡ್ ಸೂಚಿಸಿದರೆ ಅಧಿಕಾರ ತ್ಯಜಿಸುವೆ ಎಂದು ಸಿದ್ದರಾಮಯ್ಯ ಅವರು ನಿನ್ನೆ ಮೈಸೂರಿನಲ್ಲಿ ನೀಡಿರುವ ಹೇಳಿಕೆ ಕೂಡ ಮಹತ್ವ ಪಡೆದಿದೆ.

ಸ್ವಚ್ಛತಾ ರೋಡ್ ಶೋನಲ್ಲಿ ರಘುಲಾಲ್ ತಂಡ



ಸ್ವಚ್ಛ ಸರ್ವೇಕ್ಷಣೆ–2025–26ರ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ, ಮೈಸೂರು ನಗರಾಭಿವೃದ್ಧಿ ಇಲಾಖೆ ಹಾಗೂ ಜಿಲ್ಲಾಡಳಿತದ ಸಹಯೋಗದಲ್ಲಿ ಭಾನುವಾರ ಆಯೋಜಿಸಿದ್ದ 'ಸ್ವಚ್ಛತಾ ರೋಡ್ ಶೋ'ನಲ್ಲಿ ಭಾಗವಹಿಸಿದ್ದ ನಗರದ ರಘುಲಾಲ್ ಕಂಪನಿಯ ತಂಡ.

ಕರ್ನಾಟಕದ ಗೃಹಲಕ್ಷ್ಮಿಯರಂತೆ ಪಂಜಾಬ್ ಮಹಿಳೆಯರಿಗೂ ಮಾಸಿಕ ಬಂಪರ್

ಎಸ್ಸಿ ಮಹಿಳೆಯರಿಗೆ 1,500, ಸಾಮಾನ್ಯ ವರ್ಗದವರಿಗೆ ಒಂದು ಸಾವಿರ ರೂ. ಘೋಷಿಸಿದ ಆಪ್ ಸರ್ಕಾರ



ಚಂಡೀಗಢ: ಮಹಿಳೆಯರಿಗೆ ಮಾಸಿಕ 2 ಸಾವಿರ ರೂ ನೀಡುವ ಕರ್ನಾಟಕ ಕಾಂಗ್ರೆಸ್ ಸರ್ಕಾರದ ಗೃಹಲಕ್ಷ್ಮಿ ಯೋಜನೆ ಸುದ್ದಿಗೆ ಗ್ರಾಸವಾಗಿರುವಂತೆಯೇ ಪರಿಶಿಷ್ಟ ಜಾತಿಯ ಮಹಿಳೆಯರಿಗೆ 1,500 ಹಾಗೂ ಸಾಮಾನ್ಯ ಮಹಿಳೆಯರಿಗೆ ಪ್ರತೀ ತಿಂಗಳು ಸಾವಿರ ರೂ ನೀಡುವ ಹೊಸ ಯೋಜನೆಯೊಂದನ್ನು ಪಂಜಾಬ್ ಸರ್ಕಾರ ಘೋಷಣೆ ಮಾಡಿದೆ.

ಭಾನುವಾರ ವಿಧಾನಸಭೆಯಲ್ಲಿ 2,60,437 ಕೋಟಿ ರೂಪಾಯಿಗಳ ಬಜೆಟ್ ಮಂಡಿಸಿದ ವೇಳೆ ಪಂಜಾಬ್ ಹಣಕಾಸು ಸಚಿವ ಹರ್ಪಾಲ್ ಸಿಂಗ್ ಚೀಮಾ ಅವರು 'ಮುಖ್ಯಮಂತ್ರಿ ಮವಾನ್ ಧ್ಯಾನ್ ಸತ್ಕರ್ ಯೋಜನೆ' ಅನುಷ್ಠಾನವನ್ನು ಘೋಷಿಸಿದರು. ಈ ಯೋಜನೆಯಡಿಯಲ್ಲಿ ಪಂಜಾಬ್ ಸರ್ಕಾರ ಈ ಆರ್ಥಿಕ ನೆರವನ್ನು ನೇರವಾಗಿ ಮಹಿಳೆಯರ ಬ್ಯಾಂಕ್ ಖಾತೆಗೆ ವರ್ಗಾಯಿಸಲಿದೆ.

ಪಂಜಾಬ್‌ನಲ್ಲಿ ಎಎಪಿ ಅಧಿಕಾರಕ್ಕೆ ಬಂದ ಸುಮಾರು 4 ವರ್ಷಗಳ ನಂತರ ಭಗವಾನ್ ಮನ್ ಸರ್ಕಾರ ಈ ಹೊಸ ಯೋಜನೆಯನ್ನು ಪ್ರಾರಂಭಿಸಿದೆ. ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯ ಅಂಗವಾಗಿ ಈ ಘೋಷಣೆ ಮಾಡಲಾಗಿದ್ದು, ಇದೇ ಮೊದಲ ಬಾರಿಗೆ ರಾಜ್ಯ ಬಜೆಟ್ ಅನ್ನು ಭಾನುವಾರ ಮಂಡಿಸಲಾಗಿದೆ. ಈ ಯೋಜನೆಯನ್ನು ಮಹಿಳೆಯರಿಗೆ ವಿಶ್ವದ ಮೊದಲ ಯುನಿವರ್ಸಲ್ ನಗದು ವರ್ಗಾವಣೆ ಯೋಜನೆ ಎಂದು ಹಣಕಾಸು ಸಚಿವರು ಬಣ್ಣಿಸಿದ್ದಾರೆ.

ಪಂಜಾಬ್‌ನಲ್ಲಿ 18 ವರ್ಷಕ್ಕಿಂತ ಮೇಲ್ಪಟ್ಟ ಪ್ರತಿಯೊಬ್ಬ ಮಹಿಳೆಯೂ ಈ ಯೋಜನೆಗೆ ಅರ್ಹರಾಗಿರುತ್ತಾರೆ. ಪ್ರಸ್ತುತ ಅಥವಾ ಮಾಜಿ ಸರ್ಕಾರಿ ಉದ್ಯೋಗಿ, ಮಾಜಿ ಮತ್ತು ಪ್ರಸ್ತುತ ಸಂಸದ/ಎಂಎಲ್ಎ ಮತ್ತು ಆದಾಯ ತೆರಿಗೆ ಪಾವತಿಸುವ ಮಹಿಳೆಯರಿಗೆ ಮಾತ್ರ ಅದರಿಂದ ಹೊರಗಿಡಲಾಗಿದೆ. ಸಾಮಾಜಿಕ ಭದ್ರತೆ ಪಿಂಚಣಿ(ವೃದ್ಧಾಪ್ಯ, ವಿಧವೆ ಅಥವಾ ಅಂಗವೈಕಲ್ಯ ಪಿಂಚಣಿ) ತೆಗೆದುಕೊಳ್ಳುವ ಮಹಿಳೆಯರೂ ಸಹ ಈ ಯೋಜನೆಯ ಲಾಭವನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಚೀಮಾ ತಿಳಿಸಿದ್ದಾರೆ.

ಕೌಶಲ್ಯಾಭಿವೃದ್ಧಿ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಮಾ.8– ಮೈಸೂರಿನ ಕೇಂದ್ರೀಯ ಪೆಟ್ರೋ ಕೆಮಿಕಲ್ಸ್ ಇಂಜಿನಿಯರಿಂಗ್ ಮತ್ತು ತಂತ್ರಜ್ಞಾನ ಸಂಸ್ಥೆ (ಸಿಪೆಟ್) ಕೌಶಲ್ಯ ಮತ್ತು ತಾಂತ್ರಿಕ ತರಬೇತಿ ಕೇಂದ್ರದ ವತಿಯಿಂದ 2026–27ನೇ ಸಾಲಿನ ಉದ್ಯೋಗಾಧಾರಿತ ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಟೆಕ್ನಾಲಜಿ (DPT), ಡಿಪ್ಲೊಮಾ ಇನ್ ಪ್ಲಾಸ್ಟಿಕ್ಸ್ ಮೌಲ್ಡ್ ಟೆಕ್ನಾಲಜಿ (DPMT) 3 years ಕೋರ್ಸ್‌ಗಳ ಪ್ರವೇಶಕ್ಕೆ ಆನ್‌ಲೈನ್, ಆಫ್ ಲೈನ್ ಮೂಲಕ ನೋಂದಣಿ ಪ್ರಕ್ರಿಯೆ ಆರಂಭವಾಗಿದೆ.

ಹೆಚ್ಚಿನ ಮಾಹಿತಿಗೆ 9480253024, 9791431827 ನ್ನು ಸಂಪರ್ಕಿಸಬಹುದಾಗಿದೆ ಎಂದು ಸಿಪೆಟ್ ಸಂಸ್ಥೆಯ ಪ್ರಿನ್ಸಿಪಾಲ್, ನಿರ್ದೇಶಕರು ಮತ್ತು ಮುಖ್ಯಸ್ಥರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಪಾಶ್ಚಿಮಾತ್ಯ ದೇಶಗಳಲ್ಲಿ ತಾಯಿಗಿಂತ ಪತ್ನಿಗೆ ಮಹತ್ವದ ಸ್ಥಾನ

ಶ್ರೀ ಶಾರದ ವಿಶ್ವಭಾವೈಕ್ಯ ಆಶ್ರಮದ ಅಧ್ಯಕ್ಷೆ ಮಾತಾಜಿ ಅಮೋಘಮಯಿ ಅಭಿಮತ

ಮೈಸೂರು, ಮಾ.8(ಎಸ್‌ಪಿಎನ್)– ಭಾರತೀಯ ಪರಂಪರೆಯಲ್ಲಿ 'ತಾಯಿಗೆ ಪೂಜ್ಯನೀಯ ಸ್ಥಾನವಿದೆ. ಆದರೆ, ಪಾಶ್ಚಿಮಾತ್ಯ ದೇಶದಲ್ಲಿ ಹೆಂಡತಿ ಸ್ಥಾನಕ್ಕೆ ಹೆಚ್ಚಿನ ಮಹತ್ವವಿದೆ ಎಂದು ಮೈಸೂರು ಶ್ರೀಶಾರದ ವಿಶ್ವಭಾವೈಕ್ಯ ಆಶ್ರಮದ ಅಧ್ಯಕ್ಷರಾದ ಮಾತಾಜಿ ಅಮೋಘಮಯಿ ಅಭಿಪ್ರಾಯಪಟ್ಟರು.



ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶ್ರೀಶಾರದ ವಿಶ್ವಭಾವೈಕ್ಯ ಆಶ್ರಮದ ಅಧ್ಯಕ್ಷರಾದ ಮಾತಾಜಿ ಅಮೋಘಮಯಿ ಮಾತನಾಡಿದರು.

ಮೈಸೂರು ಕುವೆಂಪುನಗರದ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘದ ಆವರಣದಲ್ಲಿ ಉತ್ತರ ಕನ್ನಡ ಜಿಲ್ಲಾ ಸಾಂಸ್ಕೃತಿಕ ಸಂಘ, ಚಿತ್ಪಾವನ ಬ್ರಾಹ್ಮಣ ಸಂಘ ಹಾಗೂ ಕರಾಡ ಬ್ರಾಹ್ಮಣ ಸಭಾ ಸಹಯೋಗದೊಂದಿಗೆ ವಿಶ್ವ ಮಹಿಳಾ ದಿನಾಚರಣೆ ಅಂಗವಾಗಿ ಏರ್ಪಡಿಸಿದ್ದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಈ ಜಗತ್ತಿನಲ್ಲಿ ತಾಯಿ ಸ್ಥಾನವನ್ನು ಯಾರೂ ತುಂಬಲಾಗದು. ತನ್ನ ಕುಟುಂಬ ನಿರ್ವಹಣೆಗಾಗಿ ಹಗಲು–ರಾತ್ರಿ ದುಡಿಯುತ್ತಾಳೆ. ಆದರೆ, ಪುರುಷರು ಮಹಿಳೆಯರೊಂದಿಗಿದ್ದರೂ ತಾಯಿ ನಿರ್ವಹಿಸುವ ಕಾರ್ಯವನ್ನು ಮನೆಯ ಯಾವ ಸದಸ್ಯರು ನಿರ್ವಹಿಸಲು ಸಾಧ್ಯವಿಲ್ಲ ಎಂದರು.

ಸ್ವಾಮಿ ವಿವೇಕಾನಂದರೂ ಒಮ್ಮೆ ಅಮೆರಿಕಾಕ್ಕೆ ಭೇಟಿ ನೀಡಿದ್ದ ಸಂದರ್ಭದಲ್ಲಿ ಅಲ್ಲಿನ ಮಹಿಳೆಯರನ್ನು ಪ್ರೀತಿಯಿಂದ ಮಾತಾಜಿ ಎಂದು ಸಂಬೋಧಿಸುತ್ತಿದ್ದರು. ಇದಕ್ಕೆ ಅಲ್ಲಿನ ಮಹಿಳೆಯರು ಸ್ವಾಮೀಜಿ ಮೇಲೆ ಬೇಸರ ವ್ಯಕ್ತಪಡಿಸುತ್ತಿದ್ದ ಪ್ರಸಂಗವನ್ನು ಉಲ್ಲೇಖಿಸಿದರಲ್ಲದೆ, ಭಾರತದಲ್ಲಿ ತಾಯಿಗೆ ನೀಡಿರುವ ಸ್ಥಾನ ಬೇರೆ ಯಾವ ದೇಶದಲ್ಲೂ ನೀಡಿಲ್ಲ ಎಂದರು.

ಪಾಶ್ಚಿಮಾತ್ಯ ರಾಷ್ಟ್ರಗಳು 'ತಾಯಿ' ಸ್ಥಾನಕ್ಕೆ ಬದಲಾಗಿ 'ಹೆಂಡತಿ' ಸ್ಥಾನಕ್ಕೆ ಗೌರವ ನೀಡುತ್ತಾರೆ. ಅಲ್ಲಿನ ಮಹಿಳೆಯರಿಗೆ ತಾಯಿ ಸ್ಥಾನಕ್ಕಿಂತ ಹೆಂಡತಿ ಸ್ಥಾನಕ್ಕೆ ಇತರರು ಗೌರವ ನೀಡುವುದನ್ನು ಬಯಸುತ್ತಾರೆ. ಈ ಹಿಂದೆ ಭಾರತದಲ್ಲಿ ಮಹಿಳೆಯರಿಗೆ ಅಡುಗೆ ಮನೆಗೆ ಸೀಮಿತಗೊಳಿಸಿ ಎಲ್ಲಾ ಹೊರಗಿನ ಸೌಲಭ್ಯಗಳನ್ನು ಪುರುಷರೇ ಪಡೆದು ಕೊಳ್ಳುತ್ತಿದ್ದರು. ಈಗ ಕಾಲ ಬದಲಾಗಿದೆ. ಎಲ್ಲಾ ಸಂಪತ್ತನ್ನು ಹಂಚಿ ತಿನ್ನುವ ಮನಸ್ಥಿತಿ ಬೆಳಸಿಕೊಳ್ಳ ಬೇಕು ಎಂದು ಕಿವಿಮಾತು ಹೇಳಿದರು.

ಸಭೆಯಲ್ಲಿ ಕರಾಡ ಬ್ರಾಹ್ಮಣ ಸಂಘದ ಅಧ್ಯಕ್ಷ ಕೃಷ್ಣಮೋಹನ್, ಚಿತ್ಪಾವನ ಬ್ರಾಹ್ಮಣ ಸಂಘದ ಅಧ್ಯಕ್ಷ ರಾಮಚಂದ್ರ ಭಟ್, ಉತ್ತರ ಕನ್ನಡ ಸಾಂಸ್ಕೃತಿಕ ಸಂಘದ ಅಧ್ಯಕ್ಷ ದಿನೇಶ್ ಉಪಸ್ಥಿತರಿದ್ದರು. ಗಾಯಕಿ ತುಳಸಿ ಬೋರೆ ಪ್ರಾರ್ಥಿಸಿದರು. ಲಕ್ಷ್ಮೀ ಕೇಳಲ್ಕರ್ ನಿರೂಪಿಸಿದರು. ಶುಭ ಸ್ವಾಗತಿಸಿದರು. ವೇದಿಕೆ ಕಾರ್ಯಕ್ರಮದ ಬಳಿಕ ಕೀರ್ತನಾ, ಶರಣ್ಯಾ, ಅಕ್ಷತಾ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಸಿಕೊಟ್ಟರು. ವೃಷಾ ಸುಬ್ರಹ್ಮಣ್ಯ, ತನಿಷಾ ಸುಬ್ರಹ್ಮಣ್ಯ ಅವರು ಭರತನಾಟ್ಯ, ವಿದುಷಿ ಸಂಜನಾ ಗೋಗಟೆ ಅವರಿಂದ ಭರತನಾಟ್ಯ ಪ್ರದರ್ಶಿಸಿದರು. ಬೆಂಗಳೂರಿನ ಚಿತ್ಪಾವನ ಮಹಿಳಾ ಯಕ್ಷಗಾನ ತಂಡದಿಂದ ದಕ್ಷಯಜ್ಞ ಯಕ್ಷಗಾನ ಪ್ರದರ್ಶನಗೊಂಡಿತು.

ಮೀಸಲಾತಿಯಲ್ಲಿ ಪರಿಶಿಷ್ಟ ಜಾತಿ, ಪಂಗಡಕ್ಕೆ ಅನ್ಯಾಯ ಆರೋಪ: ಮಾ.22ರಿಂದ

ಚಿತ್ರದುರ್ಗದಿಂದ ಬೆಂಗಳೂರಿಗೆ ಬಿಜೆಪಿ ಪಾದಯಾತ್ರೆ



ರಾಜ್ಯಮಟ್ಟದ ಬೃಹತ್ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆ ಚಿತ್ರದುರ್ಗದಲ್ಲಿ ಭಾನುವಾರ ನಡೆಯಿತು.

ಚಿತ್ರದುರ್ಗ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಕ್ಕೆ ಮೀಸಲಾತಿಯಲ್ಲಿ ಅನ್ಯಾಯವಾಗುತ್ತಿದೆ ಎಂದು ಬಿಜೆಪಿ ವತಿಯಿಂದ ಮಾ.22ರಿಂದ ಬೃಹತ್ ಪಾದಯಾತ್ರೆ ನಡೆಸಲು ನಿರ್ಧರಿಸಲಾಗಿದೆ.

ನಗರದ ವಾಲ್ಮೀಕಿ ಸಮುದಾಯ ಭವನದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಬೃಹತ್ ಜನಾಂದೋಲನ ಸಮಾವೇಶದ ಪೂರ್ವಭಾವಿ ಸಭೆಯಲ್ಲಿ ಚಿತ್ರದುರ್ಗದಿಂದ ಬೆಂಗಳೂರಿಗೆ ಪಾದಯಾತ್ರೆ ಹಮ್ಮಿಕೊಳ್ಳುವ ತೀರ್ಮಾನ ಕೈಗೊಳ್ಳಲಾಯಿತು.

ಮೀಸಲಾತಿಯಲ್ಲಾಗುತ್ತಿರುವ ಅನ್ಯಾಯ ಖಂಡಿಸಿ ಮಾರ್ಚ್ 22ರಂದು ಚಿತ್ರದುರ್ಗದಲ್ಲಿ ಆರಂಭವಾಗುವ ಪಾದಯಾತ್ರೆ, ಮಾ.27ರಂದು ಬೆಂಗಳೂರು ತಲುಪಲಿದ್ದು, ವಿಧಾನಸೌಧಕ್ಕೆ ಮುತ್ತಿಗೆ ಹಾಕಲಾಗುವುದು ಎಂದು ಹೋರಾಟದ ನೇತೃತ್ವ ವಹಿಸಿರುವ ಮಾಜಿ ಶಾಸಕ ಪಿ.ರಾಜೀವ್ ತಿಳಿಸಿದ್ದಾರೆ.

ಮೊದಲ ದಿನವೇ ಒಂದು ಲಕ್ಷ ಜನ ಸೇರುವ ನಿರೀಕ್ಷೆ ಇದೆ. ಸರ್ಕಾರದ ಪ್ರತಿನಿಧಿಗಳು ಬಂದು ಎಸ್‌ಸ್ಸಿ, ಎಸ್‌ಟಿ, ಸಮುದಾಯಗಳಿಗೆ ನ್ಯಾಯ ಒದಗಿಸುವ ಭರವಸೆ ನೀಡಬೇಕು. ಇಲ್ಲದಿದ್ದರೆ ಹೋರಾಟ ತೀವ್ರಗೊಳಿಸಲಾಗುತ್ತದೆ. ಬೆಂಗಳೂರು ತಲುಪಿದ ಬಳಿಕ ಹೋರಾಟದ ಸ್ವರೂಪ ಬದಲಾಗಲಿದೆ ಎಂದು ಎಚ್ಚರಿಸಿದ್ದಾರೆ.

ಬಿಜೆಪಿ ಸರ್ಕಾರವು ಎಸ್‌ಸಿ, ಎಸ್‌ಟಿ ಸಮುದಾಯದ ಹೋರಾಟಕ್ಕೆ ಮನ್ನಣೆ ನೀಡಿ ಮೀಸಲಾತಿ ಹೆಚ್ಚಿಸಿತ್ತು. ಆದರೆ ಕಾಂಗ್ರೆಸ್ ಸರ್ಕಾರ ನಮ್ಮ ಧ್ವನಿ ಹತ್ತಿಕ್ಕುತ್ತಿದೆ. ಮೀಸಲಾತಿ ಹೆಚ್ಚಳ ಅಂಬೇಡ್ಕರ್ ಅವರ ಕೊಡುಗೆಯೇ ಹೊರತು ಸಿದ್ದರಾಮಯ್ಯ ಅವರದ್ದಲ್ಲ ಎಂದು ಮಾಜಿ ಸಚಿವ ಬಿ.ಶ್ರೀರಾಮುಲು ಇದೇ ವೇಳೆ ಕಿಡಿಕಾರಿದ್ದಾರೆ.

ದಲಿತ ಸಚಿವ ಮಹಾದೇವಪ್ಪ ಅವರಿಂದಲೇ ನಮಗೆ ಅನ್ಯಾಯವಾಗಿದೆ. ಅವರು ಸಿಕ್ಕರೆ ಕಪಾಳಕ್ಕೆ ಹೊಡಿಬೇಕು ಅನಿಸುತ್ತೆ. ಈ ಹೋರಾಟಕ್ಕೆ ಬರುವ ಮುನ್ನ ಮೀಸಲಾತಿ ಪಡೆದುಕೊಂಡು ಧೀರರಾಗಿ ಬರುತ್ತೇವೆ, ಇಲ್ಲವೇ ಶವವಾಗಿ ಬರುತ್ತೇವೆ ಎಂದು ಮನೆಯಲ್ಲಿ ಹೇಳಿಯೇ ಬನ್ನಿ ಎಂದು ಏಕವಚನದಲ್ಲೇ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ವಿರುದ್ಧ ಮಾಜಿ ಸಚಿವ ಶಿವನಗೌಡ ನಾಯಕ್ ವಾಗ್ದಾಳಿ ನಡೆಸಿದ್ದಾರೆ.

ಇದು ನಮ್ಮ ಅಳಿವು, ಉಳಿವಿನ ಪ್ರಶ್ನೆ. ಗುರಿ ಮುಟ್ಟುವವರೆಗೆ ಹೋರಾಟ ನಡೆಯಲಿದೆ. ಮೀಸಲಾತಿ ಕೈ ತಪ್ಪಿದರೆ ಪರಿಶಿಷ್ಟರ ನಾಲ್ಕು ಸಾವಿರ ಹುದ್ದೆಗಳು ಕೈ ತಪ್ಪಲಿವೆ ಎಂದು ಮಾಜಿ ಶಾಸಕ ರಾಜುಗೌಡ ಆತಂಕ ವ್ಯಕ್ತಪಡಿಸಿದರು.

ಸಭೆಯಲ್ಲಿ ಸಂಸದ ಗೋವಿಂದ ಕಾರಜೋಳ, ಕೇಂದ್ರದ ಮಾಜಿ ಸಚಿವ ಎ.ನಾರಾಯಣಸ್ವಾಮಿ, ಹೊಳಲ್ಕೆರೆ ಶಾಸಕ ಎಂ.ಚಂದ್ರಪ್ಪ ಮಾಜಿ ಸಚಿವ ಎನ್.ಮಹೇಶ್ ಮತ್ತಿತರರು ಭಾಗವಹಿಸಿದ್ದರು.

ಮುಂದಿನ ವಿಧಾನಸಭೆ, ಲೋಕಸಭೆಗೆ ಮಹಿಳಾ ಮೀಸಲಾತಿ ಅನುಷ್ಠಾನ

●ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ವಿಶ್ವಾಸ ●ಮೀಸಲಾತಿಯಿಂದ ಮಹಿಳಾ ಮುಖ್ಯಮಂತ್ರಿ ಅವಕಾಶ: ಹೆಚ್‌ಡಿಕೆ

ಬೆಂಗಳೂರು, ಮಾ.8– ಮುಂದಿನ ವಿಧಾನಸಭೆ ಲೋಕಸಭೆಗೆ ಬಹುಶಃ ಮಹಿಳಾ ಮೀಸಲಾತಿ ಬರಬಹುದು ಎಂದು ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಹೇಳಿದರು.

ನಗರದ ಡಾ. ಬಾಬು ಜಗಜೀವನ ರಾಮ್ ಭವನದಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿ ಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಡಿಲಿಮಿಟೇಷನ್ ಸುಗಮವಾಗಿ ನಡೆದರೆ ಶೇ.33 ಮೀಸಲಾತಿ ಸಿಗುತ್ತದೆ. 75–80 ಮಹಿಳೆಯರಿಗೆ ವಿಧಾನಸಭೆಗೆ ಟಿಕೆಟ್ ದೊರೆಯುತ್ತದೆ ಎಂದರು.



ಬೆಂಗಳೂರಲ್ಲಿ ಜೆಡಿಎಸ್ ಮಹಿಳಾ ಘಟಕ ಹಮ್ಮಿಕೊಂಡಿದ್ದ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಜೆಡಿಎಸ್ ರಾಷ್ಟ್ರಾಧ್ಯಕ್ಷರಾದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಉದ್ಘಾಟಿಸಿದರು. ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮತ್ತಿತರ ಗಣ್ಯರು ಉಪಸ್ಥಿತರಿದ್ದರು.

ರಾಜಕಾರಣದಲ್ಲೂ ಮಹಿಳೆಯರಿಗೆ ನ್ಯಾಯಯುತ ಮೀಸಲಾತಿ ದೊರಕಬೇಕೆಂಬ ನಿಟ್ಟಿನಲ್ಲಿ ನಾನು ಶ್ರಮಿಸಿದೆ. ಇದಕ್ಕೆ ಪ್ರಧಾನಿ ಮೋದಿ ಅವರು ಅಂತಿಮ ಸ್ವರೂಪ ನೀಡಿದರು. ಇದಕ್ಕಾಗಿ ಮೋದಿಯವರಿಗೆ ಹೃದಯಪೂರ್ವಕವಾಗಿ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ಜಿಬಿಎ ಮೀಸಲಾತಿ ಪಟ್ಟಿ ಅಂತಿಮವಾಗಿ ಪ್ರಕಟವಾಗಿದೆ. ಮುಂಬರುವ ಈ ಚುನಾವಣೆಯಲ್ಲಿ ಜೆಡಿಎಸ್ ಪಕ್ಷದಿಂದ ಹೆಚ್ಚು ಮಹಿಳೆಯರು ಸ್ಪರ್ಧೆ ಮಾಡಬೇಕು. 369 ವಾರ್ಡುಗಳಲ್ಲಿ ಜೆಡಿಎಸ್‌ಗೆ ಎಷ್ಟು ವಾರ್ಡ್‌ಗಳಲ್ಲಿ ಸ್ಪರ್ಧಿಸುವ ಶಕ್ತಿ ಇದೆ ಎಂಬುದನ್ನು ಗಮನಿಸಿ. ಬಳಿಕ ಎಷ್ಟು ಮಹಿಳೆಯರಿಗೆ ಅವಕಾಶ ನೀಡಬಹುದು ಎಂದು ತೀರ್ಮಾನ ಮಾಡಿ. ಆದಷ್ಟು ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರು ಸ್ಪರ್ಧೆ ಮಾಡಬೇಕು. ಆಗ ಮಾತ್ರ ಮಹಿಳಾ ಮೀಸಲಾತಿಗೆ ಅರ್ಥ ಬರುತ್ತದೆ ಎಂದು ನುಡಿದರು.

ಸರ್ಕಾರದ ಎಲ್ಲಾ ಇಲಾಖೆಗಳಲ್ಲಿ ಶೇ.33ರಷ್ಟು ಮಹಿಳಾ ಮೀಸಲಾತಿ ಕಲ್ಪಿಸಿದ್ದು ನಾವು. ಆ ಬಗ್ಗೆ ಸ್ಪಷ್ಟ ತೀರ್ಮಾನ ಮಾಡಿದ್ದು ನಾವು. ಅದೆಲ್ಲವೂ ಇವತ್ತು ಜಾರಿಗೆ ಬರುತ್ತಿದೆ. ಈ ಬಗ್ಗೆ ನನಗೆ ಆತ್ಮತೃಪ್ತಿ ಇದೆ. ನಮ್ಮ ಮುಖಂಡರು, ಕಾರ್ಯಕರ್ತರು ಜನರಿಗೆ ಈ ವಿಷಯವನ್ನು ಹೇಳಬೇಕು ಎಂದು ಸೂಚಿಸಿದರು.

ಸಂಸದೀಯ ಹೆಗ್ಗಳಿಕೆ ಹೆಚ್ಚಲಿದೆ: ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಾತನಾಡಿ, ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರಿಗೆ ನೀಡಿರುವ ಶೇ.33 ಮೀಸಲು ಮುಂದಿನ ದಿನಗಳಲ್ಲಿನ ಸಂಸದೀಯ ವ್ಯವಸ್ಥೆಯ ಹೆಗ್ಗಳಿಕೆಯನ್ನು ಮತ್ತಷ್ಟು ಹೆಚ್ಚಿಸಲಿದೆ. ನನಗೆ ಇರುವ ಮಾಹಿತಿ ಪ್ರಕಾರ 2032–33ರಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರಬಹುದು. ಈ ಮೀಸಲಾತಿ ಜಾರಿಯಾದರೆ ವಿಧಾನಸಭೆಯಲ್ಲಿ 75 ಮಹಿಳಾ ಶಾಸಕರೇ ಇರುತ್ತಾರೆ. ಎಲ್ಲ ಪಕ್ಷಗಳ ಮಹಿಳೆಯರು ಮನಸು ಮಾಡಿದರೆ ಮಹಿಳಾ ಮುಖ್ಯಮಂತ್ರಿಯೇ ಆಗಬಹುದು. ಅಂಥ ಅವಕಾಶ ಮೀಸಲಾತಿಯಿಂದ ಸಾಧ್ಯವಾಗುತ್ತದೆ ಎಂದು ಹೇಳಿದರು.

ನರೇಂದ್ರ ಮೋದಿ ಅವರ ಸಂಕಲ್ಪದಿಂದ ಇವತ್ತು ರಾಷ್ಟ್ರದಲ್ಲಿ ಮಹಿಳಾ ಮೀಸಲಾತಿ ಅನುಷ್ಠಾನಕ್ಕೆ ಬರುತ್ತಿದೆ. ಅದರ ಕನಸು ಕಂಡಿದ್ದವರು ದೇವೇಗೌಡರು. ಮಹಿಳೆಯರ ಪರವಾಗಿ ದೇವೇಗೌಡರು ಬಹಳಷ್ಟು ಕೆಲಸಗಳನ್ನು ಮಾಡಿದ್ದಾರೆ. ಈ ರಾಜ್ಯದಲ್ಲಿ ಪ್ರಥಮ ಬಾರಿಗೆ ಶೇ.70 ಮಹಿಳಾ ಶಿಕ್ಷಕರನ್ನು ನೇಮಿಸಿಕೊಂಡಿದ್ದು, ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಶೇ.50 ಮಹಿಳಾ ಮೀಸಲಾತಿ ನೀಡಿದ್ದು ದೇವೇಗೌಡರು. 1996ರಲ್ಲಿ ದೇವೇಗೌಡರು ಪ್ರಧಾನಿ ಆಗಿ ಹೋದಮೇಲೆ ರಾಜ್ಯಸಭೆಯಲ್ಲಿ ಮಹಿಳೆಯರಿಗೆ ಶೇ.33 ಮೀಸಲು ನೀಡುವ ವಿಧೇಯಕ ಮಂಡಿಸಿದ್ದರು. ಆದರೆ, ಸಮಾಜವಾದಿ ಪಕ್ಷ, ಆರ್‌ಜೆಡಿ ಬೆಂಬಲ ನೀಡದ ಕಾರಣಕ್ಕೆ ಲೋಕಸಭೆಯಲ್ಲಿ ಆ ವಿಧೇಯಕ ಅಂಗೀಕಾರ ಆಗಲಿಲ್ಲ. ಆದರೆ, ದೈವ ಕೃಪೆ ಇತ್ತು. ನಾವು ಇಂದು ಎನ್‌ಡಿಎ ಮೈತ್ರಿಯಲ್ಲಿ ದೇವೇಗೌಡರ ಕನಸನ್ನು ಮೋದಿಯವರು ನನಸು ಮಾಡಿದರು ಎಂದು ತಿಳಿಸಿದರು.


ಗ್ಯಾರಂಟಿಯಿಂದ ತಾತ್ಕಾಲಿಕ ಉಪಯೋಗ: ಮಾಜಿ ಶಾಸಕಿ ಅನಿತಾ ಕುಮಾರಸ್ವಾಮಿ ಮಾತನಾಡಿ, ಮಹಿಳೆಯರಿಗಾಗಿ ಜೆಡಿಎಸ್ ಪಕ್ಷ ದೊಡ್ಡ ಕೊಡುಗೆ ನೀಡಿದೆ. ದೇವೇಗೌಡರು ಶೇ.33ರಷ್ಟು ಮಹಿಳಾ ಮೀಸಲು ನೀಡಲು ನಾಂದಿ ಹಾಡಿದರು. ಕುಮಾರಸ್ವಾಮಿ ಅವರು ಲಾಟರಿ, ಸರಾಯಿ ನಿಷೇಧ ಮಾಡಿ ಎಷ್ಟೋ ಹೆಣ್ಣು ಮಕ್ಕಳ ಜೀವನ ಉಳಿಸಿದರು ಎಂದರು.

ಕಳೆದ ವಿಧಾನಸಭೆ ಚುನಾವಣೆಯಲ್ಲಿ ಪಂಚರತ್ನ ಯೋಜನೆ ಭರವಸೆ ನೀಡಿದ್ದರು. ಉಚಿತ ಆರೋಗ್ಯ, ಉಚಿತ ಶಿಕ್ಷಣ, ಉಚಿತ ಆರೋಗ್ಯ ಕೊಡುತ್ತೇನೆ ಎಂದು ಹೇಳಿದರು. ಆದರೆ, ಮಹಿಳೆಯರು ಎರಡು ಸಾವಿರ ರೂಪಾಯಿಗೆ ಮಾರು ಹೋದರು. ಪಂಚರತ್ನದಂತಹ ಉತ್ತಮ ಕಾರ್ಯಕ್ರಮಗಳು ಜನರಿಗೆ ಅರ್ಥ ಆಗಲಿಲ್ಲ. ಗ್ಯಾರಂಟಿ ಯೋಜನೆಗಳಿಂದ ತಾತ್ಕಾಲಿಕ ಸಹಾಯವಾಗಬಹುದೇ ಹೊರತು ಇದರಿಂದ ಜೀವನ ರೂಪಿಸಿಕೊಳ್ಳಲು ಸಾಧ್ಯವಿಲ್ಲ ಎಂಬುದನ್ನು ಜನರಿಗೆ ಇನ್ನಾದರೂ ಅರ್ಥ ಮಾಡಿಸಬೇಕಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ರಶ್ಮಿ ರಾಮೇಗೌಡ, ಪಕ್ಷದ ಕೋರ್ ಕಮಿಟಿ ಅಧ್ಯಕ್ಷ ಎಂ.ಕೃಷ್ಣಾರೆಡ್ಡಿ, ಜೆಡಿಎಸ್ ಜಿಬಿಎ ಅಧ್ಯಕ್ಷ ಹೆಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯರಾದ ಟಿ.ಎ.ಶರವಣ, ಜವರಾಯಿಗೌಡ, ಮಾಜಿ ಸಚಿವ ವೆಂಕಟರಾವ್ ನಾಡಗೌಡ ಮುಂತಾದವರು ಪಾಲ್ಗೊಂಡಿದ್ದರು.

ಟ್ರಂಪ್ ತಾಳಕ್ಕೆ ಮೋದಿ ಕುಣಿಯುತ್ತಿದ್ದಾರೆ: ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕಿಡಿ

ಚಿತ್ತಾಪುರ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಒಬ್ಬ ಸರ್ವಾಧಿಕಾರಿ. ಎಫ್‌ಸ್ಟೀನ್ ಫೈಲ್‌ನಲ್ಲಿ ಪ್ರಧಾನಿ ನರೇಂದ್ರ ಮೋದಿ ಹೆಸರು ಬಂದಿರುವುದರಿಂದ ಟ್ರಂಪ್ ತಾಳಕ್ಕೆ ತಕ್ಕಂತೆ ಕುಣಿಯುವ ಗುಲಾಮರಾಗಿದ್ದಾರೆ. ಟ್ರಂಪ್ ಜೊತೆ ಸ್ನೇಹ ಮಾಡಿಕೊಂಡು ನಮ್ಮ ದೇಶವನ್ನು ಗಿರವಿ ಇಟ್ಟಿದ್ದಾರೆ ಎಂದು ಎಐಸಿಸಿ ಅಧ್ಯಕ್ಷ, ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.



ಕಲಬುರಗಿ ಜಿಲ್ಲೆ, ಚಿತ್ತಾಪುರ ಪಟ್ಟಣದಲ್ಲಿ ಭಾನುವಾರ ಆಯೋಜಿಸಿದ್ದ 1069 ಕೋಟಿ ಮೊತ್ತದ ವಿವಿಧ ಕಾಮಗಾರಿಗಳಿಗೆ ಚಾಲನೆ ನೀಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಬೆಳಿಗ್ಗೆ ಚಹಾ ಕುಡಿಯುವ ಸಮಯಕ್ಕೆ ಟ್ರಂಪ್ ಅವರೊಂದಿಗೆ ಮಾತನಾಡುವುದಾಗಿ ಮೋದಿ ಹೇಳುತ್ತಾರೆ. ಅಷ್ಟೊಂದು ಸ್ನೇಹ ಇದ್ದರೆ ನಮ್ಮ ದೇಶದ ಮೇಲೆ ಇಷ್ಟೊಂದು ಪ್ರಮಾಣದಲ್ಲಿ ತೆರಿಗೆ ಹೇರುತ್ತಿರುವುದೇಕೆ ಯಾವ ದೇಶದೊಂದಿಗೆ ವ್ಯವಹಾರ ಮಾಡಬೇಕು ಎಂದು ಹೇಳುತ್ತಿರುವುದೇಕೆ, ಸ್ವತಂತ್ರವಾಗಿ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಹೇಳಲು ಮೋದಿ ಅವರಿಗೆ ಏಕೆ ಆಗುವುದಿಲ್ಲ ಎಂದು ಪ್ರಶ್ನಿಸಿದರು.

ಭಾರತದ ಆಹ್ವಾನದ ಮೇರೆಗೆ ವಿಶಾಖಪಟ್ಟಣದಲ್ಲಿ ಆಯೋಜಿಸಿದ್ದ ನೌಕಾಸೇನಾ ತಾಲೀಮಿನಲ್ಲಿ ಭಾಗವಹಿಸಲು ಇರಾನ್‌ನಿಂದ ಬಂದಿದ್ದ ಯುದ್ಧನೌಕೆಯನ್ನು ಅಮೆರಿಕದ ಜಲಾಂತರ್ಗಾಮಿಯು ಬಾಂಬ್ ದಾಳಿ ನಡೆಸಿ ಮುಳುಗಿಸಿ ಹಲವಾರು ಇರಾನ್ ಸೈನಿಕರ ಸಾವಿಗೆ ಕಾರಣವಾಗಿದೆ. ಅಷ್ಟೊಂದು ಧೈರ್ಯ ಅವರಿಗೆ ಹೇಗೆ ಬಂತು. ಇದನ್ನು ಪ್ರಶ್ನಿಸುವ ಎದೆಗಾರಿಕೆಯೂ ದೇಶದ ಪ್ರಧಾನಿಗೆ ಇಲ್ಲವೇ. ಇಂದಿರಾಗಾಂಧಿ ಅವರು ಪ್ರಧಾನಿಯಾಗಿದ್ದ ವೇಳೆ ಬಾಂಗ್ಲಾ ದೇಶಕ್ಕೆ ಸ್ವಾತಂತ್ರ್ಯ ಕೊಡಿಸುವ ವೇಳೆ ಅಮೆರಿಕದ ಯುದ್ಧನೌಕೆಯನ್ನು ಕಳುಹಿಸಿ ಭಾರತವನ್ನು ಬೆದರಿಸಲು ನೋಡಿತು. ಆದರೆ, ಇಂದಿರಾಗಾಂಧಿ ಅವರು ಅಮೆರಿಕದ ಬೆದರಿಕೆಗೆ ಮಣಿಯಲಿಲ್ಲ. ಆದರೆ, ಮೋದಿ ಏಕೆ ಅಮೆರಿಕದ ತಾಳಕ್ಕೆ ತಕ್ಕಂತೆ ಕುಣಿಯುತ್ತಿದ್ದಾರೆ. ಮೋದಿ ತಮ್ಮ ವಿದೇಶಾಂಗ ನೀತಿಯಿಂದಾಗಿ ದೇಶವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹಾಳು ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು.

ನಕ್ಕರೆ ಅದೇ ಸ್ವರ್ಗ

ಗುಂಡ : ನನಗೊಂದೂ ಅರ್ಥ ಆಗ್ತಾ ಇಲ್ಲ.

ತಿಮ್ಮ : ಏನಪ್ಪಾ ಅದು?

ಗುಂಡ : ಹಣವಂತ ಗೆಳೆಯರ ಜೊತೆ ಗೆಳೆತನ ಮಾಡಿದರೆ ಎಂದೂ ಹಣವಂತರಾಗಲ್ಲ, ಜಾಣ ಗೆಳೆಯರ ಜೊತೆ ಗೆಳೆತನ ಮಾಡಿದರೆ ಎಂದೂ ಜಾಣರಾಗಲ್ಲ. ಆದರೆ, ಕುಡುಕ ಗೆಳೆಯರ ಜೊತೆ ಗೆಳೆತನ ಮಾಡಿದರೆ ಕುಡುಕರಾಗುತ್ತಾರೆ. ಅದು ಹೇಗೆ?

ಮೈಸೂರು ಮಿತ್ರ

ಸೋಮವಾರ, ಮಾರ್ಚ್ 9, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅಣಕಿಸುವವರು ಇರಬೇಕು, ಟೀಕಿಸುವವರು ಇರಬೇಕು, ಹಿಯ್ಯಾಳಿಸುವವರು ಇರಬೇಕು, ಅವರಿಗೆ ಮಾತ್ರ ಗೊತ್ತು ನಮ್ಮ ಸಾಮರ್ಥ್ಯ. ಅವರೇ ನಮ್ಮನ್ನು ಸದಾ ಕಾಲ ಜಾಗೃತರಾಗಿಸುವ ಕಾವಲುಗಾರರು

ವೇದ ಸುಳ್ಳಾದರೂ { ವೇದಾಂತ ಹೇಳೋಕೆ,
ಗಾದೆ ಸುಳ್ಳಾಗದು { ಬದನೆಕಾಯಿ ತಿನ್ನೋಕೆ

ನಿಮ್ಮ ಪತ್ರಗಳು

ವಿಶ್ವಸಂಸ್ಥೆಯ ಮೌನ ವಿಪರ್ಯಾಸ!

ಮಾನ್ಯರೆ,

ಇಸ್ರೇಲ್, ಅಮೆರಿಕ ಹಾಗೂ ಇರಾನ್ ನಡುವಿನ ಯುದ್ಧ ಸದ್ಯಕ್ಕೆ ನಿಲ್ಲುವಂತೆ ಕಾಣುತ್ತಿಲ್ಲ. ಯುದ್ಧದಿಂದ ಅಪಾರ ಸಂಖ್ಯೆಯಲ್ಲಿ ಸಾವು-ನೋವು ಹಾಗೂ ಆಸ್ತಿ-ಪಾಸ್ತಿ ನಷ್ಟವಾಗಿದೆ. ಈ ಸಂಘರ್ಷ ದೊಡ್ಡ ಯುದ್ಧವಾಗಿ ಮಾರ್ಪಾಡಾಗುವ ಸಾಧ್ಯತೆ ಇದೆ ಎಂಬ ಆತಂಕ ಸೃಷ್ಟಿಸಿದೆ. ಮಧ್ಯಪ್ರಾಚ್ಯದಲ್ಲಿ ಉದ್ವಿಗ್ನತೆ ಹೆಚ್ಚುತ್ತಿರುವುದರಿಂದ ಜಾಗತಿಕ ಮಾರುಕಟ್ಟೆಗಳಲ್ಲಿ ಏರಿಳಿತ ತೀವ್ರಗೊಂಡಿದೆ.

ಪ್ರಮುಖ ತೈಲಬೆಲೆ ಏರಿಕೆಯ ಭೀತಿ ಇದೆ. ಷೇರುಪೇಟೆ ಮತ್ತು ರೂಪಾಯಿ ಮೌಲ್ಯ ಕುಸಿತವಾಗಲಿದ್ದು, ದಿನಸಿ ಮತ್ತು ಇತರೆ ವಸ್ತುಗಳ ಬೆಲೆ ಗಗನಕ್ಕೇರುವ ಆತಂಕ ಎದುರಾಗಿದೆ. ಹೀಗಾಗಿ ಮೊದಲೇ ಕಷ್ಟದಲ್ಲಿ ಜೀವನ ಸಾಗಿಸುತ್ತಿರುವ ಜನಸಾಮಾನ್ಯರ ಬದುಕು ಮತ್ತಷ್ಟು ದುಸ್ತರವಾಗುವ ಸಾಧ್ಯತೆ ಹೆಚ್ಚಿದೆ.

ಇಸ್ರೇಲ್, ಅಮೆರಿಕ ಹಾಗೂ ಇರಾನ್ ದೇಶಗಳ ಈ ವರ್ತನೆಯಿಂದ ಜಗತ್ತಿಗೆ ಹಲವು ಗಂಡಾಂತರಗಳು ಎದುರಾಗಿವೆ. ಯುದ್ಧ-ಸಂಘರ್ಷ ಇವೆಲ್ಲವೂ ಮನುಷ್ಯನ ಮನದಲ್ಲಿ ಮೊದಲು ಹುಟ್ಟಿಕೊಳ್ಳುತ್ತವೆ. ಆ ಬಳಿಕ ವಾಸ್ತವಿಕ ಸಮರ ಅನಾವರಣಗೊಳ್ಳುತ್ತದೆ ಎನ್ನುವ ಮಾತಿದೆ. ಈ ಹಿನ್ನೆಲೆಯಲ್ಲಿ ಯುದ್ಧದ ಹಪಾಹಪಿಗೆ ಜಿದ್ದಾಜಿದ್ದಿಗೆ ಇಳಿದಿರುವ ಈ ರಾಷ್ಟ್ರಗಳು ಜಗತ್ತಿನ ಜನರ ಭವಿಷ್ಯದ ದೃಷ್ಟಿಯಿಂದ ಶಾಂತಿ ನೆಮ್ಮದಿಗೆ ಹೆಚ್ಚು ಬೆಲೆ ಕೊಟ್ಟು ಯುದ್ಧದಿಂದ ಹಿಂದೆ ಸರಿಯಬೇಕಿದೆ.

ವಿಶ್ವಸಂಸ್ಥೆಯು ಯುದ್ಧದ ಸಮಯದಲ್ಲಿ ಶಾಂತಿ ಸ್ಥಾಪನೆ, ಸಂಘರ್ಷ ತಗ್ಗಿಸುವಿಕೆ ಮತ್ತು ಮಾನವೀಯ ನೆರವು ನೀಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂದೆಲ್ಲ ಪಠ್ಯಪುಸ್ತಕಗಳಲ್ಲಿ ಓದಿದ್ದೋ.... ಶಿಕ್ಷಕರು ಕೂಡ ಅದನ್ನೇ ಹೇಳಿಕೊಟ್ಟಿದ್ದರು. ಆದರೆ ಈ ಯುದ್ಧದಿಂದ ಜಾಗತಿಕ ಮಟ್ಟದಲ್ಲಿ ಏರುಪೇರು ಆಗುತ್ತಿದ್ದರೂ ವಿಶ್ವಸಂಸ್ಥೆಯು ಮೌನವಾಗಿರುವುದು ವಿಪರ್ಯಾಸ. ಮಾನವೀಯ ಮೌಲ್ಯಗಳ ಕರಗುವಿಕೆಯ ಮೌನರೋದನಕ್ಕೆ ಜಗತ್ತು ಕಿವಿಯಾಗಬೇಕಿದೆ. ಬರಲಿರುವ ನಾಳೆಗಳ ಸುಂದರ ಜಗತ್ತಿನ ಉಳಿವಿಗೆ ಒಳಿತಿಗೆ ಮನುಕುಲ ಒಂದಾಗಬೇಕಿದೆ. ಇಲ್ಲದಿದ್ದರೆ 'ನಾವು ಯುದ್ಧವನ್ನು ಕೊನೆಗಾಣಿಸಬೇಕು. ಇಲ್ಲವಾದರೆ ಯುದ್ಧವೇ ನಮ್ಮನ್ನು ಕೊನೆಗಾಣಿಸುತ್ತದೆ' ಎಂಬ ಜಾನ್ ಎಫ್ ಕೆನಡಿಯವರ ಮಾತು ದಿಟವಾಗುವುದು ದೂರವಿಲ್ಲ!

-ಹರಳಹಳ್ಳಿ ಪುಟ್ಟರಾಜು, ಪಾಂಡವಪುರ.

ನಗರ ವಿಸ್ತರಣೆಯಿಂದ ಹಸಿರೀಕರಣ ಕುಸಿತ

ಮಾನ್ಯರೆ,

ಮೈಸೂರು ನಗರವು ತನ್ನ ಸ್ವಚ್ಛತೆ, ಸುಂದರತೆ ಮತ್ತು ಹಸಿರು ಪರಿಸರಕ್ಕಾಗಿ ಪ್ರಸಿದ್ಧವಾಗಿದೆ. ವಿಶಾಲವಾದ ರಸ್ತೆಯಲ್ಲಿ ಸಾಲಾಗಿರುವ ಮರಗಳು, ಉದ್ಯಾನಗಳು ಮತ್ತು ಮುಕ್ತ ಪ್ರದೇಶಗಳು ಇಲ್ಲಿನ ವಿಶೇಷ. ಆದರೆ ಇತ್ತೀಚಿನ ದಿನಗಳಲ್ಲಿ ನಗರವು ವೇಗವಾಗಿ ವಿಸ್ತರಿಸುತ್ತಿರುವ ಹಿನ್ನೆಲೆ ಹಸಿರೀಕರಣ ಕಡಿಮೆಯಾಗಿದೆ. ರಸ್ತೆ ವಿಸ್ತರಣೆ ಯೋಜನೆಗಳ ಅಭಿವೃದ್ಧಿ ಅವಶ್ಯಕವಾದರೂ ಅನಿಯಂತ್ರಿತ ನಗರ ವಿಸ್ತರಣೆಗೆ ಅನೇಕ ಮರಗಳ ಕಡಿತಕ್ಕೆ ಕಾರಣವಾಗುತ್ತಿದ್ದು, ನಗರದ ಹಸಿರು ಸೌಂದರ್ಯ ಕ್ರಮೇಣ ಕುಗ್ಗುವುದರ ಜೊತೆಗೆ ನಗರದ ತಾಪಮಾನ ಹಾಗೂ ವಾಯುಮಾಲಿನ್ಯ ಹೆಚ್ಚಾಗುವ ಸಾಧ್ಯತೆ ಇದೆ. ಆದ್ದರಿಂದ ಸರ್ಕಾರವು ಹೊಸ ಯೋಜನೆಗಳಲ್ಲಿ ಮರ-ಗಿಡಗಳನ್ನು ನೆಡುವ ಜವಾಬ್ದಾರಿಗಳನ್ನು ತೆಗೆದುಕೊಂಡು ನಗರದ ಪರಿಸರ ಸಂರಕ್ಷಣೆಗೆ ಮಹತ್ವ ನೀಡಬೇಕು. ಆಗ ಮಾತ್ರ ಮೈಸೂರು ನಗರವು ಭವಿಷ್ಯದಲ್ಲಿಯೂ ಸ್ವಚ್ಛ, ಸುಂದರ ಮತ್ತು ಪರಿಸರ ಸ್ನೇಹಿ ನಗರವಾಗಿ ಉಳಿಯಲು ಸಾಧ್ಯ.

-ಕಿಶನ್, ಮಹಾರಾಜ ಕಾಲೇಜು ಪತ್ರಿಕೋದ್ಯಮ ವಿದ್ಯಾರ್ಥಿ, ಮೈಸೂರು.

ಸೌರಶಕ್ತಿ ಹೆಸರಲ್ಲಿ ಕಪ್ಪು ಹಣ ಚಲಾವಣೆ

ಮಾನ್ಯರೆ,

ಇತ್ತೀಚಿನ ದಿನಗಳಲ್ಲಿ ರಾಜ್ಯದಲ್ಲಿ ಸೌರಶಕ್ತಿ ಮತ್ತು ಪವನ ವಿದ್ಯುತ್ ಯೋಜನೆಗಳು ಜನಸಾಮಾನ್ಯರ ಹಿತಕ್ಕಿಂತ ಹೆಚ್ಚಾಗಿ ಪ್ರಭಾವಿ ರಾಜಕಾರಣಿಗಳು, ಸಿನಿಮಾ ತಾರೆಯರು ಮತ್ತು ಉದ್ಯಮಿಗಳ ಕಪ್ಪು ಹಣವನ್ನು ಬಿಳಿಯಾಗಿಸುವ ಸುರಕ್ಷಿತ ತಾಣಗಳಾಗಿ ಪರಿವರ್ತನೆಯಾಗುತ್ತಿರುವುದು ಆತಂಕಕಾರಿ ವಿದ್ಯಮಾನವಾಗಿದೆ.

ಪ್ರಸ್ತುತ ವಿದ್ಯುತ್ ಬೇಡಿಕೆ 10,734 ಮೆಗಾವ್ಯಾಟ್‌ನಿಂದ 17,924 ಮೆಗಾವ್ಯಾಟ್ ಆಸುಪಾಸಿನಲ್ಲಿದ್ದರೂ ವ್ಯವಸ್ಥಿತವಾಗಿ ಬೇಡಿಕೆಯನ್ನು ಮೂರು ಪಟ್ಟು ಹೆಚ್ಚು ತೋರಿಸುವ ಮೂಲಕ ಖಾಸಗಿ ಹೂಡಿಕೆದಾರರಿಗೆ ಮಣೆ ಹಾಕಲಾಗುತ್ತಿದೆ. ಇದು ಕೇವಲ ಅಂಕಿಅಂಶಗಳ ಆಟವಲ್ಲ ಬದಲಿಗೆ ಕಪ್ಪು ಹಣವನ್ನು ಸೌರ ಫಲಕಗಳ ಅಡಿಯಲ್ಲಿ ಹೂಡಿಕೆ ಮಾಡಿ ಕಾನೂನುಬದ್ಧಗೊಳಿಸುವ ಸಂಚಾಗಿದೆ.

ವ್ಯವಸ್ಥೆಯಲ್ಲಿನ ಅತಿದೊಡ್ಡ ಲೋಪವೆಂದರೆ ಹೂಡಿಕೆದಾರರ ಆರ್ಥಿಕ ಮೂಲದ ಬಗ್ಗೆ ಯಾವುದೇ ಕಟ್ಟುನಿಟ್ಟಿನ ಪರಿಶೀಲನೆ ಇಲ್ಲದೆ ಟೆಂಡರ್‌ಗಳನ್ನು ನೀಡುವುದು. ಕೇಂದ್ರ ವಿದ್ಯುತ್ ಪ್ರಾಧಿಕಾರದ ವರದಿಯು ವಿದ್ಯುತ್ ವಾರ್ಷಿಕ ಬೆಳವಣಿಗೆ ಕೇವಲ 3.93% ಇರಲಿದೆ ಎಂದು ಹೇಳಿದ್ದರೂ ಅದಕ್ಕೆ ವಿರುದ್ಧವಾಗಿ ಅತಿಯಾದ ಬೇಡಿಕೆಯನ್ನು ಸೃಷ್ಟಿಸಿ ದುಬಾರಿ ವಿದ್ಯುತ್ ಖರೀದಿ ಒಪ್ಪಂದಗಳನ್ನು ಮಾಡಿಕೊಳ್ಳಲಾಗುತ್ತಿದೆ.

ಈ ಪ್ರಕ್ರಿಯೆ ಸಾರ್ವಜನಿಕ ಸಂಸ್ಥೆಗಳನ್ನು ದುರ್ಬಲಗೊಳಿಸುವುದಲ್ಲದೆ ಅಂತಿಮವಾಗಿ ವಿದ್ಯುತ್ ದರ ಏರಿಕೆ ಮೂಲಕ ಸಾಮಾನ್ಯ ಗ್ರಾಹಕರಿಗೆ ದೊಡ್ಡ ಆರ್ಥಿಕ ಹೊರೆಯಾಗುತ್ತಿದೆ. ಸರ್ಕಾರವು ಈ ಕೂಡಲೇ ಸೌರ ಟೆಂಡರ್‌ಗಳ ಪಾರದರ್ಶಕತೆ ಕಾಯ್ದುಕೊಳ್ಳಲು ಮತ್ತು ಅಕ್ರಮ ಹೂಡಿಕೆದಾರರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಮುಂದಾಗಬೇಕು. **-ಡಾ.ವಿಜಯಕುಮಾರ ಎಚ್.ಕೆ., ಮೈಸೂರು.**

ರಾಮಸ್ವಾಮಿ ವೃತ್ತದಲ್ಲಿ ಶೌಚಾಲಯ ನಿರ್ಮಿಸಿ

ಮಾನ್ಯರೆ,

ಮೈಸೂರಿನ ರಾಮಸ್ವಾಮಿ ವೃತ್ತದ ವ್ಯಾಪ್ತಿಯಲ್ಲಿ ಪ್ರತಿನಿತ್ಯ ಸಾವಿರಾರು ಜನರು ಸಂಚರಿಸುವ ಪ್ರಮುಖ ಸ್ಥಳವಾಗಿದೆ. ಇಲ್ಲಿ ವಿದ್ಯಾರ್ಥಿಗಳು, ಉದ್ಯೋಗಿಗಳು, ವ್ಯಾಪಾರಿಗಳು ಹಾಗೂ ಸಾರ್ವಜನಿಕರು ನಿರಂತರವಾಗಿ ಸಂಚಾರ ಮಾಡುತ್ತಾರೆ. ಈ ಪ್ರದೇಶದ ಸುತ್ತಮುತ್ತ ಹಲವು ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಣ ಸಂಸ್ಥೆಗಳೂ ಇರುವುದರಿಂದ ವಿದ್ಯಾರ್ಥಿಗಳ ಸಂಖ್ಯೆಯೂ ಹೆಚ್ಚಾಗಿದೆ.

ಆದರೆ ಇಷ್ಟು ಜನ ಸಂಚಾರ ಇರುವ ಸ್ಥಳದಲ್ಲಿ ಸಾರ್ವಜನಿಕ ಶೌಚಾಲಯಗಳ ಕೊರತೆ ಎದ್ದು ಕಾಣುತ್ತಿದೆ. ಈ ಕಾರಣದಿಂದ ಕೆಲವರು ಅನಿವಾರ್ಯವಾಗಿ ರಸ್ತೆ ಬದಿಗಳಲ್ಲಿ .... ನಡೆಸುವ ಪರಿಸ್ಥಿತಿ ಉಂಟಾಗುತ್ತಿದೆ. ಇದರಿಂದ ಪರಿಸರ ಅಶುಚಿಯಾಗುವುದರ ಜೊತೆಗೆ ಸಾರ್ವಜನಿಕರಿಗೆ ಅಸೌಕರ್ಯ ಹಾಗೂ ಆರೋಗ್ಯ ಸಮಸ್ಯೆಗಳಿಗೂ ಕಾರಣವಾಗಬಹುದು. ಆದ್ದರಿಂದ ಈ ವ್ಯಾಪ್ತಿಯಲ್ಲಿ ಒಂದು ಸಾರ್ವಜನಿಕ ಶೌಚಾಲಯವನ್ನು ನಿರ್ಮಿಸುವ ಬಗ್ಗೆ ಮೈಸೂರು ಮಹಾನಗರ ಪಾಲಿಕೆ ಹಾಗೂ ಸಂಬಂಧಪಟ್ಟ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

-ಪ್ರಕಾಶ್ ವಣಗೇರಿ, ಮಹಾರಾಜ ಕಾಲೇಜು ಪತ್ರಿಕೋದ್ಯಮ ವಿದ್ಯಾರ್ಥಿ.



ಜಿ. ಎಲ್. ತ್ರಿಪುರಾಂತಕ

ಮೊ: 96866-77284

ಅರಿವು

ಹೌಸ್‌ಗಳು ಮೆರೆಯುತ್ತಿವೆ; ಹೋಮ್‌ಗಳು ಮರೆಯಾಗುತ್ತಿವೆ...!

ಮನೆ ಎಂದಾಕ್ಷಣ ಕೆಲವರಿಗೆ ಇಟ್ಟಿಗೆ, ಮರಳು, ಸಿಮೆಂಟ್, ಮರಮುಟ್ಟುಗಳಿಂದ ನಿರ್ಮಾಣವಾದ ಕಟ್ಟಡ ಎಂಬ ಚಿತ್ರ ಮನದಲ್ಲಿ ಮೂಡುತ್ತದೆ. ಮತ್ತೆ ಕೆಲವರಿಗೆ ಪ್ರೀತಿ, ವಿಶ್ವಾಸ, ನಂಬಿಕೆ, ಸುರಕ್ಷತಾ ಭಾವ, ಬಾಂಧವ್ಯಗಳಿಂದ ಕೂಡಿರುವ ಒಂದು ಸುಂದರ ತಾಣ ಎಂಬ ಚಿತ್ರ ಮೂಡುತ್ತದೆ.

ಮನೆ ಎಂದರೆ ಕೇವಲ ದೇಹದ ಅಗತ್ಯಗಳನ್ನು ಪೂರೈಸುವ ಆಗರ ಎಂದು ತಿಳಿದಿರುವವರೇ ಹೆಚ್ಚು. ಒಂದು ಹೋಟೆಲ್‌ನ ಕೊಠಡಿಯು ಇನ್ನೂ ಉತ್ತಮ ರೀತಿಯಲ್ಲಿ ದೇಹದ ಅಗತ್ಯಗಳನ್ನು ಒದಗಿಸಬಹುದು, ಸೌಖ್ಯವನ್ನು ನೀಡಬಹುದು. ಆದರೆ ನೆಮ್ಮದಿಯ ನೆಲವೀಡು ಎಂದರೆ ಅದು ಮನೆ. ಇಂಗ್ಲಿಷ್‌ನಲ್ಲಿ ಕಟ್ಟಡವನ್ನು ಹೌಸ್ ಎಂದು ಕರೆದರೆ, ಸಂಬಂಧಗಳ ಮಧುರ ತಾಣವನ್ನು ಹೋಮ್ ಎನ್ನಲಾಗುತ್ತದೆ. ಆದರೆ ಕನ್ನಡದಲ್ಲಿ ಮನೆ, ಗೃಹ, ನಿವಾಸ, ಆಲಯ ಇಂತಹ ಪದಗಳಿಂದ ಕರೆದರೂ ಇಂಗ್ಲಿಷ್ ಭಾಷೆಯ ರೀತಿಯಲ್ಲಿ ವರ್ಗೀಕರಿಸುವಂತೆ ಇಲ್ಲ. ಏನೇ ಆಗಲಿ ಹೌಸ್ ಒಂದನ್ನು ಹೋಮ್ ಮಾಡುವ ಶಕ್ತಿ ಇರುವುದು ಮಹಿಳೆಗೆ ಮಾತ್ರ ಎನ್ನಬಹುದು.

'ನಮ್ಮನೆ' ಪದವು ಒಂದು ರೀತಿಯ ಸಾಂತ್ವನ ತಾಣದಂತೆ ಕಾಣುತ್ತದೆ. ಒಬ್ಬರ ಬರುವಿಕೆಗಾಗಿ ಕಾಯುವವರು, ಬರುವುದು ತಡವಾದರೆ ದೂರವಾಣಿ ಕರೆ ಮಾಡುವವರು, ಖಾಯಿಲೆ ಬಿದ್ದರೆ ಆರೈಕೆ ಮಾಡುವವರು, ಯಶಸ್ಸಿಗೆ ಪ್ರಾರ್ಥಿಸುವವರು, ಗೆಲುವನ್ನು ಸಂಭ್ರಮಿಸುವವರು, ಸೋಲಿಗೆ ಸಾಂತ್ವನ ಹೇಳುವವರು ಇವೆಲ್ಲವೂ ಲಭ್ಯವಿರುವುದು ಮನೆಯೆಂಬ ಆಲಯದಲ್ಲಿ ಮಾತ್ರ. ಮನೆಯಲ್ಲಿ ಜೀವಗಳು ಜೀವಂತಿಕೆಯಿಂದ ಇದ್ದರೆ ಸಾಲದು, ಭಾವಗಳಿಗೆ ಜೀವಂತಿಕೆ ಇರಬೇಕು. ಸದಸ್ಯರು ಬದುಕಿದ್ದರೆ ಸಾಲದು, ಸಂಬಂಧಗಳು ಬದುಕಿರಬೇಕು.

ಎಷ್ಟೇ ಸ್ವಾವಲಂಬಿಯಾದರು ಪ್ರೀತಿಗೆ ಪರಾವಲಂಬಿಯಾಗಿ ಮನೆಯ ಸದಸ್ಯರು ಇರಬೇಕು. ಆಗ ಅದು ಮನೆ ಎನಿಸಿಕೊಳ್ಳುತ್ತದೆ. ಇಲ್ಲವಾದರೆ ಅದೊಂದು ಕೇವಲ ಕಟ್ಟಡವಾಗುತ್ತದೆ. ಮನೆ ಚಿಕ್ಕದಾಗಿದ್ದರೂ ಹೇಗೋ ಹೊಂದಾಣಿಕೆ ಮಾಡಿಕೊಂಡು ಬದುಕಬಹುದು, ಆದರೆ ಮನಸ್ಸುಗಳು ಚಿಕ್ಕದಾಗಿ, ಮನೆ ಎಷ್ಟೇ ವಿಶಾಲವಾಗಿದ್ದರೂ ಆ ಮನೆಯಲ್ಲಿ ಇರಲು ಸಾಧ್ಯವಾಗದು.

ಇಂದು ಜನರು ತಮ್ಮ ಆರ್ಥಿಕ ಶಕ್ತಿಯಾನುಸಾರ ಮನೆಗಳನ್ನು ನಿರ್ಮಿಸುತ್ತಿಲ್ಲ. ಶಕ್ತಿ ಮೀರಿ ಸಾಲಮಾಡಿ ಮಹಲುಗಳನ್ನು ನಿರ್ಮಿಸುತ್ತಾರೆ. ಅಂತಹ ಬಹುತೇಕ ಮಹಲುಗಳಲ್ಲಿ ಭಾವಗಳಿಗೆ ಅವಕಾಶ ಕೊರತೆ ಇದ್ದು, ತೋರಿಕೆಯ ಜೀವನಕ್ಕೆ ಹೆಚ್ಚು ಆದ್ಯತೆ ನೀಡಲಾಗುತ್ತದೆ. ಮನೆಯ ನೆಲ, ಗೋಡೆ, ಛಾವಣಿಗಳು ಮೆರಗು ಹೊಂದಿದ್ದರೂ, ಸಂಬಂಧಗಳು ಮಾತ್ರ ಮೆರಗು ಕಳೆದು ಕೊಂಡಿರುತ್ತವೆ. ಅನೇಕ ಮನೆಗಳಲ್ಲಿ ವಿಶೇಷ ದಿನಗಳಂದು ಸಂಬಂಧಿಗಳಿಗೆ ಗಿಫ್ಟ್ ಕೊಡಲು ಯಾರೂ ಹಿಂಜರಿಯುವುದಿಲ್ಲ. ಆದರೆ ಅಗತ್ಯವಿರುವಷ್ಟು ಸಮಯವನ್ನೇ ನೀಡದ ಸಂದರ್ಭ ಒದಗಿ ಬರುವುದು ಉಂಟು. ಎಲ್ಲರ ಮನೆಯಲ್ಲಿ ಹೀಗೆ ಇರುತ್ತದೆ ಎಂದು ಹೇಳುತ್ತಿಲ್ಲ. ಇಂದಿಗೂ ಕೆಲವು ಅವಿಭಕ್ತ ಕುಟುಂಬಗಳಿದ್ದು, ಅಲ್ಲಿನ ಸಂಭ್ರಮ, ಸಡಗರವೇ ಬೇರೆ ಇರುತ್ತದೆ. ಜೇನುಗೂಡಿನ ರೀತಿಯಲ್ಲಿ ಇರುವ ಆ ನಿವಾಸಗಳಲ್ಲಿ ಎಲ್ಲರೂ ಜೇನಿನ ಸವಿಯನ್ನು ಸವಿಯುತ್ತಿರುತ್ತಾರೆ.

ಇಂದು ಮನೆಗಳಿಗೆ ಆಧುನಿಕ ಸ್ಪರ್ಶ ನೀಡಲಾಗುತ್ತಿದೆ. ಫಳಫಳನೆ ಹೊಳೆಯುವ ನೆಲಹಾಸು, ವಿಶಾಲ ಕೊಠಡಿಗಳು, ಅಟ್ಯಾಚ್ ಬಾತ್ ರೂಂಗಳು, ಕಾಟ್, ಬೆಡ್, ಸೋಫಾಗಳು, ಎ.ಸಿ.ಗಳು, ಲಿಫ್ಟ್‌ಗಳು ಹೀಗೆ... ಎಲ್ಲಾ ಆಧುನಿಕ ಸೌಕರ್ಯಗಳೂ ಲಭ್ಯವಿವೆ. ಮನೆಗಳು ಮೆರೆಯುತ್ತಿವೆ, ಆದರೆ ಒಳಗೆ ಇರುವ ಸಂಬಂಧಗಳು ಸೊರಗುತ್ತಿವೆ. ಮಹಲುಗಳಲ್ಲಿ ಮಾತಿಗಿಂತ ಮೌನಕ್ಕೆ ಹೆಚ್ಚು ಬೆಲೆ ಎನ್ನುವಂತಾಗಿದೆ. ಒಂದೇ ಮನೆಯಲ್ಲಿ ಇದ್ದರೂ ಸಣ್ಣ ಸಣ್ಣ ದ್ವೀಪಗಳಲ್ಲಿ ಬದುಕುತ್ತಿರುವಂತೆ ಗೋಚರಿಸುತ್ತದೆ. ಮನೆಯಲ್ಲಿ ಯಾವ ಸದಸ್ಯರು ಯಾವ ಸಮಯದಲ್ಲಿ ಇರುತ್ತಾರೆ ಎಂಬುದು ಮತ್ತೊಬ್ಬ ಸದಸ್ಯರಿಗೆ ತಿಳಿದಿರುವುದಿಲ್ಲ. ಯಾರಾದರೂ ಸದಸ್ಯರೊಬ್ಬರನ್ನು ಕೇಳಿಕೊಂಡು ಬಂದರೆ ಒಂದು ನಿಮಿಷ, ಫೋನ್ ಮಾಡುತ್ತೇನೆ, ಮನೆಯಲ್ಲಿ ಇದ್ದಾನೋ/ಳೋ ಇಲ್ಲವೋ? ಎನ್ನುವಷ್ಟರ ಮಟ್ಟಿಗೆ ಮನೆಗಳ ಸದಸ್ಯರು ಅಪರಿಚಿತರಂತೆ ಇರುತ್ತಾರೆ. ಇಂತಹ ಸನ್ನಿವೇಶಗಳನ್ನು ಕಂಡ ನಾನು ಆಧುನಿಕ ಬದುಕು ಎಂಬ ಕವಿತೆಯೊಂದನ್ನು ರಚಿಸಿದ್ದು, ಅಲ್ಲಿನ ಸಾಲುಗಳು ಹೀಗಿವೆ:

ದೂರವಾಗುತ್ತಿದೆ ಸಹಜ ಸರಳ ಬದುಕು
ಎಲ್ಲರಿಗೂ ಬೇಕು ಬಣ್ಣದ ಬೆಡಗಿನ ಸರಕು
ಹಾಗಾಗಿ ಎಲ್ಲೆಡೆ ಕಣ್ಣಿಗೆ ರಾಚುತ್ತಿವೆ ತಳುಕು-ಬಳುಕು

ತಲೆ ಎತ್ತುತ್ತಿವೆ ತಲೆಮಾರುಗಳಿಗೂ ನಿಲ್ಲುವ ಗಟ್ಟಿ ಮನೆಗಳು
ಅದರೊಳಗೆ ಇಣುಕುತ್ತಿವೆ ಮಾಸಿದ ಟೊಳ್ಳು ಮನಗಳು
ಅಂತಸ್ತಿನ ಅಂದಾಜಿನಲ್ಲಿ ಸೊರಗಿವೆ ಸೊಬಗಿನ ಸಂಬಂಧಗಳು



> 'ನಮ್ಮನೆ' ಪದವು ಒಂದು ರೀತಿಯ ಸಾಂತ್ವನ ತಾಣದಂತೆ ಕಾಣುತ್ತದೆ. ಒಬ್ಬರ ಬರುವಿಕೆಗಾಗಿ ಕಾಯುವವರು, ಬರುವುದು ತಡವಾದರೆ ದೂರವಾಣಿ ಕರೆ ಮಾಡುವವರು, ಖಾಯಿಲೆ ಬಿದ್ದರೆ ಆರೈಕೆ ಮಾಡುವವರು, ಯಶಸ್ಸಿಗೆ ಪ್ರಾರ್ಥಿಸುವವರು, ಗೆಲುವನ್ನು ಸಂಭ್ರಮಿಸುವವರು, ಸೋಲಿಗೆ ಸಾಂತ್ವನ ಹೇಳುವವರು ಇವೆಲ್ಲವೂ ಲಭ್ಯವಿರುವುದು ಮನೆಯೆಂಬ ಆಲಯದಲ್ಲಿ ಮಾತ್ರ. ಮನೆಯಲ್ಲಿ ಜೀವಗಳು ಜೀವಂತಿಕೆಯಿಂದ ಇದ್ದರೆ ಸಾಲದು, ಭಾವಗಳಿಗೆ ಜೀವಂತಿಕೆ ಇರಬೇಕು. ಸದಸ್ಯರು ಬದುಕಿದ್ದರೆ ಸಾಲದು, ಸಂಬಂಧಗಳು ಬದುಕಿರಬೇಕು. ಎಷ್ಟೇ ಸ್ವಾವಲಂಬಿಯಾದರು ಪ್ರೀತಿಗೆ ಪರಾವಲಂಬಿಯಾಗಿ ಮನೆಯ ಸದಸ್ಯರು ಇರಬೇಕು. ಆಗ ಅದು ಮನೆ ಎನಿಸಿಕೊಳ್ಳುತ್ತದೆ. ಇಲ್ಲವಾದರೆ ಅದೊಂದು ಕೇವಲ ಕಟ್ಟಡವಾಗುತ್ತದೆ. ಮನೆ ಚಿಕ್ಕದಾಗಿದ್ದರೂ ಹೇಗೋ ಹೊಂದಾಣಿಕೆ ಮಾಡಿಕೊಂಡು ಬದುಕಬಹುದು, ಆದರೆ ಮನಸ್ಸುಗಳು ಚಿಕ್ಕದಾಗಿದ್ದು, ಮನೆ ಎಷ್ಟೇ ವಿಶಾಲವಾಗಿದ್ದರೂ ಆ ಮನೆಯಲ್ಲಿ ಇರಲು ಸಾಧ್ಯವಾಗದು.

ಸಿಗುತ್ತಿವೆ ದಿಢೀರನೆ ಬಿಸಿಯಾಗುವ ಪಾತ್ರೆಗಳು, ಒಡೆಯದ ಸರಂಜಾಮುಗಳು
ತಣ್ಣಗಾಗುತ್ತಿವೆ ಬದುಕಿನ ಮೌಲ್ಯಗಳು, ಒಡೆಯುತ್ತಿವೆ ಪ್ರೀತಿ-ವಿಶ್ವಾಸಗಳು
ತರಗೆಲೆಗಳಾಗಿವೆ ಸಂಬಂಧ ಬೆಸೆಯುವ ನಯಿಕೆ-ತ್ಯಾಗಗಳು

ಶಿಕ್ಷಣದ ಹೆಸರಿನಲ್ಲಿ ಪೋಷಕರು ಹೂಡುತ್ತಿದ್ದಾರೆ ಮಕ್ಕಳ ಮೇಲೆ ಬಂಡವಾಳ
ಮಕ್ಕಳು ದೊಡ್ಡವರಾದ ಮೇಲೆ ತಿಳಿಯುತ್ತದೆ ಆ ಸುಶಿಕ್ಷಿತರ ಬಂಡವಾಳ
ವೃದ್ಧಾಶ್ರಮದಲ್ಲಿ ಪ್ರೀತಿ ವಂಚಿತ ಹಿರಿಯ ಜೀವಿಗಳ ಬದುಕು ತಳಮಳ!

ಒಂದೇ ಮನೆಯಲ್ಲಿ ಸಂಬಂಧಗಳು ಇದ್ದರೆ ಮಾತ್ರ ಅದು ಮನೆಯಾಗುವುದಿಲ್ಲ. ಸದಸ್ಯರ ನಡುವೆ ಒಂದು ಬೆಸುಗೆ ಇರಬೇಕು. ಎಲ್ಲರೂ ತಮ್ಮದೇ ಪ್ರಪಂಚದಲ್ಲಿ ಬದುಕಬಾರದು. ಎಷ್ಟೋ ಜನರು ಮನೆಯ ಹೊರಗಿನವರ ಜೊತೆ ಉತ್ತಮ ಬಾಂಧವ್ಯ ಹೊಂದಿರುತ್ತಾರೆ, ಮನೆಯವರೊಂದಿಗೆ ಶೀತಲ ಸಮರ ನಡೆಸುತ್ತಲೇ ಇರುತ್ತಾರೆ. ಪರಸ್ಪರ ಹೊಂದಾಣಿಕೆ, ಸಹಕಾರ, ಸೋಲುವಿಕೆ ಇದ್ದರೆ ಮಾತ್ರ ಬಾಂಧವ್ಯ ವೃದ್ಧಿಯಾಗುತ್ತದೆ. ಪ್ರತಿಷ್ಠೆ ಇದ್ದರೆ ಬಾಂಧವ್ಯಕ್ಕೆ ಆಯುಷ್ಯ ಕಡಿಮೆ ಇರುತ್ತದೆ. ಹೇಳಿ ಕೇಳಿ ಈ ಕಾಲಘಟ್ಟದಲ್ಲಿ ಅವಿಭಕ್ತ ಕುಟುಂಬ ಕಡಿಮೆ, ಅಣು ಕುಟುಂಬ ಜಾಸ್ತಿ. ಇರುವ ಮೂರ್‍ನಾಲ್ಕು ಮಂದಿಯಲ್ಲಿಯೇ ಒಮ್ಮತವಿಲ್ಲದಿದ್ದರೆ ಅದು ಮನೆಯೊಂದು ಮೂರು ಬಾಗಿಲು ಎನ್ನುವಂತೆ ಇರುತ್ತದೆ. ಇನ್ನೂ ವಿಚಿತ್ರ ಸಂಗತಿ ಎಂದರೆ ಇರುವ ನಾಲ್ಕೈದು ಮಂದಿಯಲ್ಲಿ ಹೊಂದಾಣಿಕೆ ಇಲ್ಲದೆ ಹಿರಿಯ ಜೀವಿಗಳನ್ನು ವೃದ್ಧಾಶ್ರಮಗಳಿಗೆ ಸೇರಿಸುವ ಪರಿಪಾಠ ಹೆಚ್ಚಾಗಿದೆ. ಜನರೇಶನ್ ಗ್ಯಾಪ್‌ನಿಂದ ಅನೇಕ ರೀತಿಯ ತೊಂದರೆಗಳು ಎದುರಾಗುತ್ತಿವೆ. ಅಜ್ಜಿ ಇಲ್ಲದ ಮನೆ, ಮಜ್ಜಿಗೆ ಇಲ್ಲದ ಊಟ ಎಂಬ ಗಾದೆ ಮಾತಿನಂತೆ ಇಂದು ಅನೇಕ ಅನರ್ಥಗಳು ನಡೆಯುತ್ತಿವೆ.

ಎಷ್ಟೋ ಮನೆಗಳು ಆಧುನಿಕ ಹೋಟೆಲ್ ರೀತಿ ಕಾರ್ಯ ನಿರ್ವಹಿಸುತ್ತಿರುತ್ತವೆ. ಯಾರೋ ಒಬ್ಬರು ಅಡುಗೆ ತಯಾರಿ ಮಾಡಿ ಡೈನಿಂಗ್ ಟೇಬಲ್ ಮೇಲೆ ಇರಿಸುತ್ತಾರೆ. ಉಳಿದವರು ಅವರವರ ಸಮಯಕ್ಕೆ ಸರಿಯಾಗಿ ಊಟ-ತಿಂಡಿ ಮಾಡಿ ಹೋಗುತ್ತಾರೆ. ಕನಿಷ್ಠ ರಾತ್ರಿ ಒಂದು ಹೊತ್ತಾದರೂ ಒಟ್ಟಿಗೆ ಕುಳಿತು ಊಟ ಮಾಡುವ ಸಮಯ ಹೊಂದಾಣಿಕೆಯನ್ನು ಎಷ್ಟೋ ಮನೆಗಳಲ್ಲಿ ಮಾಡಿಕೊಂಡಿರುವುದಿಲ್ಲ. ಏನಾದರೂ ವಿಷಯವಿದ್ದರೆ ಮಾತ್ರ ಮಾತುಕತೆ. ಲೋಕಾಭಿರಾಮವಾಗಿ ಮಾತನಾಡುವ ಪರಿಪಾಠ ಮರೆಯಾಗುತ್ತಿದೆ.

ಆತ್ಮಹತ್ಯೆಗಳಂತಹ ಪ್ರಕರಣಗಳು ಹೆಚ್ಚಾಗುತ್ತಿರುವುದು ಮನೆಯಲ್ಲಿ ಅಗತ್ಯ ಸಂವಹನ ಇಲ್ಲದೇ ಇರುವ ಕಾರಣಕ್ಕೆ ಎಂಬುದನ್ನು ಅರಿಯಬೇಕು. ಈ ತಾಂತ್ರಿಕ ಪ್ರಪಂಚದಲ್ಲಿ ಬಹುತೇಕರು ಯಾಂತ್ರಿಕವಾಗಿ ಬದುಕುತ್ತಿರುವುದನ್ನು ಕಾಣಬಹುದು. ಸಂಜೆ ವೇಳೆ ಕುಳಿತು ಕಷ್ಟ ಸುಖ ಹಂಚಿಕೊಳ್ಳುವಷ್ಟು ವ್ಯವಧಾನ ಇರುವುದಲ್ಲ. ಎಷ್ಟೋ ಮನೆಗಳಲ್ಲಿ ಹಿರಿಯರು ಮಕ್ಕಳು ಹಾಗು ಮೊಮ್ಮಕ್ಕಳು ಇದ್ದರೂ ಒಂಟಿತನ ಅನುಭವಿಸುತ್ತಿರುತ್ತಾರೆ. ಅವರನ್ನು ದಿನಕ್ಕೆ ಕನಿಷ್ಠ ಒಂದು ಬಾರಿಯಾದರೂ ಮಾತನಾಡಿಸುವವರು ಇರುವುದಿಲ್ಲ. ಅವರಿಗೇನು ಕಡಿಮೆ ಮಾಡಿದ್ದೇವೆ ಎನ್ನುತ್ತಾರೆ. ಆದರೆ ಅವರೊಂದಿಗೆ ಮಾತನಾಡುವುದನ್ನೇ ಕಡಿಮೆ ಮಾಡಿರುತ್ತಾರೆ.

ಇಂದು ಸಂಬಂಧಗಳು ಅಷ್ಟು ಸಂಕೀರ್ಣವಾಗಿವೆ. ಟಿ.ವಿ. ಹಾಗೂ ಮೊಬೈಲ್‌ಗಳೇ ಹೆಚ್ಚು ಆಪ್ತರಂತೆ ಆಗಿವೆ. ಮೊದಲಾದರೆ ಮನೆಯಲ್ಲಿ ಒಂದು ಟಿ.ವಿ. ಇರುತ್ತಿತ್ತು. ಒಂದೇ ಕಾರ್ಯಕ್ರಮ ಬಿತ್ತರವಾಗುತ್ತಿತ್ತು, ಮನೆಮಂದಿಯೆಲ್ಲಾ ಒಟ್ಟಿಗೆ ಕುಳಿತು ವೀಕ್ಷಿಸುತ್ತಿದ್ದರು. ಇಂದು ಅವರವರ ಕೊಠಡಿಯಲ್ಲಿ ಮನರಂಜನೆ ಪಡೆದು, ಮನೆಯವರೊಂದಿಗೆ ಸಂಪರ್ಕ ಕಡಿದುಕೊಂಡಿರುತ್ತಾರೆ. ಮೊಬೈಲ್ ಸಹಾಯದಿಂದ ಇಡೀ ವಿಶ್ವದ ಜೊತೆಗೆ ಸಂಪರ್ಕ ಸಾಧಿಸುತ್ತ ಕಾಲಕಳೆಯುವ ಜನ ತಮ್ಮ ಮನೆಮಂದಿಯ ಜೊತೆ ಕಾಲ ಕಳೆಯಲು ಬಯಸದೇ ಇರುವುದು ವಿಪರ್ಯಾಸದ ಸಂಗತಿ.

ಎಷ್ಟೇ ಹೊತ್ತಾದರೂ ಮನೆಗೆ ತಲುಪಬೇಕು ಎಂಬ ಅಪೇಕ್ಷೆ ಇದ್ದವರಿಗೆ ಮನೆ ಬೆಲೆ ಅರಿವಿರುತ್ತದೆ. ಅನೇಕರಿಗೆ ಮನೆಗೆ ತೆರಳುವುದು ಎಂದರೆ ಆಲಸ್ಯವಿರುತ್ತದೆ. ಅವರಿಗೆ ಮನೆಯ ನಿಜವಾದ ಬೆಲೆ ತಿಳಿದಿರುವುದಿಲ್ಲ. ಮನೆಗೆ ಮಾರಿ ಊರಿಗೆ ಉಪಕಾರಿ ಎನ್ನುವ ಮಂದಿಯೂ ಇರುತ್ತಾರೆ. ಮನೆಯ ಸದಸ್ಯನೊಬ್ಬ ಮನಸ್ಸು ಮಾಡಿದರೆ ಮನೆಯನ್ನು ಸ್ವರ್ಗ ಮಾಡಬಹುದು, ಅದೇ ಮನಸ್ಸು ಹಾಳು ಮಾಡಿಕೊಂಡಿದ್ದರೆ ಮನೆಯನ್ನು ನರಕ ಮಾಡಿಬಿಡಬಹುದು. ಹೊರಗೆ ಎಷ್ಟೇ ಮೋಸ, ಅನ್ಯಾಯ ಆದರೂ ನನ್ನ ಬೆನ್ನಿಗೆ ಮನೆಯವರು ಇರುತ್ತಾರೆ ಎಂಬ ನಂಬಿಕೆ ಇದ್ದರೆ ಬದುಕಿನಲ್ಲಿ ಭರವಸೆ ಇರುತ್ತದೆ. ಏನಾದರೂ ಸಾಧಿಸಲು ಹೊರಟವನಿಗೆ ಮನೆಯ ಮಂದಿಯ ಬೆಂಬಲ ಇದ್ದರೆ ಆ ಸಾಧನೆ ಸುಲಭ ಸಾಧನೆಯಾಗುತ್ತದೆ. ಯಶಸ್ಸು ಸಿಕ್ಕಾಗ ಹೆತ್ತವರು ಸಂಭ್ರಮ ಪಡುವಷ್ಟು ಯಾರೂ ಸಹ ಸಂಭ್ರಮಿಸುವುದಿಲ್ಲ. ಹಾಗೆಯೇ ಒಬ್ಬರ ಏಳಿಗೆಯನ್ನು ಸಹಿಸದೆ ಅನೇಕರು ಹೊಟ್ಟೆಕಿಚ್ಚು ಪಡಬಹುದು, ಆದರೆ ಹೆತ್ತವರು ಮಾತ್ರ ಹೊಟ್ಟೆಕಿಚ್ಚು ಪಡುವುದಿಲ್ಲ. ಅಂತಹ ನಿಸ್ವಾರ್ಥ ಜೀವಿಗಳು ಸಿಗುವುದು ಮನೆಯಲ್ಲಿ ಮಾತ್ರ ಎಂಬ ಅರಿವು ಇಂದಿನ ಪೀಳಿಗೆಯ ಮಕ್ಕಳಿಗೆ ಇರಬೇಕು.

ಮನೆಯಲ್ಲಿ ಎಷ್ಟೇ ವ್ಯವಹಾರ ಇದ್ದರೂ, ಮನೆಯವರ ನಡುವಿನ ಬಾಂಧವ್ಯದಲ್ಲಿ ವ್ಯವಹಾರ ಇರಬಾರದು. ಲಾಭನಷ್ಟ ನೋಡಿಕೊಂಡು ಸಂಬಂಧಗಳನ್ನು ಕಾಪಾಡಿಕೊಳ್ಳಬಾರದು. ಹೊರಗಡೆ ಎಷ್ಟೇ ಮುಖವಾಡ ಧರಿಸಿದ್ದರೂ, ಮನೆಯವರ ಮುಂದೆ ಮಾತ್ರ ಮುಖವಾಡ ಧರಿಸಬಾರದು. ಎಷ್ಟೇ ಅಂತಸ್ತು, ಅಧಿಕಾರವಿದ್ದರೂ ಮನೆಮಂದಿಯ ಮುಂದೆ ಒಬ್ಬ ಸಾಧಾರಣ ಸದಸ್ಯನಂತೆ ಇರಬೇಕು. ಹೊರಗಿನ ಅಂತಸ್ತಿನ ಅಹಂ ಮನೆಯಲ್ಲಿ ಪ್ರತಿಧ್ವನಿಸಬಾರದು. ಮಗ ಅಥವಾ ಮಗಳು ಎಷ್ಟೇ ದೊಡ್ಡ ಸ್ಥಾನದಲ್ಲಿದ್ದರೂ ಹೆತ್ತವರಿಗೆ ಅವರು ಮಕ್ಕಳೇ ಎಂಬುದನ್ನು ಮರೆಯಬಾರದು. ನಂಬಿದ ಮನೆಯವರಿಗೆ ಮೋಸ ಮಾಡಬಾರದು. ಹಿರಿಯರು ತಮ್ಮ ನಡೆನುಡಿಯಿಂದ ಮನೆಗೆ ಒಂದು ಹೆಸರನ್ನು ಗಳಿಸಿರುತ್ತಾರೆ. ಆ ಹೆಸರು ಹಾಳಾಗುವಂತಹ ಕೆಲಸಗಳನ್ನು ಮಾಡಬಾರದು. ಮನೆ ಚಿಕ್ಕದಿರಲಿ ಅಥವಾ ದೊಡ್ಡದಿರಲಿ, ಅದು ನಮ್ಮನೆ ಎಂಬ ಅಭಿಮಾನವಿರಬೇಕು.

ಹೂರಣ : ಪ್ರೀತಿ ಇದ್ದರೆ ಮನೆ ಆನಂದವನ, ಇಲ್ಲವಾದಲ್ಲಿ ಅದೊಂದು ಮಸಣ !

ಬಜೆಟ್‌ನಲ್ಲಿ ಗ್ರೇಡ್-1 ನಗರಪಾಲಿಕೆ ನಿರ್ಲಕ್ಷ್ಯ ಬೇಸರದ ಸಂಗತಿ

ಕೂಡಲೇ ಅನುದಾನ ಬಿಡುಗಡೆಗೆ ಮಾಜಿ ಕಾರ್ಪೋರೇಟರ್ ಕೆ.ವಿ.ಶ್ರೀಧರ್ ಆಗ್ರಹ





ಮೈಸೂರು, ಮಾ.8- ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈ ಬಾರಿಯ ತಮ್ಮ ಬಜೆಟ್‌ನಲ್ಲಿ ಬಹುನಿರೀಕ್ಷಿತ ಗ್ರೇಡ್-1 ಮೈಸೂರು ಮಹಾನಗರಪಾಲಿಕೆ ವಿಸ್ತರಣೆಗೆ ಅಗತ್ಯ ಅನುದಾನ ಘೋಷಿಸದೆ ನಿರ್ಲಕ್ಷ್ಯ ವಹಿಸಿದ್ದು, ಈ ಯೋಜನೆ ಸಾಕಾರಗೊಳ್ಳುವುದೇ ಅನುಮಾನ ಎನ್ನುವಂತಾಗಿದೆ ಎಂದು ನಗರ ಪಾಲಿಕೆ ಮಾಜಿ ಸದಸ್ಯ ಕೆ.ವಿ. ಶ್ರೀಧರ್ ಬೇಸರ ವ್ಯಕ್ತಪಡಿಸಿದ್ದಾರೆ.

ಮೈಸೂರು ಮಹಾನಗರ ಪಾಲಿಕೆಯನ್ನು ಗ್ರೇಡ್-1 ಪಾಲಿಕೆಯಾಗಿ ವಿಸ್ತರಿಸಲು ಅಧಿಸೂಚನೆ ಹೊರಡಿಸಿ ತಿಂಗಳುಗಳೇ ಕಳೆದಿವೆ. ಆದರೆ, ಅದಕ್ಕೆ ಪೂರಕವಾದ ಅನುದಾನ, ಕಾರ್ಯಕ್ರಮಗಳು ಮಾತ್ರ ಇನ್ನೂ ಜಾರಿಯಾಗಿಲ್ಲ. ಪ್ರಾಥಮಿಕ ಹಂತದ ಕಾಮಗಾರಿಗಳಿಗೆ ಏನಿಲ್ಲವೆಂದರೂ ಸಾವಿರಾರು ಕೋಟಿ ರೂಪಾಯಿ ಬೇಕಾಗುತ್ತದೆ. ಆದಾಗ್ಯೂ ಬಜೆಟ್‌ನಲ್ಲಿ ಬಿಡಿಗಾಸನ್ನೂ ನೀಡದಿರುವುದು ಅಭಿವೃದ್ಧಿಗೆ ತೊಡಕಾಗುವುದರಲ್ಲಿ ಯಾವುದೇ ಅನುಮಾನವಿಲ್ಲ ಎಂದಿದ್ದಾರೆ.

ಆದರೆ, ಇನ್ನು ಕೆಲವೇ ತಿಂಗಳಲ್ಲಿ ಚುನಾವಣೆ ನಡೆಯುವ ಗ್ರೇಟರ್ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಡಿಯಲ್ಲಿನ ಐದು ಪಾಲಿಕೆಗಳಿಗೆ ಸಾವಿರಾರು ಕೋಟಿ ರೂ.ಗಳನ್ನು ಮೀಸಲಿಟ್ಟು, ಹತ್ತಾರು ಅಭಿವೃದ್ಧಿ ಯೋಜನೆಗಳನ್ನು ಘೋಷಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಮ್ಮದೇ ಕನಸಿನ ಕೂಸಾದ ಗ್ರೇಟರ್ ಮೈಸೂರು ಬಗ್ಗೆ ಬಜೆಟ್‌ನಲ್ಲಿ ಉಲ್ಲೇಖವನ್ನೇ ಮಾಡದಿರುವುದು ಕಾಟಾಚಾರದ ಘೋಷಣೆಯೇ ಎಂಬ ಭಾವಮೂಡಿಸುತ್ತಿವೆ. ಇದು ಯಾವ ಸೀಮೆ ಸಮಸಮಾಜ ನಿರ್ಮಾಣ. ಬಜೆಟ್‌ನಲ್ಲಿ ಚುನಾವಣಾ ಆಕಾಂಕ್ಷೆಗಳಿದ್ದರೆ ಅದು ಸರ್ವತೋಮುಖ, ಸಮಾಜಮುಖಿ ಆಗಲು ಹೇಗೆ ಸಾಧ್ಯ. ಚುನಾವಣಾ ದೃಷ್ಟಿ ಇಟ್ಟುಕೊಂಡು ಬೆಂಗಳೂರಿಗೆ ಅನುದಾನದ ಹೊಳೆಯನ್ನು ಹರಿಸಿರುವ ಮುಖ್ಯಮಂತ್ರಿಯವರು, ತವರು ಜಿಲ್ಲೆಯನ್ನು ಕಡೆಗಣಿಸಿರುವುದು ಸರಿಯಲ್ಲ. ಇದು ಅವರ ಸಾಮಾಜಿಕ ನ್ಯಾಯವಲ್ಲ ಎಂದು ಪತ್ರಿಕಾ ಹೇಳಿಕೆಯಲ್ಲಿ ಕೆ.ವಿ.ಶ್ರೀಧರ್ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ದೂರದೃಷ್ಟಿಯ ಕೊರತೆ ಬಜೆಟ್

> 16 ಬಜೆಟ್ ಮಂಡನೆಯ ಅನುಭವವಿರುವ ಸಿದ್ದರಾಮಯ್ಯ ಅವರು ತಮ್ಮ 17ನೇ ಬಜೆಟ್ ಅನ್ನು ಕೇವಲ ಘೋಷಣೆಗಳಿಗಷ್ಟೇ ಸೀಮಿತಗೊಳಿಸಿರುವುದು ಬೇಸರದ ಸಂಗತಿ. ಅವರ ಈ ಬಾರಿಯ ಬಜೆಟ್ ಯಾವುದೇ ದೂರದೃಷ್ಟಿಯ ನಿರ್ದಿಷ್ಟ ಯೋಜನೆಗಳನ್ನು ಒಳಗೊಂಡಂತೆ ಕಾಣುತ್ತಿಲ್ಲ. ಆಸ್ಪತ್ರೆ ಮೇಲ್ದರ್ಜೆಗೇರಿಸಲು, ಪ್ರವಾಸಿ ತಾಣಗಳನ್ನು ಅಭಿವೃದ್ಧಿಪಡಿಸಲು ಬಜೆಟ್ ಮಂಡನೆಯೇ ಆಗಬೇಕಿಲ್ಲ. ಅವೆಲ್ಲವೂ ನಿತ್ಯದ ಆಡಳಿತ ಭಾಗ. ಬಜೆಟ್ ಯಾವಾಗಲೂ ದೂರದೃಷ್ಟಿಯ ಯೋಜನೆಗಳನ್ನು ಹೊಂದಿರಬೇಕು. ದೀರ್ಘಾವಧಿಯಲ್ಲಿ ಅವುಗಳ ಫಲ ಜನಸಮುದಾಯಕ್ಕೆ ಸಿಗಬೇಕು. ಅಂತಹ ಅವಕಾಶವನ್ನು ಮುಖ್ಯಮಂತ್ರಿಗಳು ಕಳೆದುಕೊಂಡಿದ್ದಾರೆ. ಗ್ರೇಡ್-1 ಪಾಲಿಕೆಗೆ ಅನುದಾನ ನೀಡದ ಸಿದ್ದರಾಮಯ್ಯ ಅವರ ಬಜೆಟ್ ದೂರದೃಷ್ಟಿಯ ಕೊರತೆಯಿಂದ ಕೂಡಿದೆ. **-ಕೆ.ವಿ.ಶ್ರೀಧರ್.**

ಸ್ಥಳೀಯ ಸಂಸ್ಥೆಗಳ ಕತ್ತು ಹಿಸುಕಬೇಡಿ: ರಾಜ್ಯ ಸ್ಥಳೀಯ ಸಂಸ್ಥೆಗಳಲ್ಲಿ ಜನಪ್ರತಿನಿಧಿಗಳ ಅಧಿಕಾರಾವಧಿ ಮುಗಿದು ಬಹಳ ಕಾಲವಾಗಿದೆ. ಆದರೆ, ಅವುಗಳಿಗೆ ಚುನಾವಣೆ ನಡೆಸಬೇಕಾದ ರಾಜ್ಯ ಸರ್ಕಾರ ನಾನಾ ಕುಂಟು ನೆಪಗಳನ್ನು ಹೇಳುತ್ತಾ ಚುನಾವಣೆ ಮುಂದೂಡುತ್ತಲೇ ಇದೆ. ರಾಜೀವ್ ಗಾಂಧಿ ಅವರ ಕಾಲದಲ್ಲಿ ಸಂವಿಧಾನದ 74ನೇ ಕಾಯಿದೆ ಅಡಿ ಅಧಿಕಾರ ವಿಕೇಂದ್ರೀಕರಣಕ್ಕೆ ನಾಂದಿ ಹಾಡಲಾಯಿತು. ಅಲ್ಲದೇ, ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸಿ ಆಡಳಿತವನ್ನು ಜನರ ಮನೆ ಬಾಗಿಲಿಗೆ ತೆಗೆದುಕೊಂಡು ಹೋಗುವಂತೆ ಸೂಚಿಸಲಾಯಿತು. ಆದರೆ, ರಾಜ್ಯದಲ್ಲಿ ಕಾಂಗ್ರೆಸ್ ಸರಕಾರವೇ ಇದ್ದರೂ ತಮ್ಮದೇ ಪಕ್ಷದ ಮಹತ್ವಾಕಾಂಕ್ಷೆ ಯೋಜನೆಯೊಂದನ್ನು ಹಳ್ಳ ಹಿಡಿಯುವಂತೆ ಮಾಡಿ, ಆ ಮೂಲಕ ಸ್ಥಳೀಯ ಜನರ ಸಮಸ್ಯೆಗಳಿಗೆ ತುರ್ತು ಸ್ಪಂದನೆ ಸಿಗದಂತೆ ಮಾಡಿರುವುದು ಅಕ್ಷಮ್ಯ ಎಂದು ಹೇಳಿದ್ದಾರೆ.

ಕೂಡಲೇ ಚುನಾವಣೆ ನಡೆಸಿ: ಜನಸಾಮಾನ್ಯರ ಸಮಸ್ಯೆಗಳನ್ನು ಸ್ಥಳೀಯವಾಗಿಯೇ ಪರಿಹರಿಸಿಕೊಳ್ಳಲಿ ಎಂಬ ಉದ್ದೇಶದಿಂದ ಸ್ಥಳೀಯ ಸಂಸ್ಥೆಗಳನ್ನು ರಚಿಸಲಾಯಿತು. ಆದರೆ, ರಾಜ್ಯದಲ್ಲಿ ಸ್ಥಳೀಯ ಸಂಸ್ಥೆಗಳ ಜನಪ್ರತಿನಿಧಿಗಳು ಇಲ್ಲದೆ ಸಾಕಷ್ಟು ಸಮಯವಾಗಿದೆ. ಮೈಸೂರು ಮಹಾನಗರ ಪಾಲಿಕೆಯಲ್ಲಿ ಸದಸ್ಯರು ಇಲ್ಲದೆ 3 ವರ್ಷಗಳಾಗುತ್ತಾ ಬಂದಿದೆ. ಇದೀಗ ಮೈಸೂರು ನಗರದ ಗ್ರೇಡ್-1 ಪಾಲಿಕೆಯಾಗಿ ಮೇಲ್ದರ್ಜೆಗೇರಿದೆ. ಆದರೆ, ಸದಸ್ಯರಿಲ್ಲದೆ ಜನರ ಸಮಸ್ಯೆಗಳನ್ನು ಕೇಳುವವರು ಇಲ್ಲದಂತಾಗಿದೆ. ನಗರವು ದಿನೇ ದಿನೆ ಬೆಳೆಯುತ್ತಿದ್ದು, ನಿತ್ಯ ಸಾಕಷ್ಟು ಸಮಸ್ಯೆಗಳು ಉದ್ಭವಿಸುತ್ತಿವೆ. ಅವುಗಳ ನಿವಾರಣೆಗೆ ಕಾರ್ಪೊರೇಟರ್‌ಗಳ ಅಗತ್ಯವಿದೆ. ಈಗಲಾದರೂ ಮುಖ್ಯಮಂತ್ರಿಗಳು ಅಧಿಕಾರ ವಿಕೇಂದ್ರೀಕರಣದ ಮಹತ್ವವನ್ನು ಅರಿತು ಶೀಘ್ರವೇ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಲು ತುರ್ತು ಕ್ರಮ ಕೈಗೊಳ್ಳಬೇಕು. ಆ ಮೂಲಕ ಸಾರ್ವಜನಿಕರ ಸ್ಥಳೀಯ ಸಮಸ್ಯೆಗಳ ಸುಗಮ ನಿವಾರಣೆಗೆ ಸಹಕರಿಸಬೇಕು ಎಂದು ಮನವಿ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಭಾರತದ ಮೊದಲ 'ರಿಂಗ್ ಮೆಟ್ರೋ' ಉದ್ಘಾಟಿಸಿದ ಪ್ರಧಾನಿ ಮೋದಿ




ನವದೆಹಲಿ: ದೇಶದ ಮೊದಲ 'ರಿಂಗ್ ಮೆಟ್ರೋ' ಸೇರಿದಂತೆ ದೆಹಲಿ ಮೆಟ್ರೋದ ಎರಡು ಹೊಸ ಕಾರಿಡಾರ್‌ಗಳಿಗೆ ಪ್ರಧಾನಿ ಮೋದಿ ಭಾನುವಾರ ಚಾಲನೆ ನೀಡಿದರು.

ಮಜ್ಲಿಸ್ ಪಾರ್ಕ್–ಮೌಜ್‌ಪುರ್ ಬಾಬರ್‌ಪುರ್(ಪಿಂಕ್ ಲೈನ್) ಕಾರಿಡಾರ್ ಸುಮಾರು 12.3 ಕಿ.ಮೀ. ಉದ್ದವಿದ್ದರೆ, ದೀಪಾಲಿ ಚೌಕ್–ಮಜ್ಲಿಸ್ ಪಾರ್ಕ್(ಮೆಜೆಂಟಾ ಲೈನ್) ಕಾರಿಡಾರ್ ಸುಮಾರು 9.9 ಕಿ.ಮೀ. ಉದ್ದವಿದೆ.

ಮಜ್ಲಿಸ್ ಪಾರ್ಕ್–ಮೌಜ್‌ಪುರ್–ಬಾಬರ್‌ಪುರ್ ಕಾರಿಡಾರ್ 8 ಎತ್ತರದ ನಿಲ್ದಾಣಗಳನ್ನು ಒಳಗೊಂಡಿದ್ದು, ಇದು ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ಮಜ್ಲಿಸ್ ಪಾರ್ಕ್–ಶಿವವಿಹಾರ್ ಪಿಂಕ್ ಲೈನ್‌ನ ಭಾಗವಾಗಿದೆ. ಹೊಸ ಮಾರ್ಗದ ಸೇರ್ಪಡೆಯೊಂದಿಗೆ ಪಿಂಕ್ ಲೈನ್ ಸುಮಾರು 71.56 ಕಿ.ಮೀ.ಗೆ ವಿಸ್ತರಿಸಿದೆ. ಇದು ಭಾರತದ ಮೊದಲ ಸಂಪೂರ್ಣ ಕಾರ್ಯಾಚರಣೆಯ 'ರಿಂಗ್‌ಮೆಟ್ರೋ' ಆಗಿದೆ.

3 ಹೊಸ ಕಾರಿಡಾರ್: ದೆಹಲಿ ಮೆಟ್ರೋ ವಿಸ್ತರಣಾ ಯೋಜನೆಯ ಹಂತ–V(ಎ) ಅಡಿಯಲ್ಲಿ ರಾಮಕೃಷ್ಣ ಆಶ್ರಮ ಮಾರ್ಗದಿಂದ ಇಂದ್ರ ಪ್ರಸ್ಥದ ವರೆಗಿನ ಸೆಂಟ್ರಲ್ ವಿಸ್ಟಾ ಕಾರಿ ಡಾರ್, ಏರೋಸಿಟಿಯಿಂದ ಇಂದಿರಾ ಗಾಂಧಿ ದೇಶೀಯ ವಿಮಾನ ನಿಲ್ದಾಣ ಟರ್ಮಿನಲ್–1 ರವರೆಗಿನ ಗೋಲ್ಡನ್ ಲೈನ್ ವಿಸ್ತರಣೆ ಮತ್ತು ತುಘಲಕಾ ಬಾದ್‌ನಿಂದ ಕಾಳಿಂದಿ ಕುಂಜ್‌ವರೆಗಿನ ಮತ್ತೊಂದು ಗೋಲ್ಡನ್ ಲೈನ್ ವಿಸ್ತ ರಣೆಯ ಮೂರು ಹೊಸ ಕಾರಿಡಾರ್‌ಗಳಿಗೆ ಪ್ರಧಾನಿ ಮೋದಿ ಅಡಿಪಾಯ ಹಾಕಿದರು.

ಡಿಬಾರ್ ಮಾಡಿದ್ದ ಸಿಬಿಎಸ್‌ಇ ಆದೇಶ ಎತ್ತಿಹಿಡಿದ ಹೈಕೋರ್ಟ್

ಬೆಂಗಳೂರು: ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್ ಒಯ್ದಿದ್ದ ಆರೋಪದಡಿ 12ನೇ ತರಗತಿಯ ವಿದ್ಯಾರ್ಥಿಯನ್ನು 'ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿ(ಸಿಬಿಎಸ್‌ಇ)' ಎರಡು ವರ್ಷ ಡಿಬಾರ್ ಮಾಡಿ ಆದೇಶಿಸಿದ್ದನ್ನು ಹೈಕೋರ್ಟ್ ಎತ್ತಿಹಿಡಿದಿದೆ.

ಈ ಸಂಬಂಧ ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಸಿಬಿಎಸ್‌ಇ ಮತ್ತು ನವದೆಹಲಿಯ, 'ಪರೀಕ್ಷಾ ನಿಯಂತ್ರಣ ಕೇಂದ್ರ' ಸಲ್ಲಿಸಿದ್ದ ರಿಟ್ ಮೇಲ್ಮನವಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

ಸಿಬಿಎಸ್‌ಇ ಪಠ್ಯಕ್ರಮದಲ್ಲಿ ಕಲಿಯುತ್ತಿರುವ ನಗರದ ವಿದ್ಯಾರ್ಥಿಯೊಬ್ಬ 12ನೇ ತರಗತಿ 'ದೈಹಿಕ ಶಿಕ್ಷಣ' ಪರೀಕ್ಷೆ ಬರೆಯುವಾಗ ಮೊಬೈಲ್ ಅನ್ನು ತನ್ನ ಜೇಬಿನಲ್ಲಿ ಇರಿಸಿಕೊಂಡ ಆರೋಪದಡಿ ಎರಡು ವರ್ಷ ಡಿಬಾರ್‌ಗೆ ಒಳಗಾಗಿದ್ದ.

2024–25ನೇ ಸಾಲಿನ ಸಿಬಿಎಸ್‌ಇ 12ನೇ ತರಗತಿಯ ದೈಹಿಕ ಶಿಕ್ಷಣ, ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಮತ್ತು ಇಂಗ್ಲಿಷ್ ವಿಷಯಗಳ ಪರೀಕ್ಷೆ 2025ರ ಫೆಬ್ರುವರಿ 17ರಿಂದ ಮಾರ್ಚ್ 3ರವರೆಗೆ ನಡೆದಿತ್ತು. ಮೊದಲ ದಿನ ನಡೆದಿದ್ದ 'ದೈಹಿಕ ಶಿಕ್ಷಣ ಪರೀಕ್ಷೆ'ಗೆ ವಿದ್ಯಾರ್ಥಿ ತಡವಾಗಿ ಬಂದಿದ್ದ. ವಿಳಂಬಕ್ಕೆ, ಬೆಂಗಳೂರು ದಕ್ಷಿಣ ಭಾಗದಲ್ಲಿರುವ ಪರೀಕ್ಷಾ ಕೇಂದ್ರಕ್ಕೂ ತನ್ನ ಮನೆಗೂ 23 ಕಿ.ಮೀ ಅಂತರ ಇರುವುದರಿಂದ ತಡವಾಯಿತು ಎಂದು ಕಾರಣ ನೀಡಿದ್ದ.

ವಿದ್ಯಾರ್ಥಿ ಪರೀಕ್ಷೆ ಬರೆಯಲು ಆರಂಭಿಸಿದ 25 ನಿಮಿಷಗಳ ನಂತರ ಕೊಠಡಿಯ 'ಪರೀಕ್ಷಾ ನಿರೀಕ್ಷಕ' ವಿದ್ಯಾರ್ಥಿಯ ಜೇಬಿನಲ್ಲಿ ಮೊಬೈಲ್ ಫೋನ್ ಇರುವುದನ್ನು ಗಮನಿಸಿ ಅದನ್ನು ತಮ್ಮ ವಶಕ್ಕೆ ಪಡೆದಿದ್ದರು. ನಂತರ ವಿದ್ಯಾರ್ಥಿಗೆ ಬೇರೆ ನಮೂನೆಯ ಪ್ರಶ್ನೆ ಪತ್ರಿಕೆ ನೀಡಿ ಉತ್ತರ ಬರೆಯಲು ಸೂಚಿಸಲಾಗಿತ್ತು.

ಈ ಹಿನ್ನೆಲೆಯಲ್ಲೇ, ಸಿಬಿಎಸ್‌ಇ ಪರೀಕ್ಷಾ ನಿಯಂತ್ರಣ ಕೇಂದ್ರವು ವಿದ್ಯಾರ್ಥಿಯನ್ನು ಆ ಶೈಕ್ಷಣಿಕ ಮತ್ತು ಮುಂದಿನ ಒಂದು ವರ್ಷದ ಅವಧಿಗೆ ಪರೀಕ್ಷೆ ಬರೆಯದಂತೆ ಡಿಬಾರ್ ಮಾಡಿ ಆದೇಶಿಸಿತ್ತು.

ಡಿಬಾರ್ ಆದೇಶವನ್ನು ವಿದ್ಯಾರ್ಥಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದ. ವಿಚಾರಣೆ ನಡೆಸಿದ್ದ ಏಕಸದಸ್ಯ ನ್ಯಾಯಪೀಠ, ಸಿಬಿಎಸ್‌ಇ ಆದೇಶ ಅನ್ಯಾಯದ ಕ್ರಮ ಮತ್ತು ದುರುದ್ದೇಶಪೂರಿತ ನಡೆ. ವಿಚಾರಣೆ ವೇಳೆ ವಿದ್ಯಾರ್ಥಿಯ ಬಳಿಯಿದ್ದ ಮೊಬೈಲ್ ಫೋನ್‌ನಲ್ಲಿ ಯಾವುದೇ ನಕಲು ಸಾಮಗ್ರಿ ಇರಲಿಲ್ಲ ಮತ್ತು ಆತ ಮೊಬೈಲ್‌ನಿಂದ ಏನನ್ನೂ ನಕಲು ಮಾಡಿಲ್ಲ ಎಂಬುದು ಈಗಾಗಲೇ ದೃಢಪಟ್ಟಿದೆ. ಹೀಗಿರುವಾಗ, ವಿದ್ಯಾರ್ಥಿ ಸಹಜವಾಗಿಯೇ ಸಂದೇಹದ ಲಾಭ ಪಡೆಯಲು ಅರ್ಹವಾಗಿದ್ದಾನೆ ಎಂಬ ಅಭಿಪ್ರಾಯ ದಲ್ಲಿ ಸಿಬಿಎಸ್‌ಇ ಹೊರಡಿಸಿದ್ದ ಡಿಬಾರ್ ಆದೇಶ ವನ್ನು ರದ್ದುಪಡಿಸಿತ್ತು. ಈ ಆದೇಶವನ್ನು ಪ್ರಶ್ನಿಸಿ ಸಿಬಿಎಸ್‌ಇ ವಿಭಾಗೀಯ ನ್ಯಾಯಪೀಠದಲ್ಲಿ ಮೇಲ್ಮನವಿ ಸಲ್ಲಿಸಿತ್ತು. ಈ ಮೇಲ್ಮನವಿ ವಿಚಾರಣೆ ನಡೆಸಿರುವ ಮುಖ್ಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ನ್ಯಾಯಪೀಠ, ಏಕಸದಸ್ಯ ನ್ಯಾಯ ಪೀಠದ ಆದೇಶವನ್ನು ರದ್ದುಪಡಿಸಿದೆ.

ಸಿಬಿಎಸ್‌ಇ ರಚಿಸಿದ್ದ ಸಮಿತಿಯು ವಿಚಾರಣೆ ನಡೆಸಿದ್ದ ವೇಳೆ, ವಿದ್ಯಾರ್ಥಿ ಬಳಿಯಿದ್ದ ಮೊಬೈಲ್ ಫೋನ್‌ನಲ್ಲಿ ಯಾವುದೇ ನಕಲು ಸಾಮಗ್ರಿಗಳಿರಲಿಲ್ಲ ಅಥವಾ ವಿದ್ಯಾರ್ಥಿ ಮೊಬೈಲ್ ಫೋನ್‌ನಿಂದ ಏನನ್ನೂ ನಕಲು ಮಾಡಿಲ್ಲ ಎಂದು ಕಂಡು ಬಂದಿತ್ತು. ಆದಾಗ್ಯೂ, ಸಿಬಿಎಸ್‌ಇ, ಪರೀಕ್ಷಾ ಬೈಲಾಗಳಿಗೆ ಅನುಗುಣವಾಗಿ ತಾನು ರೂಪಿಸಿರುವ, 'ಅನುಚಿತ ಸಾಧನ ಬಳಕೆ (ಯುಎಫ್‌ಎಂ)' ಮಾರ್ಗಸೂಚಿ ಅನ್ವಯ ವಿದ್ಯಾರ್ಥಿಯನ್ನು ಡಿಬಾರ್ ಮಾಡಿ ಆದೇಶಿಸಿತ್ತು. ವಿಶೇಷವೆಂದರೆ ಈ ವಿದ್ಯಾರ್ಥಿ 10ನೇ ತರಗತಿಯಲ್ಲಿ ಶೇ.92ರಷ್ಟು ಅಂಕ ಪಡೆದಿದ್ದು, 2025ರಲ್ಲಿ ಬರೆದಿದ್ದ ಜೆಇಇ–ಅಡ್ವಾನ್ಸ್ಡ್ ಪರೀಕ್ಷೆಯಲ್ಲಿ ಯಶಸ್ವಿಯಾಗಿದ್ದಾನೆ.

ಲೇಖಕಿ ಸುಚಿತ್ರಾ ಹೆಗಡೆ ಸೇರಿದಂತೆ ಮೈಸೂರಿನ ಮೂವರಿಗೆ ಲೇಖಕಿಯರ ಸಂಘದಿಂದ ದತ್ತಿ ಪ್ರಶಸ್ತಿ

ಮೈಸೂರು, ಮಾ.8– ಮೈಸೂರಿನ ಲೇಖಕಿ ಸುಚಿತ್ರಾ ಹೆಗಡೆಯವರ ಲಲಿತ



ಪ್ರಬಂಧಗಳ ಸಂಕಲನ 'ಮಿಂಚು ಹುಳದ ದಾರಿ' ಕರ್ನಾಟಕ ಲೇಖಕಿಯರ ಸಂಘ ಕೊಡಮಾಡುವ 2025 ನೆಯ ಸಾಲಿನ ನಾಗರತ್ನ ಚಂದ್ರಶೇಖರ್ ದತ್ತಿ ಪ್ರಶಸ್ತಿಗೆ ಭಾಜನವಾಗಿದೆ. ಅವರ ಈ ಹಿಂದಿನ ಪ್ರವಾಸ ಕಥನ 'ಜಗವ ಸುತ್ತುವ ಮಾಯೆ' ಕೂಡ ಹಲವಾರು ಪ್ರತಿಷ್ಠಿತ ಪ್ರಶಸ್ತಿಗಳನ್ನು ಗಳಿಸಿತ್ತು. ಲೇಖಕಿ ಕುಸುಮಾ ಆಯರಹಳ್ಳಿ ಅವರ 'ಕಪಿಲೆ ಕಂಡ ಕಥೆಗಳು' ಕೃತಿಗೆ ನಿರುಪಮಾ ಕಥಾ ಪ್ರಶಸ್ತಿ ಮತ್ತು ಮೀನಾ ಮೈಸೂರು ಅವರ 'ಸೂರ್ಯನ ಸೆರೆ' ಗೆ ಗುಣಸಾಗರಿ ನಾಗರಾಜ್, ಮಕ್ಕಳ ಸಾಹಿತ್ಯ ಪ್ರಶಸ್ತಿ ದೊರಕಿದೆ.

ನೇಪಾಳದಲ್ಲಿ ಆರ್‌ಎಸ್‌ಪಿ ಪ್ರಚಂಡ ಗೆಲುವು; ಬಾಲೇಂದ್ರ ಶಾ ಪ್ರಧಾನಿ ನಿಶ್ಚಿತ



ಕಠ್ಮಂಡು: ನೇಪಾಳದಲ್ಲಿ 2025ರ 'ಜೆನ್ ಝೀ' ಕ್ರಾಂತಿಯ ನಂತರ ನಡೆದ ಮೊದಲ ಸಾರ್ವತ್ರಿಕ ಚುನಾವಣೆಯಲ್ಲಿ ಬಾಲೇಂದ್ರ ಶಾ ಅವರ ರಾಷ್ಟ್ರೀಯ ಸ್ವತಂತ್ರ ಪಕ್ಷ(ಆರ್‌ಎಸ್‌ಪಿ)ವು ಅಭೂತಪೂರ್ವ ಗೆಲುವು ಸಾಧಿಸಿದೆ.

ರ್‍ಯಾಪರ್ ಕ್ಷೇತ್ರ ತೊರೆದು ರಾಜಕಾರಣ ಪ್ರವೇಶಿಸಿದ್ದ, ಬಾಲನ್ ಎಂದೇ ಜನಪ್ರಿಯರಾಗಿರುವ 35 ವರ್ಷದ ಈ ಯುವ ರಾಜಕಾರಣಿ ಬಾಲೇಂದ್ರ ಶಾ, ನೇಪಾಳದಲ್ಲಿ ನಾಲ್ಕು ಬಾರಿ ಪ್ರಧಾನಿಯಾಗಿದ್ದ ಅಲ್ಲಿನ ಪರಂಪರಾಗತ ಕಮ್ಯುನಿಸ್ಟ್ ಪಕ್ಷದ (ಸಿಪಿಎನ್–ಯುಎಂಎಲ್) ಅಧ್ಯಕ್ಷರಾಗಿದ್ದ ಕೆ.ಪಿ. ಶರ್ಮಾ ಓಲಿ ಅವರನ್ನು 50 ಸಾವಿರ ಮತಗಳ ಭಾರಿ ಅಂತರದಿಂದ ಸೋಲಿಸಿದ್ದು, ಇವರೇ ನೇಪಾಳದ ಮುಂದಿನ ಪ್ರಧಾನಿ ಗಾದಿಗೇರುವುದು ಬಹುತೇಕ ಖಚಿತವಾಗಿದೆ.

ಝಾಪ–5 ಕ್ಷೇತ್ರದಿಂದ ಸ್ಪರ್ಧಿಸಿದ್ದ ಬಾಲನ್ ಒಟ್ಟು 68,348 ಮತಗಳನ್ನು ಪಡೆದರೆ, 74 ವರ್ಷದ ಓಲಿ 18,734 ಮತಗಳನ್ನು ಪಡೆದಿರುವುದಾಗಿ ನೇಪಾಳದ ಚುನಾವಣಾ ಆಯೋಗ ಪ್ರಕಟಿಸಿದೆ.

ರವಿ ಲಮಿಚಾನೆ ಅವರು 2022ರಲ್ಲಿ ಸ್ಥಾಪಿಸಿದ ಆರ್‌ಎಸ್‌ಪಿ ಈ ಬಾರಿಯ ಸಾರ್ವತ್ರಿಕ ಚುನಾವಣೆಯಲ್ಲಿ ಒಟ್ಟು 138 ಕ್ಷೇತ್ರಗಳ ಪೈಕಿ 107ರಲ್ಲಿ ಗೆಲುವು ಸಾಧಿಸಿದೆ. ಕಠ್ಮಂಡು ಕಣಿವೆಯ ಮೂರು ಜಿಲ್ಲೆಗಳ ಎಲ್ಲ 15 ಕ್ಷೇತ್ರಗಳನ್ನೂ ಆರ್‌ಎಸ್‌ಪಿ ಗೆದ್ದು ಬೀಗಿದೆ. ನೇಪಾಳಿ ಕಾಂಗ್ರೆಸ್ ಪಕ್ಷವು(ಎನ್‌ಸಿ) 17 ಸ್ಥಾನಗಳನ್ನು ಗೆದ್ದು ಎರಡನೇ ಸ್ಥಾನದಲ್ಲಿದೆ.

ಪ್ರಧಾನಿ ಅಭ್ಯರ್ಥಿಯೆಂದು ನೇಪಾಳಿ ಕಾಂಗ್ರೆಸ್ ಪಕ್ಷದಿಂದ ಕಣಕ್ಕಿಳಿದಿದ್ದ ಗಗನ್ ಥಾಪಾ ಅವರು ಆರ್‌ಎಸ್‌ಪಿ ಅಭ್ಯರ್ಥಿ ಅಮರೇಶ್ ಸಿನ್ಹಾ ವಿರುದ್ಧ ಸೋಲು ಕಂಡಿದ್ದಾರೆ. ಮಾಜಿ ಉಪ ಸಭಾಧ್ಯಕ್ಷ ಇಂದಿರಾ ರಾಣಾ ಅವರು ಸಿಪಿಎಂನ ರಾಜ್ ಘಿಮಿರೆ ವಿರುದ್ಧ ಗೆಲುವು ದಾಖಲಿಸಿದ್ದಾರೆ.

ಪಕ್ಷಗಳ ಬಲಾಬಲ: ನೇಪಾಳದಲ್ಲಿ ಮಾರ್ಚ್ 5ರಂದು ನಡೆದಿದ್ದ ಚುನಾವಣೆ ಪೂರ್ಣ ಫಲಿತಾಂಶ ಪ್ರಕಟಗೊಂಡಿದ್ದು, ರಾಷ್ಟ್ರೀಯ ಸ್ವತಂತ್ರ ಪಾರ್ಟಿಯ 117, ನೇಪಾಳಿ ಕಾಂಗ್ರೆಸ್ ಪಾರ್ಟಿ 17, ಸಿಪಿಎನ್–ಯುಎಂಎಲ್ 7, ನೇಪಾಳಿ ಕಮ್ಯೂನಿಸ್ಟ್ ಪಾರ್ಟಿ 6, ಶ್ರಮ ಶಕ್ತಿ ಪಾರ್ಟಿ ಹಾಗೂ ರಾಷ್ಟ್ರೀಯ ಪ್ರಜಾತಂತ್ರ ಪಾರ್ಟಿ ತಲಾ ಒಂದು ಮತ್ತು ಓರ್ವ ಸ್ವತಂತ್ರ ಅಭ್ಯರ್ಥಿ ಆಯ್ಕೆಯಾಗಿದ್ದಾರೆ.

ಮೋದಿ ಸಂದೇಶ: ನೇಪಾಳದ ಸಾರ್ವತ್ರಿಕ ಚುನಾವಣೆ ಫಲಿತಾಂಶದ ನಂತರ ಪ್ರಧಾನಿ ನರೇಂದ್ರ ಮೋದಿ ಅವರು ಎಕ್ಸ್ ತಾಣದ ಮೂಲಕ ಅಭಿಪ್ರಾಯ ಹಂಚಿಕೊಂಡಿದ್ದಾರೆ. 'ನೇಪಾಳದ ಪ್ರಜಾಪ್ರಭುತ್ವದ ಪಯಣದಲ್ಲಿ ಈ ಐತಿಹಾಸಿಕ ಮೈಲಿಗಲ್ಲು ಹೆಮ್ಮೆಯ ಕ್ಷಣವಾಗಿದೆ. ರಾಜಕೀಯ ಅಸ್ಥಿರತೆ ಎದುರಿಸಿದ್ದ ಅಲ್ಲಿ ಸ್ಥಿರ ಸರ್ಕಾರ ರಚನೆಯಾಗುವ ವಿಶ್ವಾಸವನ್ನು ಭಾರತ ಹೊಂದಿದೆ ಎಂದಿದ್ದಾರೆ. ನೇಪಾಳದ ಮಾಜಿ ಪ್ರಧಾನಿ ಕೆ.ಪಿ.ಶರ್ಮಾ ಓಲೊ ಅವರು, ಬಾಲೆನ್ ಬಾಬು ನಿಮಗೆ ಹೃದಯಪೂರ್ವಕ ಅಭಿನಂದನೆಗಳು. ಮುಂದಿನ 5 ವರ್ಷದ ಆಡಳಿತ ಸಮಸ್ಯೆಗಳಿಂದ ಮುಕ್ತವಾಗಿರಲಿ ಎಂದು ಶುಭ ಹಾರೈಸಿದ್ದಾರೆ.

'ಜೆನ್ ಝೀ' ಕ್ರಾಂತಿಯಿಂದ ರಾಜಕೀಯ ಸ್ಥಿತ್ಯಂತರಕ್ಕೆ ಕಾರಣವಾದ ನೇಪಾಳದಲ್ಲಿ ಅಲ್ಲಿನ ಪ್ರಬಲ ಪಕ್ಷಗಳ ವಿರುದ್ಧ ಸ್ಪರ್ಧಿಸಿದ್ದ ರಾಜಕೀಯವಾಗಿ ತೀರಾ ದುರ್ಬಲವಾಗಿದ್ದ ಆರ್‌ಎಸ್‌ಪಿಗೆ ಭಾರಿ ಜನಮನ್ನಣೆ ಲಭಿಸಿರುವುದು ಗಮನಾರ್ಹ. ಬಾಲೇಂದ್ರ ಶಾ ಪ್ರಧಾನಿಯಾದರೆ ದಕ್ಷಿಣ ನೇಪಾಳದ ಸ್ಥಳೀಯ ಸಮುದಾಯವಾದ ಮಧೇಶಿ ಸಮುದಾಯದ ಮೊದಲಿಗರಾಗಲಿದ್ದಾರೆ. ಸಂಸತ್ತಿನ ಇತಿಹಾಸದಲ್ಲೇ ಈ ಸ್ಥಾನ ಅಲಂಕರಿಸುತ್ತಿರುವ ಅತ್ಯಂತ ಕಿರಿಯ ವ್ಯಕ್ತಿ ಎಂಬ ಹೆಗ್ಗಳಿಕೆಗೂ ಪಾತ್ರರಾಗಲಿದ್ದಾರೆ. ಬಾಲೇಂದ್ರ ಶಾ ಕರ್ನಾಟಕದ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಹಳೆಯ ವಿದ್ಯಾರ್ಥಿ.

ಭಾರತ ಮುಕ್ತ, ಸಾರ್ವಭೌಮ ರಾಷ್ಟ್ರ

ನಿಮ್ಮ ಕೆಲಸ ನೀವು ನೋಡಿಕೊಳ್ಳಿ: ಅಮೆರಿಕಾ ಘೋಷಣೆಗೆ ಕಮಲ್ ಹಾಸನ್ ಕಿಡಿ

ಚೆನ್ನೈ: ರಷ್ಯಾದ ಇಂಧನ ಖರೀದಿಯನ್ನು ಮುಂದುವರಿಸಲು ಭಾರತೀಯ ಸಂಸ್ಕರಣಾಗಾರಗಳಿಗೆ 30 ದಿನಗಳ ತಾತ್ಕಾಲಿಕ ವಿನಾಯಿತಿ ನೀಡುವ ಅಮೆರಿಕಾ ಘೋಷಣೆಗೆ ಬಹುಭಾಷಾ ನಟ ಕಮಲ್ ಹಾಸನ್ ಕಿಡಿಕಾರಿದ್ದಾರೆ.

ಭಾರತ ಸಾರ್ವಭೌಮ ರಾಷ್ಟ್ರ. ಭಾರತವು ಇನ್ನು ಮುಂದೆ ನಿಮ್ಮ ಆದೇಶಗಳನ್ನು ತೆಗೆದುಕೊಳ್ಳದ ಸ್ವತಂತ್ರ ದೇಶ. ಅಧ್ಯಕ್ಷರೇ, ನಾವು ಭಾರತದ ಜನರು, ಮುಕ್ತ ಮತ್ತು ಸಾರ್ವಭೌಮ ರಾಷ್ಟ್ರಕ್ಕೆ ಸೇರಿದವರು. ನಾವು ಇನ್ನು ಮುಂದೆ ದೂರದ ವಿದೇಶಗಳಿಂದ ಆದೇಶಗಳನ್ನು ತೆಗೆದುಕೊಳ್ಳುವುದಿಲ್ಲ. ದಯವಿಟ್ಟು ನಿಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ನಿಮ್ಮ ಸ್ವಂತ ವ್ಯವಹಾರವನ್ನು ನೋಡಿಕೊಳ್ಳಿ. ಸಾರ್ವಭೌಮ ರಾಷ್ಟ್ರಗಳ ನಡುವಿನ ಪರಸ್ಪರ ಗೌರವವು ಜಗತ್ತಿನಲ್ಲಿ ಶಾಶ್ವತ ಶಾಂತಿಯ ಅಡಿಪಾಯವಾಗಿದೆ. ನಿಮ್ಮ ದೇಶ ಮತ್ತು ಅದರ ಜನರಿಗೆ ನಾವು ಶಾಂತಿ ಮತ್ತು ಸಮೃದ್ಧಿಯನ್ನು ಬಯಸುತ್ತೇವೆ ಎಂದು ಸಾಮಾಜಿಕ ಜಾಲತಾಣದಲ್ಲಿ ಬರೆದುಕೊಂಡಿದ್ದಾರೆ.

ಏತನ್ಮಧ್ಯೆ, ಇರಾನ್ ಮತ್ತು ಅಮೆರಿಕ–ಇಸ್ರೇಲ್ ನಡುವಿನ ನಡೆಯುತ್ತಿರುವ ಸಂಘರ್ಷದಿಂದಾಗಿ ಇಂಧನ ಬೆಲೆಗಳು ಏರುತ್ತಿರುವ ಕಳವಳಗಳ ನಡುವೆ ಭಾರತೀಯ ಸಂಸ್ಕರಣಾಗಾರಗಳಿಗೆ ತಾತ್ಕಾಲಿಕ ವಿನಾಯಿತಿ ನೀಡಲಾಗಿದೆ. ಇದು ಇತರ ಗಲ್ಫ್ ರಾಷ್ಟ್ರಗಳ ಮೇಲೂ ಪರಿಣಾಮ ಬೀರಿದೆ. ಭಾರತವು ಅಮೆರಿಕಕ್ಕೆ ಪ್ರಮುಖ ಪಾಲುದಾರ ಮತ್ತು ನವದೆಹಲಿ ಅಮೆರಿಕದಿಂದ ತನ್ನ ತೈಲ ಖರೀದಿಯನ್ನು ಹೆಚ್ಚಿಸುತ್ತದೆ ಎಂದು ನಾವು ಸಂಪೂರ್ಣವಾಗಿ ನಿರೀಕ್ಷಿಸುತ್ತೇವೆ ಎಂದು ಅಮೆರಿಕದ ಖಜಾನೆ ಕಾರ್ಯದರ್ಶಿ ಸ್ಕಾಟ್ ಬೆಸೆಂಟ್ ಟ್ವಿಟರ್‌ನಲ್ಲಿ ಬರೆದಿದ್ದಾರೆ.

ಮಂಡ್ಯ ಜಿಲ್ಲೆಯ ಅಭಿವೃದ್ಧಿಗೆ ಕೈಜೋಡಿಸಬೇಕು

'ನಮ್ಮ ನಡೆ ಸ್ವಚ್ಛತೆ ಕಡೆ- ರನ್ ಫಾರ್ ಮಂಡ್ಯ-ಮ್ಯಾರಥಾನ್' ಉದ್ಘಾಟಿಸಿ ಚಲುವರಾಯಸ್ವಾಮಿ ಅಭಿಮತ

ಮಂಡ್ಯ, ಮಾ.8–ದೇಶದಲ್ಲೇ ಮಂಡ್ಯ ಜಿಲ್ಲೆಯ ಚಿರಪರಿಚಿತವಾಗಿದ್ದರೂ ಇನ್ನೂ ಹೆಚ್ಚಿನ ರೀತಿಯಲ್ಲಿ ಅಭಿವೃದ್ಧಿ ಆಗಬೇಕಾದರೆ ಎಲ್ಲರ ಸಹಕಾರ ಅಗತ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯ ಸ್ವಾಮಿ ತಿಳಿಸಿದ್ದಾರೆ.

ನಗರದ ಸರ್.ಎಂ.ವಿಶ್ವೇಶ್ವರಯ್ಯ ಜಿಲ್ಲಾ ಕ್ರೀಡಾಂಗಣದಲ್ಲಿ ಹಮ್ಮಿಕೊಳ್ಳಲಾಗಿದ್ದ 'ನಮ್ಮ ನಡೆ ಸ್ವಚ್ಛತೆ ಕಡೆ- ರನ್ ಫಾರ್ ಮಂಡ್ಯ-ಮ್ಯಾರಥಾನ್' ಉದ್ಘಾಟಿಸಿ ಮಾತನಾಡಿದ ಅವರು, ಶಾಸಕ ಪಿ.ರವಿಕುಮಾರ್ ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜಿಲ್ಲೆಯ ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಉತ್ತಮ ರಸ್ತೆ ನಿರ್ಮಾಣ ಮಾಡಿದ್ದಲ್ಲದೆ ವಿಶ್ವೇಶ್ವರಯ್ಯ ಸರ್ಕಲ್ ಮಾಡಲು ಕೈಹಾಕಿದ್ದಾರೆ. ಜನತೆಯು ಇಂತಹ ಶಾಸಕರ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದ್ದಾರೆ. ಜಿಲ್ಲೆಯ ಅಭಿವೃದ್ಧಿಗೆ ಅವರೊಂದಿಗೆ ಸರ್ಕಾರೂ ಸಹಕಾರ ನೀಡಬೇಕೆಂದರು.

ಶ್ರೀ ಆದಿಚುಂಚನಗಿರಿ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದ ನಾಥ ಮಹಾಸ್ವಾಮೀಜಿ ಮಾತನಾಡಿ, ನಮ್ಮ ದೇಶಕ್ಕೆ ಸ್ವಾತಂತ್ರ ಬಂದು ಮುಂದಿನ ವರ್ಷಕ್ಕೆ 100 ವರ್ಷ ಪೂರ್ಣಗೊಳ್ಳುತ್ತದೆ. ಆದ್ದರಿಂದ ನಮ್ಮ ದೇಶವನ್ನು ನಂ.1 ದೇಶವನ್ನಾಗಿ ಮಾಡುವ ಕನಸನ್ನು ನನಸಾಗಿಸಬೇಕು ಎಂದು ಹೇಳಿದರು.

ಮಕ್ಕಳು ಮನಸ್ಸನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕು ಮತ್ತು ಜಿಲ್ಲೆಯನ್ನು ಸ್ವಚ್ಛತೆಯಿಂದ ಶುದ್ಧವಾಗಿ ನೋಡಿಕೊಳ್ಳುವ ಕಾರ್ಯ ಮಾಡಬೇಕು. ನಮ್ಮ ನಡೆ ಸ್ವಚ್ಛತೆ ಕಡೆ ರನ್ ಫಾರ್ ಮಂಡ್ಯ ಮ್ಯಾರಥಾನ್ ಕಾರ್ಯಕ್ರಮವನ್ನು ಯಶಸ್ವಿಗೊಳಿಸೋಣ ಎಂದು ತಿಳಿಸಿದರು.

ಚಲನಚಿತ್ರ ಅಕಾಡೆಮಿಯ ಅಧ್ಯಕ್ಷ ನಟ ಸಾಧುಕೋಕಿಲ ಮಾತನಾಡಿ, ಪರಿಸರ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಲು ಕಸ ವಿಲೇವಾರಿ, ಪ್ಲಾಸ್ಟಿಕ್ ಮುಕ್ತ ಪರಿಸರ ನಿರ್ಮಾಣ, ಮನೆ ಮತ್ತು ಶಾಲಾ, ಸಾರ್ವಜನಿಕ ಸ್ಥಳಗಳ ಸ್ವಚ್ಛತೆ ಮುಖ್ಯವಾಗಿದೆ. ಪ್ರತಿಯೊಬ್ಬರು ಮೊದಲು ಮನೆಯಿಂದಲೇ ಸ್ವಚ್ಛತೆ ಕಾರ್ಯವನ್ನು ಮಾಡಬೇಕು, ಮನೆ ಮತ್ತು ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛತೆಯಿಂದ ನೋಡಿಕೊಳ್ಳುವುದರಿಂದ ಜಿಲ್ಲೆಯನ್ನು ಸ್ವಚ್ಛವಾಗಿಡಲು ಸಾಧ್ಯ ಎಂದರು.

ನಟ ವಿರಾಟ್ ಮಾತನಾಡಿ, ಸ್ವಚ್ಛತೆ ಆರೋಗ್ಯದ ಮೂಲ. ಮನೆ ಸುತ್ತಮುತ್ತಲಿನ ಪರಿಸರ, ಮತ್ತು ಸಾರ್ವಜನಿಕ ಸ್ಥಳಗಳನ್ನು ಸ್ವಚ್ಛವಾಗಿಟ್ಟುಕೊಳ್ಳುವುದು ಸಾಂಕ್ರಾಮಿಕ ರೋಗಗಳನ್ನು ತಡೆಯುವುದು ಅತ್ಯಗತ್ಯ. ಸ್ವಚ್ಛ ಭಾರತ್ ಅಭಿಯಾನಕ್ಕೆ ಕೈ ಜೋಡಿಸುವ ಮೂಲಕ ಸುಂದರ ಪರಿಸರವನ್ನು ನಿರ್ಮಿಸೋಣ ಎಂದು ಹೇಳಿದರು.

ನಟಿ ರಾಧಿಕಾ ನಾರಾಯಣ್ ಮಾತನಾಡಿ, ಮನೆಯಿಂದ ಸ್ವಚ್ಛತೆಯನ್ನು ಮಾಡಬೇಕು. ಪರಿಸರ ನೈರ್ಮಲ್ಯ ಮತ್ತು ಆರೋಗ್ಯದ ಬಗ್ಗೆ ಜಾಗೃತಿ ಮೂಡಿಸಬೇಕು ಎಂದರು.

ವೇದಿಕೆಯಲ್ಲಿ ಶಾಸಕ ರವಿಕುಮಾರ್ ಗಣಿಗ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಡಿಸಿಸಿ ಬ್ಯಾಂಕ್ ಅಧ್ಯಕ್ಷ ಸಚಿನ್ ಚಲುವರಾಯಸ್ವಾಮಿ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಜಿಲ್ಲಾಧಿಕಾರಿ ಡಾ.ಕುಮಾರ, ಎಸ್ಪಿ ಡಾ.ವಿ.ಜೆ.ಶೋಭಾರಾಣಿ, ಜಿ.ಪಂ. ಸಿಇಒ ಕೆ.ಆರ್.ನಂದಿನಿ ಸೇರಿದಂತೆ ಇನ್ನಿತರೆ ಗಣ್ಯರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಸಾವಿರಾರು ಜನ ಮ್ಯಾರಥಾನ್‌ನಲ್ಲಿ ಪಾಲ್ಗೊಂಡರು.



ರನ್ ಫಾರ್ ಮಂಡ್ಯ –ಮ್ಯಾರಥಾನ್‌ನ್ನು ಹಸಿರು ಬಾವುಟ ಬೀಸುವುದರ ಮೂಲಕ ಗಣ್ಯರು ಉದ್ಘಾಟಿಸಿದರು.

ಗೆಜ್ಜಲಗೆರೆ ಧರಣಿ ಕೈಬಿಡದಿರಲು ಗ್ರಾಮಸ್ಥರ ಅಚಲ ನಿರ್ಧಾರ

ಸಚಿವರ ಮನವಿಗೂ ಓಗೊಡದ ಪ್ರತಿಭಟನಾಕಾರರು



ಗೆಜ್ಜಲಗೆರೆ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಗ್ರಾಮಸ್ಥರೊಂದಿಗೆ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಮಾತನಾಡಿದರು.

ಮದ್ದೂರು, ಮಾ.8–ಯಾವುದೇ ಕಾರಣಕ್ಕೂ ನಮ್ಮ ಹೋರಾಟವು ನಿಲ್ಲುವುದಿಲ್ಲ ಹಾಗೂ ನಗರಸಭೆ ಸೇರ್ಪಡೆಗೆ ನಮ್ಮ ಗ್ರಾಮಸ್ಥರು ಒಪ್ಪುವುದಿಲ್ಲ ರೈತಪರ ಹೋರಾಟಗಾರ್ತಿ ಸುನಂದಾ ಜಯರಾಮ ತಿಳಿಸಿದರು.

ಗೆಜ್ಜಲಗೆರೆ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ ಪ್ರತಿಭಟನಾ ಧರಣಿ ನಿಲ್ಲಿಸುವಂತೆ ಜಿಲ್ಲಾ ಉಸ್ತುವಾರಿ ಸಚಿವರ ಮನವಿಗೆ ಪ್ರತಿಕ್ರಿಯಿಸಿ, 20 ದಿನಗಳ ಹಿಂದೆ ಇಲ್ಲಿನ ಪ್ರವಾಸಿ ಮಂದಿರದಲ್ಲಿ ನಿಮ್ಮ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ನಮ್ಮ ಅಹವಾಲುಗಳನ್ನು ಸಲ್ಲಿಸುವ ಭರವಸೆ ನೀಡಿದ್ದವರು ಈಗ ಪ್ರತಿಭಟನೆಯನ್ನು ಕೈಬಿಡಲು ಮನವಿ ಮಾಡುತ್ತಿರುವುದು ಸರಿಯಲ್ಲ; ನ್ಯಾಯಾಲಯದ ತೀರ್ಪಿಗಾಗಿ ಕಾಯುತ್ತೇವೆ ಏನು ಬರುತ್ತದೆಯೋ ನೋಡೋಣ ಅಲ್ಲೀವರೆಗೂ ಯಾವುದೇ ಕಾರಣಕ್ಕೂ ನಮ್ಮ ಹೋರಾಟವನ್ನು ನಿಲ್ಲಿಸುವುದಿಲ್ಲ ನಮ್ಮ ನಿರ್ಧಾರ ಅಚಲವಾಗಿದೆ ಎಂದರು.

ತಾಲೂಕಿನ ಗೆಜ್ಜಲಗೆರೆಯ ಗ್ರಾಪಂ ಕಾರ್ಯಾಲಯದ ಮುಂದೆ ಹಲವು ದಿನಗಳಿಂದ ನಡೆಯುತ್ತಿರುವ ಅನಿರ್ದಿಷ್ಟಾವಧಿ ಧರಣಿ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಅಭಿವೃದ್ಧಿ ದೃಷ್ಟಿಯಿಂದ ಶಾಸಕ ಕೆ.ಎಂ.ಉದಯ್ ಗೆಜ್ಜಲಗೆರೆ ಸೇರಿದಂತೆ 4 ಗ್ರಾ.ಪಂ.ಗಳನ್ನು ಮದ್ದೂರು ನಗರಸಭೆಗೆ ಸೇರ್ಪಡೆ ಗೊಳಿಸಿದ್ದಾರೆ, ಅಷ್ಟೇ ಅಲ್ಲದೆ ತಾಲೂಕಿನಾದ್ಯಂತ ಹಲವಾರು ಅಭಿವೃದ್ಧಿ ಕೆಲಸಗಳನ್ನು ಮಾಡುತ್ತಿದ್ದಾರೆ. ಆದ್ದರಿಂದಲೇ ಗೆಜ್ಜಲಗೆರೆ ಗ್ರಾಮವನ್ನು ನಗರಸಭೆಗೆ ಸೇರ್ಪಡೆಗೊಳಿಸಿದ್ದಾರೆ ಎಂದ ನನ್ನ ಅನಿಸಿಕೆ ಎಂದ ಅವರು ಪ್ರಾರಂಭದ ದಿನಗಳಲ್ಲಿ ಈ ಕುರಿತು ನಿಮ್ಮಲ್ಲಿ ಹೆಚ್ಚು ಚರ್ಚೆಗಳಾಗದೆ ಇರುವುದು ಈ ಬೆಳವಣಿಗೆಗೆ ಕಾರಣವಾಗಿರಬಹುದು, ನಗರಸಭೆಗೆ ಸಂಬಂಧಿಸಿದ ಪ್ರಕ್ರಿಯೆಗಳು ಮುಂದುವರೆದಿರುವ ಕಾರಣದಿಂದಾಗಿ ಪ್ರತಿಭಟನೆಯನ್ನು ಕೈಬಿಡುವಂತೆ ಮನವಿ ಮಾಡಿದರು.

ಜಿಲ್ಲಾಧಿಕಾರಿ ಕುಮಾರ, ಜಿಲ್ಲಾಮಟ್ಟದ ಅಧಿಕಾರಿಗಳು ಸಚಿವರೊಂದಿಗಿದ್ದರು.

ಅವಕಾಶ ದೊರೆತರೆ ರಾಜಕೀಯಕ್ಕೆ ಬಂದು ಸೇವೆ ಸಲ್ಲಿಸಿ



ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ಧನಂಜಯ ಅವರನ್ನು ಸಚಿವ ಚಲುವರಾಯಸ್ವಾಮಿ ಸನ್ಮಾನಿಸಿದರು.

ಮಂಡ್ಯ: ಅವಕಾಶ ದೊರೆತರೆ ರಾಜಕೀಯಕ್ಕೆ ಬಂದು ಸೇವೆ ಸಲ್ಲಿಸುವಂತಾಗಲಿ ಎಂದು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಆಶಯ ವ್ಯಕ್ತಪಡಿಸಿದ್ದಾರೆ.

ಯುಪಿಎಸ್‌ಸಿ ಪರೀಕ್ಷೆಯಲ್ಲಿ 554ನೇ ರ್‍ಯಾಂಕ್ ಪಡೆದ ನಾಗಮಂಗಲ ತಾಲೂಕಿನ ಕರಡಹಳ್ಳಿ ಗ್ರಾಮದ ಧನಂಜಯ ಅವರ ನಿವಾಸಕ್ಕೆ ಭೇಟಿ ನೀಡಿ ಸನ್ಮಾನಿಸಿ ಪ್ರತಿಭಾವಂತರು ರಾಜಕೀಯಕ್ಕೆ ಬರುವುದು ಕಡಿಮೆ. ನಿಮ್ಮಂತಹವರಿಗೆ ರಾಜಕೀಯದಲ್ಲಿ ಸೇವೆ ಸಲ್ಲಿಸುವ ಅವಕಾಶ ಲಭಿಸಲಿ ಎಂದು ಹೇಳಿದರು.

ಜಿಲ್ಲೆಯಿಂದ ಇಬ್ಬರು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಸಾಧನೆ ಮಾಡಿರುವುದು ಜಿಲ್ಲೆಯ ಜನಪ್ರಿಯತೆಯನ್ನು ಮತ್ತಷ್ಟು ಹೆಚ್ಚಿಸಿದೆ. ರೈತನ ಮಗನಾಗಿ ಈ ರೀತಿಯ ಸಾಧನೆ ಮಾಡಿರುವುದು ಶ್ಲಾಘನೀಯ ಎಂದರು.

ಧನಂಜಯರವರ ತಂದೆ ರಾಮಚಂದ್ರ ಮತ್ತು ತಾಯಿ ಮಂಗಳಮ್ಮರವರನ್ನು ಕೊಂಡಾಡಿದ ಸಚಿವರು ಗ್ರಾಮೀಣ ಪ್ರದೇಶದ ರೈತ ಕುಟುಂಬದವರಾಗಿ ಮಗನ ಸಾಧನೆಗೆ ಬೆನ್ನೆಲುಬಾಗಿದ್ದೀರಿ ಎಂದು ಪ್ರಶಂಸಿಸಿದರು.

ಎಂಕಾಂ ಪದವೀಧರನಾಗಿರುವ ಧನಂಜಯರವರ ಸಹೋದರ ಧರ್ಮರಾಜ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳುತ್ತಿರುವ ಸಂಗತಿ ತಿಳಿದು ನೀವೂ ಧನಂಜಯರಂತೆ ಸಾಧನೆ ಮಾಡಿ ಎಂದು ಹರಸಿದರು.

ಸಚಿವರೊಂದಿಗೆ ಜಿಲ್ಲಾಧಿಕಾರಿ ಡಾ. ಕುಮಾರ ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳು ಸಾಥ್ ನೀಡಿದರು.

ಸಿಎಸ್‌ಆರ್ ನಿಧಿಯಿಂದ ಆಟೋ ನಿಲ್ದಾಣ ನಿರ್ಮಾಣ

ಮದ್ದೂರು, ಮಾ.8– ಕೇಂದ್ರ ಸರ್ಕಾರದ ಬೃಹತ್ ಕೈಗಾರಿಕೆ ಸಚಿವಾಲಯದ ಅಧೀನದಲ್ಲಿರುವ ಬ್ರಿಡ್ಜ್ ಅಂಡ್ ರೂಫ್ಸ್ ಕಂಪನಿಯ 40 ಲಕ್ಷ ರೂ. ಸಿಎಸ್‌ಆರ್ ನಿಧಿಯಿಂದ ಆಟೋ ನಿಲ್ದಾಣ ನಿರ್ಮಾಣ ಮಾಡಲಾಗುತ್ತಿದೆ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ತಿಳಿಸಿದರು.

ನಗರದ ಸರ್ಕಾರಿ ಬಸ್ ನಿಲ್ದಾಣದ ಸಮೀಪದ ಆಟೋ ನಿಲ್ದಾಣದಲ್ಲಿ ಸಂಸದರ ಪ್ರದೇಶಾಭಿವೃದ್ಧಿ ನಿಧಿಯ 40 ಲಕ್ಷ ಅನುದಾನದಲ್ಲಿ ಆಟೋ ನಿಲ್ದಾಣ ಕಾಮಗಾರಿಗೆ ಚಾಲನೆ ನೀಡಿ ಮಾತನಾಡಿ, ಈಗಾಗಲೇ ಮಂಡ್ಯದ ಸಂಜಯ ವೃತ್ತದಲ್ಲಿ ಸುಸಜ್ಜಿತ ಆಟೋ ನಿಲ್ದಾಣವನ್ನು ನಿರ್ಮಿಸಿಕೊಟ್ಟಿದ್ದೇವೆ. ಅದಾದ ನಂತರ ಮದ್ದೂರಿನಲ್ಲಿಯೂ ಆಟೋ ನಿಲ್ದಾಣ ನಿರ್ಮಿಸುವಂತೆ ಚಾಲಕರ ಮನವಿಯ ಮೇರೆಗೆ ಆಟೋ ನಿಲ್ದಾಣ ನಿರ್ಮಾಣ ಮಾಡಲಾಗುತ್ತಿದೆ. ಮುಂದಿನ ದಿನಗಳಲ್ಲಿ ಜಿಲ್ಲಾಯಾದ್ಯಂತ ಆಟೋ ಮತ್ತು ಟ್ಯಾಕ್ಸಿ ನಿಲ್ದಾಣಗಳನ್ನು ನಿರ್ಮಾಣ ಮಾಡಿ ವಾಹನ ಚಾಲಕರಿಗೆ ಅನೂಕೂಲ ಕಲ್ಪಿಸಲು ಕ್ರಮ ಕೈಗೊಳ್ಳಲಾಗುವುದು ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಿಎಸ್‌ಆರ್ ನಿಧಿಯಿಂದ ಆಟೋ ನಿಲ್ದಾಣಕ್ಕೆ ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಭೂಮಿಪೂಜೆ ನೆರವೇರಿಸಿದರು.

ಮದ್ದೂರು ಮತ್ತು ಮಂಡ್ಯ ಎರಡು ನಿಲ್ದಾಣಗಳ ನಿರ್ಮಾಣ ಕಾಮಗಾರಿಯನ್ನು ಮೂರು ತಿಂಗಳಲ್ಲಿ ಮುಗಿಸಲಾಗುವುದು. ನಂತರದ ದಿನಗಳಲ್ಲಿ ಚಾಲಕರಿಗೆ ಮಾತ್ರವಲ್ಲದೆ, ಸಾರ್ವಜನಿಕರಿಗೂ ಹೆಚ್ಚು ಅನುಕೂಲ ಆಗಲಿದೆ ಎಂದರು.

ಆಟೋ ನಿಲ್ದಾಣ ನಿರ್ಮಾಣಕ್ಕೆ ಕುಮಾರಸ್ವಾಮಿ ಅವರು ಆಗಮಿಸಿದಾಗ ಆಟೋ ಚಾಲಕರು ಭಾರಿ ಗಾತ್ರದ ಹೂವಿನ ಹಾರ ಹಾಕಿ. ಆಟೋ ನಿಲ್ದಾಣ ಮಾಡಲು ಸಹಕಾರ ನೀಡಿದ್ದಕ್ಕೆ ಧನ್ಯವಾದ ತಿಳಿಸಿದರು.

ಮಾಜಿ ಸಚಿವ ಡಿ.ಸಿ.ತಮ್ಮಣ್ಣ, ವಿಧಾನ ಪರಿಷತ್ ಸದಸ್ಯ ವಿವೇಕಾನಂದ, ಜೆಡಿಎಸ್ ಜಿಲ್ಲಾಧ್ಯಕ್ಷ ಡಿ.ರಮೇಶ್, ತಾಲೂಕು ಅಧ್ಯಕ್ಷ ಚಿಕ್ಕತಿಮ್ಮಯ್ಯ, ಕಾರ್ಯಾಧ್ಯಕ್ಷ ಮಾದನಾಯಕನಹಳ್ಳಿ ರಾಜಣ್ಣ, ನಗರಸಭಾ ಮಾಜಿ ಸದಸ್ಯೆ ಪ್ರಿಯಾಂಕ ಅಪ್ಪುಗೌಡ, ಮುಖಂಡರಾದ ಅಪ್ಪು ಪಿ. ಗೌಡ, ಕೂಳಗೆರೆ ಶೇಖರ್, ಬಿಳಿಗೌಡ, ಸಾಗರ್, ಹೇಮಂತ್, ಮುರಳಿ ಇದ್ದರು.

ಕೊರಟೀಕೆರೆ ಡೇರಿಯ ಎಲ್ಲಾ ಸ್ಥಾನಗಳು ಜೆಡಿಎಸ್ ಪಾಲು

ಕೆ.ಆರ್.ಪೇಟೆ: ತಾಲೂಕಿನ ಸಂತೇಬಾಚಹಳ್ಳಿ ಹೋಬಳಿಯ ಕೊರಟೀಕೆರೆ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆಡಳಿತ ಮಂಡಳಿಯ 11 ಮಂದಿ ನಿರ್ದೇಶಕರ ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಎಲ್ಲಾ ಸ್ಥಾನಗಳನ್ನು ಜೆಡಿಎಸ್ ಪಕ್ಷದ ಅಭ್ಯರ್ಥಿಗಳು ಬಾಚಿಕೊಂಡಿದ್ದಾರೆ.

ಸಾಮಾನ್ಯ ಕ್ಷೇತ್ರದಿಂದ ಜಯರಾಮು, ನಾರಾಯಣಗೌಡ, ಕೆ.ಎಸ್.ಮಹೇಶ್, ಕೆ.ಎಸ್.ಕೃಷ್ಣೇಗೌಡ, ಹರೀಶ್, ಕೆ.ಎಸ್. ವಾಸುದೇವೇ ಗೌಡ, ಮಹಿಳಾ ಮೀಸಲು ಕ್ಷೇತ್ರದಿಂದ ಲಕ್ಷ್ಮೀದೇವಮ್ಮ ತಮ್ಮಣ್ಣಗೌಡ, ಎಸ್.ಎಂ.ಶೃತಿ ಪ್ರಕಾಶ್, ಬಿಸಿಎಂ.ಎ ಮೀಸಲು ಕ್ಷೇತ್ರದಿಂದ ನಾರಾಯಣಶೆಟ್ಟಿ, ಬಿಸಿಎಂ.ಬಿ. ಮೀಸಲು ಕ್ಷೇತ್ರದಿಂದ ಕೆ.ಕೆ. ಲೋಕೇಶ್, ಪರಿಶಿಷ್ಟ ಜಾತಿ ಮೀಸಲು ಕ್ಷೇತ್ರದಿಂದ ಯಶೋಧಮ್ಮ ಅಭೂತಪೂರ್ವ ಜಯ ಸಾಧಿಸಿದ್ದಾರೆ ಎಂದು ಚುನಾವಣಾಧಿಕಾರಿ ಹೆಚ್.ಬಿ.ಭರತ್ ಕುಮಾರ್ ತಿಳಿಸಿದ್ದಾರೆ. ನೂತನ ನಿರ್ದೇಶಕರನ್ನು ಅಭಿನಂದಿಸಿ ಶಾಸಕ ಹೆಚ್.ಟಿ. ಮಂಜು ಮಾತನಾಡಿದರು.

ಟಿಎಪಿಸಿಎಂಎಸ್ ನಿರ್ದೇಶಕ ಮಲ್ಲೇನಹಳ್ಳಿ ಮೋಹನ್, ಹರಳಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಹೆಚ್.ಟಿ.ಲೋಕೇಶ್, ತಾಲೂಕು ಟಿಎಪಿಸಿಎಂಎಸ್ ನಿರ್ದೇಶಕ ಕೊರಟೀಕೆರೆ ಕೆ.ಎಸ್. ದಿನೇಶ್, ಶಂಕರೇಗೌಡ, ಶಶಿಕಲಾ ಕುಮಾರ್, ಸಂತೋಷ್, ಭಾರತೀಪುರ ಸೊಸೈಟಿ ಮಾಜಿ ಅಧ್ಯಕ್ಷ ರವಿ, ಮುಖಂಡರಾದ ಕುಮಾರ್, ಸಂತೋಷ್. ಸಣ್ಣೇಗೌಡ, ನಂಜುಂಡೇಗೌಡ ಇತರರಿದ್ದರು.

ಒಂದನೇ ಪುಟದಿಂದ

ಸ್ವಚ್ಛತಾ ರೋಡ್ ಶೋ



ಸ್ವಚ್ಛ ಸರ್ವೇಕ್ಷಣೆ–2025–26ರ ಅಂಗವಾಗಿ ಮೈಸೂರಲ್ಲಿ ಭಾನುವಾರ ಆಯೋಜಿಸಿದ್ದ 'ಸ್ವಚ್ಛತಾ ರೋಡ್ ಶೋ'ಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ, ಶಾಸಕರಾದ ಜಿ.ಟಿ.ದೇವೇಗೌಡ, ತನ್ವೀರ್ ಸೇಠ್, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಮತ್ತಿತರ ಗಣ್ಯರು ವಿದ್ಯುಕ್ತವಾಗಿ ಚಾಲನೆ ನೀಡಿದರು.

ಸ್ವಚ್ಛತೆಯು ಜವಾಬ್ದಾರಿ ಪ್ರತಿಯೊಬ್ಬರ ಮೇಲಿದೆ: ಇದಕ್ಕೂ ಮುನ್ನ 'ಸ್ವಚ್ಛತಾ ರೋಡ್ ಶೋ'ಗೆ ವಿದ್ಯುಕ್ತವಾಗಿ ಚಾಲನೆ ನೀಡಿದ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಮಾತನಾಡಿ, ಮೈಸೂರಿನಲ್ಲಿ ಸ್ವಚ್ಛತೆ, ಮಾದಕ ವಸ್ತುಗಳ ದುಷ್ಪರಿಣಾಮ, ಆರೋಗ್ಯದ ಬಗ್ಗೆ ಕಾಳಜಿ ಕುರಿತು ಹಲವಾರು ಜಾಗೃತಿ ಕಾರ್ಯಕ್ರಮಗಳನ್ನು ದೊಡ್ಡ ಮಟ್ಟದಲ್ಲಿ ಆಯೋಜಿಸಲಾಗುತ್ತಿದೆ. ಸಾರ್ವಜನಿಕರು ಸರ್ಕಾರದೊಂದಿಗೆ ಸಹಕರಿಸಿ ಕೈಜೋಡಿಸಬೇಕು. ಮೈಸೂರು ನಗರ ವಿಶ್ವ ವಿಖ್ಯಾತವಾಗಲು ಕಾರಣಕರ್ತರು ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು. ಅವರು ನೀಡಿರುವ ಮೈಸೂರು ನಗರವನ್ನು ಸ್ವಚ್ಛವಾಗಿ ಕಾಪಾಡಿ ಮುಂದಿನ ಪೀಳಿಗೆಗೆ ನೀಡುವ ಜವಾಬ್ದಾರಿ ಪ್ರತಿಯೊಬ್ಬ ನಾಗರೀಕರ ಮೇಲಿದೆ ಎಂದರು.

ಮಹಿಳೆಯರಿಗೆ ಶಿಕ್ಷಣ, ಸಮಾನತೆ ಆರ್ಥಿಕ ಸ್ವಾವಲಂಬನೆ, ರಾಜಕೀಯ ಅಧಿಕಾರ ಲಭ್ಯವಾಗಲಿ ಎಂಬ ಹಿನ್ನೆಲೆಯಲ್ಲಿ ಪ್ರತಿ ವರ್ಷ ಮಾ.8 ರಂದು ಮಹಿಳಾ ದಿನಾಚರಣೆ ಆಚರಿಸಲಾಗುತ್ತಿದೆ. ಡಾ.ಬಿ.ಆರ್.ಅಂಬೇಡ್ಕರ್ ಅವರು ಮಹಿಳೆಯರಿಗೆ ಸಮಾನ ಅವಕಾಶ, ಸಮಾನ ವೇತನ ನೀಡಬೇಕು ಎಂದು ಕಾಯ್ದೆ ರೂಪಿಸಿದರು. ದರಂತೆ ಕುಟುಂಬವನ್ನು ರೂಪಿಸಿ ಉತ್ತಮ ಸಮಾಜವನ್ನು ರೂಪಿಸುವಲ್ಲಿ ಮಹಿಳೆಯರ ಪತ್ರ ಪ್ರಮುಖವಾಗಿದೆ ಎಂದು ತಿಳಿಸಿದರು.

ಶಾಸಕರಾದ ತನ್ವೀರ್ ಸೇಠ್, ಜಿ.ಟಿ. ದೇವೇಗೌಡ, ಕೆ.ಹರೀಶ್‌ಗೌಡ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತ ರೆಡ್ಡಿ, ಜಿಪಂ ಸಿಇಒ ಎಸ್.ಯುಕೇಶ್ ಕುಮಾರ್, ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಶೇಖ್ ತನ್ವೀರ್ ಆಸಿಫ್, ಮೈಸೂರು ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ. ಕುಮಾರಸ್ವಾಮಿ, ಎಸ್‌ಪಿ ಮಲ್ಲಿಕಾರ್ಜುನ ಬಾಲದಂಡಿ, ಡಿಸಿಪಿ ಸುಂದರ್‌ರಾಜ್ ಮತ್ತಿತರರಿದ್ದರು.



ಮೂಲ ಸೌಕರ್ಯ, ತೈಲ ಸಂಸ್ಕರಣಾಗಾರದತ್ತ ಭೀಕರ ದಾಳಿ

ಕೆಲವು ದಿನಗಳ ಹಿಂದಷ್ಟೇ ಇಸ್ರೇಲ್ ವಾಯುಪಡೆಯು ಇರಾನ್‌ನ ರಾಜಧಾನಿ ಟೆಹ್ರಾನ್‌ನ ಮೆಹ್ರಾಬಾದ್ ವಿಮಾನ ನಿಲ್ದಾಣದ ಮೇಲೆ ದಾಳಿ ನಡೆಸಿ, ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್‌ನ ಕುದ್ಸ್ ಫೋರ್ಸ್‌ಗೆ ಸೇರಿದ 16 ಯುದ್ಧ ವಿಮಾನಗಳನ್ನು ಇಸ್ರೇಲ್ ಧ್ವಂಸಗೊಳಿಸಿತ್ತು ಟೆಹರಾನ್‌ನ ವಿಶ್ವವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಹಸನ್ ಅಹ್ಮದಿಯನ್ ಅವರು ಇರಾನ್‌ನ ನಾಗರಿಕ ಮೂಲಸೌಕರ್ಯ ಮತ್ತು ಕೈಗಾರಿಕಾ ಸ್ವತ್ತುಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಲಾಗುತ್ತಿದ್ದು, ನಿನ್ನೆ ರಾತ್ರಿಯೂ ಟೆಹರಾನ್‌ನ ತೈಲ ಸಂಸ್ಕರಣಾಗಾರದ ಮೇಲೆ ದಾಳಿ ನಡೆಸಲಾಗಿದೆ. ಯುದ್ಧವು ಸಂಪೂರ್ಣವಾಗಿ ಹೊಸ ಹಂತಕ್ಕೆ ಸಾಗುತ್ತಿದ್ದು, ಇಸ್ರೇಲ್ ವಿರುದ್ಧ ಇರಾನ್ ತನ್ನ ಹೆಚ್ಚು ಅತ್ಯಾಧುನಿಕ ಮದ್ದುಗುಂಡುಗಳನ್ನು ಬಳಸುವುದರೊಂದಿಗೆ ಎದಿರೇಟು ನೀಡಲಿದೆ ಎಂದು ತಿಳಿಸಿದ್ದಾರೆ.

ಇದಕ್ಕೆ ಪೂರಕವಾಗಿ ಭಾನುವಾರ ಇಸ್ರೇಲ್ ಮಿಲಿಟರಿ ತನ್ನ ಅಧಿಕೃತ ಎಕ್ಸ್ ಖಾತೆಯಲ್ಲಿ ಪೋಸ್ಟ್ ಹಂಚಿಕೊಂಡಿದ್ದು, ಖಮೇನಿ ನಂತರ ಅಧಿಕಾರಕ್ಕೆ ಬರುವ ಯಾರನ್ನೇ ಆದರೂ ನಾವು ಬೇಟೆಯಾಡುತ್ತೇವೆ. ಅಷ್ಟೇ ಅಲ್ಲ, ಮುಂದಿನ ನಾಯಕನನ್ನು ಆಯ್ಕೆ ಮಾಡುವ ಪ್ರಕ್ರಿಯೆಯಲ್ಲಿ ಭಾಗಿಯಾಗುವ ಪ್ರತಿಯೊಬ್ಬರೂ ನಮ್ಮ ಗುರಿಯಾಗಲಿದ್ದಾರೆ. ಇದು ಅಂತಿಮ ಎಚ್ಚರಿಕೆ ಎಂದು ಗುಡುಗಿದೆ.

ಇಸ್ರೇಲ್ ದಾಳಿಗೆ ಇರಾನ್ ಕೂಡ ತಕ್ಕ ಪ್ರತ್ಯುತ್ತರ ನೀಡುತ್ತಿದೆ. ಇಸ್ರೇಲಿ ನಗರಗಳು ಮತ್ತು ಜೋರ್ಡಾನ್‌ನ ವಾಯುನೆಲೆಯನ್ನು ಗುರಿಯಾಗಿಸಿಕೊಂಡಿರುವುದಾಗಿ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್ ಕಾರ್ಪ್ಸ್ (ಐಆರ್‌ಜಿಸಿ) ಹೇಳಿಕೊಂಡಿದೆ. ಟೆಲ್ ಅವೀವ್ ಮತ್ತು ಬೀರ್‌ಶೆಬಾ ನಗರಗಳಲ್ಲಿನ ಮಿಲಿಟರಿ ಗುರಿಗಳ ಮೇಲೆ ಇರಾನಿನ ಕ್ಷಿಪಣಿ ದಾಳಿ ಮಾಡಲಾಗಿದೆ. ಅಮೆರಿಕದ ಆಕ್ರಮಣಕಾರಿ ಫೈಟರ್ ಜೆಟ್‌ಗಳ ಅತಿದೊಡ್ಡ ಮತ್ತು ಅತ್ಯಂತ ಸಕ್ರಿಯ ಆಕ್ರಮಣಕಾರಿ ನೆಲೆಯಾದ ಜೋರ್ಡಾನ್‌ನ ಅಜ್ರಾಕ್ ಪಟ್ಟಣದಲ್ಲಿರುವ ಮುವಾಫಕ್ ಅಲ್–ಸಾಲ್ಟಿ ವಾಯುನೆಲೆಯ ಮೇಲೆ ಹಲವಾರು ಬಾರಿ ದಾಳಿ ಮಾಡಲಾಗಿದೆ ಎಂದು ತಸ್ನಿಮ್ ಸುದ್ದಿ ಸಂಸ್ಥೆ ವರದಿ ಮಾಡಿದೆ.

ಟ್ರಂಪ್ ಬೆಲೆ ತೆರಬೇಕಾಗುತ್ತದೆ: ಇರಾನ್ ಸುಪ್ರೀಂ ಲೀಡರ್ ಆಯತೊಲ್ಲಾ ಅಲಿ ಖಮೇನಿ ಹತ್ಯೆಗೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬೆಲೆ ತೆರಬೇಕಾಗುತ್ತದೆ. ಚೆಲ್ಲಿದ ನಮ್ಮವರ ರಕ್ತಕ್ಕೆ ಸೇಡು ತೀರಿಸಿಕೊಳ್ಳದೇ ನಾವು ಬಿಡಲ್ಲ ಎಂದು ಇರಾನ್ ಭದ್ರತಾ ಮುಖ್ಯಸ್ಥ ಅಲಿ ಲಾರಿಜಾನಿ ಹೇಳಿದ್ದಾರೆ.

ಈ ಕುರಿತು ಎಕ್ಸ್‌ನಲ್ಲಿ ಪೋಸ್ಟ್ ಮಾಡಿರುವ ಅವರು, ನಮ್ಮ ನಾಯಕ ಮತ್ತು ನಮ್ಮ ಜನರ ರಕ್ತದ ಸೇಡನ್ನು ನಾವು ಪಟ್ಟುಬಿಡದೆ ಸೇಡು ತೀರಿಸಿಕೊಳ್ಳುತ್ತೇವೆ. ಇದಕ್ಕೆ ಟ್ರಂಪ್ ಬೆಲೆ ತೆರಬೇಕು, ಬೆಲೆ ತೆರುತ್ತಾರೆ. ಇರಾನ್ ವಿರುದ್ಧ ನೆರೆಹೊರೆಯ ದೇಶಗಳು ಅಮೆರಿಕಾಗೆ ತಮ್ಮ ಪ್ರದೇಶ ಬಳಸುವುದನ್ನು ತಡೆಯಬೇಕು. ಇಲ್ಲದಿದ್ದರೇ ಖಂಡಿತವಾಗಿ ನಾವುಗಳು ಆ ದೇಶಗಳ ಮೇಲೆ ದಾಳಿ ಮಾಡದೇ ಬೇರೆ ದಾರಿಯಿಲ್ಲ. ಆ ಪ್ರದೇಶದಿಂದ ಶತ್ರುಗಳ ನಮ್ಮ ಮೇಲೆ ದಾಳಿ ಮಾಡಿದ್ರೆ ನಾವು ತಿರುಗಿ ಪ್ರತಿಕ್ರಿಯೆ ಕೊಡ್ತೇವೆ. ಐಆರ್‌ಜಿಸಿ, ಕೆಲವು ಅಮೆರಿಕನ್ ಸೈನಿಕರನ್ನು ಸೆರೆ ಹಿಡಿದಿದೆ. ಆದಾಗ್ಯೂ ನಮ್ಮ ನಾಯಕನನ್ನು ಕೊಂದು, ನಮ್ಮ ಸಾವಿರಕ್ಕೂ ಹೆಚ್ಚು ಜನರನ್ನು ಹುತಾತ್ಮರನ್ನಾಗಿ ಮಾಡಿದ್ದಕ್ಕೆ ನಾವು ಟ್ರಂಪ್ ಅವರನ್ನು ಒಂಟಿಯಾಗಿ ಓಡಾಡಲು ಬಿಡಲ್ಲ. ಅದಕ್ಕೆ ಅವನು ಬೆಲೆ ತೆರಲೇಬೇಕು ಎಂದು ಕಿಡಿಕಾರಿದ್ದಾರೆ.

ಇದಾದ ಬಳಿಕ ಸರಣಿ ಪೋಸ್ಟ್ ಗಳನ್ನು ಮಾಡಿದ ಅಲಿ ಲಾರಿಜಾನಿ, ಅಮೆರಿಕಾ ಇರಾನ್ ಯುದ್ಧದಲ್ಲಿ ಸಾವು ನೋವುಗಳು ಹಾಗೂ ಸೆರೆಹಿಡಯಲಾಗಿರುವ ಅಮೆರಿಕಾದ ಸೈನಿಕರ ಸಂಖ್ಯೆ ಬಗ್ಗೆ ತಪ್ಪು ಮಾಹಿತಿ ನೀಡುವ ಮೂಲಕ ಜಗತ್ತಿನ ದಾರಿ ತಪ್ಪಿಸುವ ಪ್ರಯತ್ನ ಮಾಡುತ್ತಿದ್ದಾರೆ. ಇರಾನ್ ದಾಳಿಯಲ್ಲಿ ಕೇವಲ 6 ಜನಸೈನಿಕರು ಸಾವನ್ನಪ್ಪಿದ್ದಾರೆ ಎಂದು ಟ್ರಂಪ್ ಜಗತ್ತಿನ ದಾರಿ ತಪ್ಪಿಸುತ್ತಿದ್ದು, ವಾಸ್ತವಾಗಿ ಸಾವನ್ನಪ್ಪಿರುವ ಅಮೆರಿಕಾದ ಸೈನಿಕರ ಸಂಖ್ಯೆ 500ಕ್ಕೂ ಅಧಿಕವಿದೆ ಎಂದು ತಿಳಿಸಿದ್ದಾರೆ.

ಭಾರತ ಟಿ20 ವಿಶ್ವಕಪ್ ಸಾಮ್ರಾಟ

ಭಾರತವನ್ನು ಮೊದಲು ಬ್ಯಾಟಿಂಗ್‌ಗೆ ಆಹ್ವಾನಿಸಿತು. ಕ್ರೀಡಾಂಗಣದಲ್ಲಿ 1.32 ಲಕ್ಷ ಕ್ರಿಕೆಟ್ ಅಭಿಮಾನಿಗಳ ಸಮ್ಮುಖದಲ್ಲಿ ಬ್ಯಾಟಿಂಗ್ ಇಳಿದ ಭಾರತ 20 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 255 ರನ್ ಕಲೆ ಹಾಕಿತು. ಭಾರತ ನೀಡಿದ 256 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ನ್ಯೂಜಿಲೆಂಡ್ 19 ಓವರ್‌ಗಳಲ್ಲಿ ಇನ್ನೂ 6 ಎಸೆತಗಳು ಬಾಕಿ ಇರುವಂತೆಯೇ 159 ರನ್‌ಗಳಿಗೆ ಆಲೌಟಾಗುವ ಮೂಲಕ ಸೋಲು ಅನುಭವಿಸಿತು.

ಸಂಜು–ಕಿಶನ್–ಅಭಿಷೇಕ್ ಕಮಾಲ್: ಭಾರತದ ಪರ ಇನ್ನಿಂಗ್ಸ್ ಆರಂಭಿಸಿದ ಅಭಿಷೇಕ್ ಶರ್ಮಾ ಹಾಗೂ ಸಂಜು ಸ್ಯಾಮ್ಸನ್ ಮೊದಲ ವಿಕೆಟ್‌ಗೆ 98 ರನ್‌ಗಳ ಜೊತೆಯಾಟವಾಡುವ ಮೂಲಕ ತಂಡಕ್ಕೆ ಉತ್ತಮ ಆರಂಭ ಒದಗಿಸಿದರು. ನ್ಯೂಜಿಲೆಂಡ್ ಬೌಲರ್‌ಗಳ ಮೇಲೆ ಸವಾರಿ ಮಾಡಿದ ಆರಂಭಿಕರಿಬ್ಬರು ಸಿಕ್ಸರ್, ಬೌಂಡರಿಗಳ ಸುರಿಮಳೆಗೈದು ಅಬ್ಬರದ ಬ್ಯಾಟಿಂಗ್ ನಡೆಸಿದರು. ಟೂರ್ನಿಯಲ್ಲೇ ಅತೀ ವೇಗದ ಅರ್ಧಶತಕ ಸಿಡಿಸಿದ ಬೆನ್ನಲ್ಲೇ 21 ಎಸೆತಗಳಲ್ಲಿ 6 ಬೌಂಡರಿ, 4 ಸಿಕ್ಸರ್ ಒಳಗೊಂಡ 52 ರನ್ ಗಳಿಸಿ ಅಭಿಷೇಕ್ ಶರ್ಮಾ ಭಾರೀ ಹೊಡೆತಕ್ಕೆ ಮುಂದಾಗಿ ವಿಕೆಟ್ ಒಪ್ಪಿಸಿದರು. ನಂತರ ಬಂದ ಇಶಾನ್ ಕಿಶಾನ್ ಮರು ಎಸೆತದಲ್ಲೇ 2 ಗಳಿಸುವ ಮೂಲಕ ಭಾರತ 7.2 ಓವರ್‌ಗಳಲ್ಲಿ 100 ರನ್ ಗಳಿಸುವಲ್ಲಿ ನೆರವಾದರು.

ಕಿವೀಸ್ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದ ಸಂಜು ಸ್ಯಾಮ್ಸನ್ ಹಾಗೂ ಇಶನ್ ಕಿಶನ್ 2ನೇ ವಿಕೆಟ್‌ಗೆ 48 ಎಸೆತಗಳಲ್ಲಿ 105 ರನ್‌ಗಳ ಜೊತೆಯಾಟವಾಡಿದರು. ಟೂರ್ನಿಯಲ್ಲಿ ಸತತ ಮೂರನೇ ಅರ್ಧಶತಕ ದಾಖಲಿಸಿದ ಸಂಜು ಸ್ಯಾಮ್ಸನ್ 46 ಎಸೆತಗಳಲ್ಲಿ 5 ಬೌಂಡರಿ ಹಾಗೂ 8 ಸಿಕ್ಸರ್ ಸಹಿತ 89 ಸಿಕ್ಸರ್ ಚಚ್ಚಿದರೆ, ಇಶಾನ್ ಕಿಶನ್ 25 ಎಸೆತಗಳಲ್ಲಿ 4 ಬೌಂಡರಿ ಹಾಗೂ 4 ಸಿಕ್ಸರ್ ಸಹಿತ 54 ರನ್ ಬಾರಿಸಿ ಔಟಾದರು. ನಂತರ ಬಂದ ನಾಯಕ ಸೂರ್ಯಕುಮಾರ್ ಯಾದವ್ ಗೋಲ್ಡನ್ ಡಕ್‌ಔಟ್‌ಗೆ ಬಲಿಯಾದರೇ, ಹಾರ್ದಿಕ ಪಾಂಡ್ಯ 18 ರನ್ ಗಳಿಸಿ ನಿರ್ಗಮಿಸಿದರು. ತಿಲಕ್ ವರ್ಮಾ ಅಜೇಯ 8 ರನ್ ಗಳಿಸಿದರೆ, ಕೊನೆಯ ಓವರ್‌ನಲ್ಲಿ ಅಬ್ಬರಿಸಿದ ಶಿವಂ ದುಬೆ 8 ಎಸೆತಗಳಲ್ಲಿ 3 ಬೌಂಡರಿ ಹಾಗೂ 2 ಸಿಕ್ಸರ್ ಸಹಿತ ಅಜೇಯ 26 ರನ್ ಬಾರಿಸಿ ತಂಡದ ಮೊತ್ತ 250ರ ಗಡಿ ದಾಟಲು ಸಹಕರಿಸಿದರು. ನ್ಯೂಜಿಲೆಂಡ್ ಪರ ಜೇಮ್ಸ್ ನೀಶಮ್ 3, ರಚಿನ್ ರವೀಂದ್ರ ಹಾಗೂ ಮ್ಯಾಟ್ ಹೆನ್ರಿ ತಲಾ ಒಂದೊಂದು ವಿಕೆಟ್ ಪಡೆದರು.

ಕೀವಿಸ್‌ಗೆ ಸೋಲು: ಭಾರತ ನೀಡಿದ ಬೃಹತ್ ಮೊತ್ತ ಬೆನ್ನತ್ತಿದ ನ್ಯೂಜಿಲೆಂಡ್ ಆರಂಭದಿಂದಲೂ ನಿಗದಿತವಾಗಿ ವಿಕೆಟ್ ಕಳೆದುಕೊಳ್ಳುವ ಮೂಲಕ ಸೋಲು ಅನುಭವಿಸಿ ಟ್ರೋಫಿ ಗೆಲ್ಲುವ ಅವಕಾಶದಿಂದ ವಂಚಿತವಾಯಿತು.

ನ್ಯೂಜಿಲೆಂಡ್ ಪರ ಆರಂಭಿಕ ಟಿಮ್ ಸೈಫರ್ಟ್ 26 ಎಸೆತಗಳಲ್ಲಿ 5 ಸಿಕ್ಸರ್, 2 ಬೌಂಡರಿ ಒಳಗೊಂಡ 52 ರನ್ ಗಳಿಸಿದ್ದು ಹೊರತುಪಡಿಸಿದರೇ, ಉಳಿದವರಿಂದ ನಿರೀಕ್ಷಿತ ಆಟ ಹೊರ ಹೊಮ್ಮದ ಎರಡಂಕಿ ಮೊತ್ತ ದಾಖಲಿಸಲು ಸಾಧ್ಯವಾಗದೇ ಪೆವಿಲಿಯನ್ ಪರೇಡ್ ನಡೆಸಿದರು.

ಉಳಿದಂತೆ ಫಿನ್ ಆಲೆನ್ 9, ರಚಿನ್ ರವೀಂದ್ರ 1, ಗ್ಲೆನ್ ಫಿಲಿಪ್ಸ್ 5, ಮಾರ್ಕ್ ಚಾಪ್ಮನ್ 3, ಡ್ಯಾರೆಲ್ ಮಿಚೆಲ್ 17, ಜೇಮ್ಸ್ ನೀಶಮ್ 8, ಮ್ಯಾಟ್ ಹೆನ್ರಿ ಗೋಲ್ಡನ್ ಡಕ್ ಆದರು. ಕೊಂಚ ಹೋರಾಟ ತೋರಿದ ನಾಯಕ ಮಿಚೆಲ್ ಸ್ಯಾಂಟ್ನರ್ 35 ಎಸೆತಗಳಲ್ಲಿ 43 ರನ್ ಗಳಿಸಿದರು. ಈ ವೇಳೆ ಬುಮ್ರಾ ಅವರ ಸ್ಲೋವರ್ ಒನ್ ದಾಳಿಗೆ ಕ್ಲೀನ್ ಬೌಲ್ಡ್ ಆಗಿ ಹೊರ ನಡೆದರು. ಭಾರತದ ಪರ ಬುಮ್ರಾ 4 ವಿಕೆಟ್ ಪಡೆದು ಮಿಂಚಿದರು. ಅಕ್ಷರ್ ಪಟೇಲ್ 3, ಹಾರ್ದಿಕ್ ಪಾಂಡ್ಯ, ವರುಣ್ ಚಕ್ರವರ್ತಿ ಮತ್ತು ಅಭಿಷೇಕ್ ಶರ್ಮಾ ತಲಾ ಒಂದೊಂದು ವಿಕೆಟ್ ಪಡೆದರು. ಅಂತಿಮವಾಗಿ ಬೂಮ್ರಾ ಪಂದ್ಯಶ್ರೇಷ್ಠರಾದರೇ, ಸಂಜು ಸ್ಯಾಮ್ಸನ್ ಸರಣಿ ಶ್ರೇಷ್ಠರಾಗಿ ಹೊರ ಹೊಮ್ಮಿದರು.






ಸತತ ಎರಡು ಬಾರಿ ವಿಶ್ವಕಪ್ ಗೆದ್ದಿರುವುದು ಇದೇ ಮೊದಲು, ಯಾವುದೇ ತಂಡವು ಟಿ20 ಸ್ವರೂಪದಲ್ಲಿ ಈ ಸಾಧನೆ ಮಾಡಿರುವುದು ಇದೇ ಮೊದಲು. ಟ್ರೋಫಿಗೆ ಸಂಪೂರ್ಣವಾಗಿ ಅರ್ಹರು ಮತ್ತು ಸರಿಯಾದ ವಿಜೇತರು. ನಮ್ಮ ತಂಡದಿಂದ ಎಂತಹ ಅದ್ಭುತ ಪ್ರದರ್ಶನ ಮತ್ತು ಕ್ರಿಕೆಟ್‌ನ ವಿಶೇಷ ಬ್ರ್ಯಾಂಡ್ ಅನ್ನು ಪ್ರದರ್ಶಿಸಲಾಗಿದೆ.

-ಸಚಿನ್ ತೆಂಡೂಲ್ಕರ್, ಮಾಜಿ ಕ್ರಿಕೆಟಿಗ.



ಮತ್ತೊಮ್ಮೆ ಚಾಂಪಿಯನ್ಸ್! ಟೂರ್ನಮೆಂಟ್ ಉದ್ದಕ್ಕೂ ಅದ್ಭುತ ಪ್ರದರ್ಶನ ನೀಡಿದ ಸಂಜು ಸ್ಯಾಮ್ಸನ್ ಮತ್ತು ಜಸ್ಪ್ರೀತ್ ಬುಮ್ರಾ ಅವರನ್ನು ವಿಶೇಷ ಗೌರವದೊಂದಿಗೆ ನಮ್ಮ ಮೆನ್ ಇನ್ ಬ್ಲೂ ತಂಡಕ್ಕೆ ಅದ್ಭುತ ಗೆಲುವು. ತವರಿನಲ್ಲಿ ಟ್ರೋಫಿಯನ್ನು ಉಳಿಸಿಕೊಂಡು ದೇಶಕ್ಕೆ ಆಚರಿಸಲು ಮತ್ತೊಂದು ಮರೆಯಲಾಗದ ಕ್ಷಣವನ್ನು ನೀಡಿದ ಟೀಮ್ ಇಂಡಿಯಾಗೆ ಅಭಿನಂದನೆಗಳು.

-ರಾಹುಲ್ ಗಾಂಧಿ, ಲೋಕಸಭೆ ವಿಪಕ್ಷ ನಾಯಕ.



ಐಸಿಸಿ ಪುರುಷರ ಟಿ20 ವಿಶ್ವಕಪ್ ಗೆದ್ದ ಭಾರತೀಯ ಕ್ರಿಕೆಟ್ ತಂಡಕ್ಕೆ ಅಭಿನಂದನೆಗಳು. ಈ ವಿಶ್ವಕಪ್‌ನ ಮೊದಲ ದಿನದಿಂದಲೇ ನಮ್ಮ ತಂಡ ನಿಜವಾದ ಚಾಂಪಿಯನ್‌ಗಳಂತೆ ಆಡಿತು ಮತ್ತು ಪ್ರಶಸ್ತಿಗೆ ಅರ್ಹರು ಎಂದು ಸಾಬೀತುಪಡಿಸಿತು. ಯುವ ಮತ್ತು ತುಲನಾತ್ಮಕವಾಗಿ ಅನನುಭವಿಗಳಾಗಿದ್ದರೂ, ತಂಡವು ಪ್ರತಿಭೆ ಯಿಂದ ಸಮೃದ್ಧವಾಗಿತ್ತು. ತವರಿನ ಅಭಿಮಾನಿಗಳ ಬೆಂಬಲ, ಆಟಗಾರರ ಅವಿಶ್ರಾಂತ ಪ್ರಯತ್ನಗಳು ಮತ್ತು ಲಕ್ಷಾಂತರ ಭಾರತೀಯರ ಆಶಯಗಳಿಂದ, ವಿಶ್ವಕಪ್ ಕಿರೀಟವು ಈಗ ಭಾರತಕ್ಕೆ ಸೇರಿದೆ. ಮತ್ತೊಮ್ಮೆ, ಕ್ರಿಕೆಟ್ ಜಗತ್ತಿನಲ್ಲಿ ಭಾರತದ ಧ್ವಜ ಎತ್ತರಕ್ಕೆ ಹಾರುತ್ತದೆ. ಇದು ಭಾರತೀಯ ಕ್ರಿಕೆಟ್ ಇತಿಹಾಸದಲ್ಲಿ ಮರೆಯಲಾಗದ ದಿನ.

-ಸಿದ್ದರಾಮಯ್ಯ, ಮುಖ್ಯಮಂತ್ರಿ

ದೇಶಾದ್ಯಂತ ಕ್ರೀಡಾಭಿಮಾನಿಗಳ ಸಂಭ್ರಮಾಚರಣೆ

ಅಹಮದಾಬಾದ್: 3ನೇ ಬಾರಿಗೆ ಐಸಿಸಿ ಟಿ20 ವಿಶ್ವಕಪ್ ಟ್ರೋಫಿಯನ್ನು ಭಾರತ ಮುಡಿಗೇರಿಸಿಕೊಳ್ಳುತ್ತಿದ್ದಂತೆಯೇ ದೇಶದ ಕೋಟ್ಯಾಂತರ ಕ್ರಿಕೆಟ್ ಅಭಿಮಾನಿಗಳು ಸಂಭ್ರಮಾಚರಣೆ ನಡೆಸಿದರು.

ದೇಶದ ಪ್ರತಿಯೊಂದು ನಗರದಲ್ಲೂ ಅಭಿಮಾನಿಗಳು ಪಟಾಕಿ ಸಿಡಿಸಿ, ಸಿಹಿ ಹಂಚಿ, ಭಾರತ ತಂಡದ ಪರ ಜೈಕಾರ ಹಾಕುತ್ತಾ ಸಂಭ್ರಮಾಚರಣೆ ನಡೆಸಿದರು.

ಕರ್ನಾಟಕದಲ್ಲೂ ಸಂಭ್ರಮಾಚರಣೆ: ಭಾರತ ಟಿ20 ವಿಶ್ವಕಪ್ ಚಾಂಪಿಯನ್ ಆಗುತ್ತಿದ್ದಂತೆಯೇ ಬೆಂಗಳೂರು ಮೈಸೂರು, ಮಂಡ್ಯ, ಚಾಮರಾಜನಗರ, ಶಿವಮೊಗ್ಗ ಸೇರಿದಂತೆ ರಾಜ್ಯಾದ್ಯಂತ ಅಭಿಮಾನಿಗಳು ಸಿಹಿ ಹಂಚಿ, ಪಟಾಕಿ ಸಿಡಿಸಿ ಸಂಭ್ರಮಿಸಿದರು.

ಮೈಸೂರಲ್ಲಿ ಬಹುತೇಕ್ ಓಪನ್ ಬಾರ್‌ಗಳು, ಪ್ರತ್ಯೇಕ ಸ್ಕ್ರೀನ್‌ಗಳಲ್ಲಿ ಪಂದ್ಯ ವೀಕ್ಷಿಸಿದ ಅಭಿಮಾನಿಗಳು ಭಾರತ್ ಮಾತಾ ಕೀ ಜೈ ಘೋಷಣೆ ಕೂಗುತ್ತಾ ಸಂಭ್ರಮಿಸಿದರು. ಕೆಲವರು ದೇವಾಲಯಗಳಲ್ಲಿ ವಿಶೇಷ ಪೂಜೆ ಸಲ್ಲಿಸಿದರೆ, ಮತ್ತೆ ಕೆಲವರು ಅನ್ನ ಸಂತರ್ಪಣೆ ಏರ್ಪಡಿಸಿದ್ದರು. ಯುವಕರು ತಮ್ಮ–ತಮ್ಮ ಏರಿಯಾಗಳಲ್ಲಿ ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ ಗೆಲುವನ್ನು ಕೊಂಡಾಡಿದರು.

ವಿಶೇಷ ಪೂಜೆ: ಭಾರತ ಟಿ20 ವಿಶ್ವಕಪ್ ಗೆಲ್ಲಲಿ ಎಂದು ದೇಶಾದ್ಯಂತ ಎಲ್ಲಾ ದೇವಾಲಯಗಳಲ್ಲೂ ಅಭಿಮಾನಿಗಳು ಪೂಜೆ ಸಲ್ಲಿಸಿದರು.

ಕೆಎಸ್‌ಐಸಿ ಕಾರ್ಖಾನೆ ಮುಚ್ಚುವುದಿಲ್ಲ

ಉದ್ಯಮವು ಸಾಂಪ್ರದಾಯಿಕ ಜವಳಿ ಕಡೆಗೆ ಬದಲಾಗುತ್ತಿದ್ದಂತೆ ಮೈಸೂರು ರೇಷ್ಮೆ ವಿಶ್ವದ ಅತ್ಯುತ್ತಮ ರೇಷ್ಮೆಗಳಲ್ಲಿ ಒಂದಾಗಿ ತನ್ನ ಪರಂಪರೆಯನ್ನು ಸಂರಕ್ಷಿಸುವಲ್ಲಿ ಮುಂಚೂಣಿಯಲ್ಲಿದೆ. ಇದೇ ವೇಳೆ ಸಾಂಪ್ರದಾಯಿಕ ನೇಯ್ಗೆ ಪದ್ಧತಿಯನ್ನು ಆಧುನಿಕರಿಸಿಕೊಂಡು ತನ್ನ ಗಟ್ಟಿತನವನ್ನು ಮತ್ತಷ್ಟು ಹೆಚ್ಚು ಮಾಡಿಕೊಂಡಿದೆ ಎಂದು ಹೇಳಿದ್ದಾರೆ. ನಿರ್ದಿಷ್ಟವಾಗಿ ತಿ.ನರಸೀಪುರ ಪ್ರದೇಶದ ಹವಾಮಾನ ಹಾಗೂ ಭೌಗೋಳಿಕ ವಾತಾವರಣ, ಅಲ್ಲಿ ಬೆಳೆಸಿರುವ ಮರಗಳು, ಅಲ್ಲಿ ಹರಿಯುವ ನೀರಿನ ಲಭ್ಯತೆ ರೇಷ್ಮೆ ಕೃಷಿಗೆ ಸೂಕ್ತ ವಾತಾವರಣವನ್ನು ಸೃಷ್ಟಿಸುತ್ತದೆ. ಇದು ಮೈಸೂರು ರೇಷ್ಮೆ ಗುಣಮಟ್ಟವನ್ನು ಇಮ್ಮಡಿಗೊಳಿಸುತ್ತದೆ ಎಂದು ಪ್ರಮೋದಾ ದೇವಿ ಒಡೆಯರ್ ಅವರು ಅಭಿಪ್ರಾಯಪಟ್ಟಿದ್ದಾರೆ. ಇಂತಹ ಪ್ರತಿಷ್ಠಿತ ಉದ್ಯಮವನ್ನು ಮುಚ್ಚುತ್ತಾರೆಂಬ ಸುದ್ದಿ ಹರಡಿದಾಗ ಸಹಜವಾಗಿಯೇ ಮೈಸೂರು ಹಾಗೂ ಬೆಂಗಳೂರು ಜನರು ಆತಂಕ ವ್ಯಕ್ತಪಡಿಸಿದರು. ಈ ಸಂಬಂಧ ನಾನು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದೆ ಎಂದು ಹೇಳಿದ್ದಾರೆ.

ಈ ವೇಳೆ ಯಾವುದೇ ಕಾರಣಕ್ಕೂ ಕಾರ್ಖಾನೆ ಮುಚ್ಚುವುದಿಲ್ಲ ಎಂದು ಡಾ.ಮಹದೇವಪ್ಪ ಅವರು ಭರವಸೆ ನೀಡಿದ್ದಾರೆ. ಅಲ್ಲದೆ ಕಾರ್ಖಾನೆ ಮುಚ್ಚುವುದಿಲ್ಲ ಎಂಬ ಬಗ್ಗೆ ಡಾ.ಮಹದೇವಪ್ಪ ಅವರಿಂದ ಸಕರಾತ್ಮಕ ಪ್ರತಿಕ್ರಿಯೆ ವ್ಯಕ್ತವಾಗಿದೆ. ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಎಲ್ಲರ ಪರವಾಗಿ ಅವರಿಗೆ ನಾನು ಧನ್ಯವಾದ ತಿಳಿಸುತ್ತೇನೆ ಎಂದು ತಿಳಿಸಿದ್ದಾರೆ. ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯ ಯೋಜನೆ ಹಾಗೂ ಉತ್ತೇಜನಕ್ಕೆ ಕೃತಜ್ಞತೆ ಹಾಗೂ ಗೌರವ ಸಲ್ಲಿಸಲು ಇದೊಂದು ಅವಕಾಶವಾಗಿದೆ ಎಂದು ಪ್ರಮೋದಾ ದೇವಿ ಒಡೆಯರ್ ಅವರು ಅಭಿಪ್ರಾಯಪಟ್ಟಿದ್ದಾರೆ.

ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವೊಂದೇ ಸಾಲದು



ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಖ್ಯಾತ ಕವಯತ್ರಿ ಸ್ಮಿತಾ ಅಮೃತಾರಾಜ್‌ರನ್ನು ಸನ್ಮಾನಿಸಲಾಯಿತು.

ಮಡಿಕೇರಿ, ಮಾ.8–ಮಹಿಳೆಯರಿಗೆ ಆರ್ಥಿಕ ಸ್ವಾತಂತ್ರ್ಯವೊಂದೇ ಸಾಲದು. ಅದರೊಂದಿಗೆ ಆರ್ಥಿಕ ಜ್ಞಾನ, ನಿರ್ಧಾರ ತೆಗೆದುಕೊಳ್ಳುವ ಸಾಮರ್ಥ್ಯ, ಆತ್ಮವಿಶ್ವಾಸ ಮತ್ತು ಸಾಮಾಜಿಕ ಬೆಂಬಲ ಅತ್ಯಗತ್ಯ ಎಂದು ಖ್ಯಾತ ಕವಯತ್ರಿ ಸ್ಮಿತಾ ಅಮೃತಾರಾಜ್ ಹೇಳಿದ್ದಾರೆ.

ನಗರದ ಗಾಂಧಿ ಭವನದಲ್ಲಿ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಭಾಷಣಕಾರರಾಗಿ ಮಾತನಾಡಿ, ಮಹಿಳಾ ದಿನಾಚರಣೆ ಕೇವಲ ಆಚರಣೆಯಾಗದೆ ಮಹಿಳೆಯರ ಸಾಧನೆಯನ್ನು ಗುರುತಿಸಿ, ಅವರನ್ನು ಗೌರವಿಸುವ ದಿನವಾಗಬೇಕು ಅನಾದಿ ಕಾಲದಿಂದಲೂ ಮಹಿಳೆಯರನ್ನು ಎರಡನೇ ದರ್ಜೆಯ ನಾಗರಿಕರಂತೆ ಪರಿಗಣಿಸಿ ಕಡೆಗಣಿಸಲಾಗುತ್ತಿದೆ. ಆದರೂ ಪ್ರಸ್ತುತ ದಿನಗಳಲ್ಲಿ ಶಿಕ್ಷಣ ಹಾಗೂ ಆರ್ಥಿಕ ಸ್ವಾತಂತ್ರ್ಯದಿಂದ ಸಬಲೀಕರಣಗೊಳ್ಳುತ್ತಿರುವುದು ಶ್ಲಾಘನೀಯ ಎಂದರು.

ಮಹಿಳೆಯರನ್ನು ಗೌರವಿಸುವ ಕಾರ್ಯ ಸಮಾಜ ಮಾಡಬೇಕಿದೆ. ಮಹಿಳೆಯರಿಗೆ ಶಿಕ್ಷಣ, ಉದ್ಯೋಗಾವಕಾಶಗಳಲ್ಲಿ ಸಮಾನವಕಾಶಗಳನ್ನು ನೀಡಬೇಕು. ಮಹಿಳೆಯರು ಸಹ ಇಂದು ವೃತ್ತಿ ಜೀವನದಲ್ಲಾಗಲೀ, ಇತರ ರಂಗಗಳಲ್ಲಾಗಲೀ ಅವಕಾಶಗಳು ಬಂದಾಗ ಕೀಳರಿಮೆಯಿಂದ ಹಿಂದೆ ಸರಿಯದೆ ಪ್ರತಿಯೊಂದನ್ನು ಸವಾಲಾಗಿ ಸ್ವೀಕರಿಸಬೇಕು ಎಂದರು.

ತಾಲೂಕು ಅಧ್ಯಕ್ಷ ಮಂದ್ರಿರ ಮೋಹನ್ ದಾಸ್ ಮಾತನಾಡಿ, ಮಹಿಳಾ ದಿನಾಚರಣೆಯೂ ಒಂದು ದಿನಕ್ಕೆ ಸೀಮಿತವಾಗಬಾರದು, ಮಹಿಳೆಯರು ಎಲ್ಲಾ ರಂಗದಲ್ಲೂ ತೊಡಗಿಸಿಕೊಂಡು ಸಮಾಜದ ಅಭಿವೃದ್ಧಿಗೆ ಮುಂದಾಗಬೇಕು. ಮಹಿಳೆಯರು ಮಗಳಾಗಿ, ಸಹೋದರಿಯಾಗಿ, ಬಾಳಸಂಗತಿಯಾಗಿ, ತಾಯಿಯಾಗಿ, ಅತ್ತೆಯಾಗಿ ಅಜ್ಜಿಯಾಗಿ ಹಂತ ಹಂತವಾಗಿ ಈ ಎಲ್ಲಾ ಪಾತ್ರಗಳನ್ನು ಸಂತಸದಿಂದ ನಿರ್ವಹಿಸುತ್ತಾರೆ. ಇದರೊಂದಿಗೆ ತಮಗೆ ಎದುರಾಗುವ ಸವಾಲುಗಳನ್ನೂ ಎದುರಿಸಿ ಮುನ್ನುಗ್ಗಿದರೆ ಸಮೃದ್ಧಿ ಹಾಗೂ ಯಶಸ್ಸಿನ ಜೀವನ ನಡೆಸಬಹುದು, ಅಲ್ಲದೇ ಸಮಾಜಕ್ಕೆ ಉತ್ತಮ ದಾರಿದೀಪ ಆಗಬಹುದು ಎಂದು ಸಲಹೆ ನೀಡಿದರು.

ತಾಪಂ ಇಒ ಶೇಖರ್ ಮಾತನಾಡಿ, ನಮ್ಮ ದೇಶದಲ್ಲಿ ಅನಾದಿ ಕಾಲದಿಂದಲೂ ಮಹಿಳೆಯರಿಗೆ ಉನ್ನತ ಸ್ಥಾನಮಾನ ನೀಡಲಾಗಿದೆ. ಅದರಂತೆ ಎಲ್ಲಾ ನಾರಿಯರನ್ನು ಗೌರವದ, ಹಕ್ಕು, ಸ್ಥಾನಮಾನ ನೀಡಿ ತೃಪ್ತಿಪಡಿಸಿದರೆ ಈ ದೇಶ, ರಾಜ್ಯ ಸಮೃದ್ಧಿಯಾಗುತ್ತದೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷೆ ಪಿ.ಕಲಾವತಿ ಮಾತನಾಡಿ, ಮಹಿಳೆಯರು ತಮ್ಮ ಜವಾಬ್ದಾರಿಯನ್ನು ಅರಿತು ಸಮಾಜದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಮತ್ತು ಮಹಿಳೆಯರನ್ನು ಪ್ರತಿಯೊಬ್ಬರು ಗೌರವಿಸಬೇಕು ಎಂದು ಹೇಳಿದರು.

ಸಂಜೀವಿನಿ ಒಕ್ಕೂಟದ ಅಧ್ಯಕ್ಷೆ ರಾಣಿ ಮಾತನಾಡಿ, ಮಹಿಳೆಯರು ಅಬಲೆಯರಲ್ಲ ಸಬಲೆಯರು. ಪುರುಷರಂತೆ ಮಹಿಳೆಯರು ಕೂಡ ಎಲ್ಲಾ ಕ್ಷೇತ್ರದಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡಿದ್ದಾರೆ. ಮುಂದಿನ ದಿನಗಳಲ್ಲೂ ಎಲ್ಲಾ ಕ್ಷೇತ್ರದಲ್ಲಿ ತೊಡಗಿಸಿಕೊಳ್ಳುವಂತಾಗಬೇಕು ಎಂದು ತಿಳಿಸಿದರು.

ಪಂಚಾಯತ್‌ರಾಜ್ ಸಹಾಯಕ ನಿರ್ದೇಶಕಿ ಎಂ.ಜಿ.ಸುನಿತಾ, ಎಸ್.ಎಸ್. ಹೇಮಂತ್, ಸಂಜೀವಿನಿ ಒಕ್ಕೂಟದ ಪ್ರಮುಖರು ಹಾಗೂ ಸದಸ್ಯರು ಹಾಜರಿದ್ದರು. ಇದೇ ಕಾರ್ಯ ಕ್ರಮದಲ್ಲಿ ಸ್ಮಿತಾ ಅಮೃತರಾಜ್ ಅವರನ್ನು ಗೌರವಿಸಲಾಯಿತು. ಗ್ರಾಪಂ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುವ 26 ಒಕ್ಕೂಟಗಳಿಗೆ ನೆನಪಿನ ಕಾಣಿಕೆ ನೀಡಲಾಯಿತು.

ಔದ್ಯೋಗಿಕ ರಂಗದಲ್ಲಿಯೂ ಮಹಿಳೆ ಯಶಸ್ವಿ



ಗೌಡ ಮಹಿಳಾ ಒಕ್ಕೂಟದ ಮೊದಲ ವಾರ್ಷಿಕೋತ್ಸವ ಹಾಗೂ ವಿಶ್ವ ಮಹಿಳಾ ದಿನಾಚರಣೆ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು.

ನಾಪೋಕ್ಲು, ಮಾ.8(ದುಗ್ಗಳ)–ಇಂದಿನ ಕಾಲಘಟ್ಟದಲ್ಲಿ ಮಹಿಳೆ ಪಾಲಕರಾಗಿ, ರಕ್ಷಕರಾಗಿ ಹೊಣೆಗಾರಿಕೆಯನ್ನು ನಿಭಾಯಿಸುತ್ತಿದ್ದಾಳೆ. ಕೌಟುಂಬಿಕ ನಿರ್ವಹಣೆ ಸೇರಿದಂತೆ ಔದ್ಯೋಗಿಕ ರಂಗದಲ್ಲಿಯೂ ಮಹಿಳೆ ತನ್ನ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿರ್ವಹಿಸಬಲ್ಲಳು ಎಂದು ಚೆಟ್ಟಿಮಾನಿ ಗ್ರಾಮದ ನಿವೃತ್ತ ಪ್ರಾಧ್ಯಾಪಕಿ ಸುಳ್ಯಕೋಡಿ ಶಿವದೇವಿ ಅವನಿಶ್ಚಂದ್ರ ಹೇಳಿದರು.

ಚೇರಂಬಾಣೆಯ ಕಾರುಗುಂದ ಗೌಡ ಸಮಾಜದಲ್ಲಿ ಭಾನುವಾರ ನಡೆದ ಚೇರಂಬಾಣೆಯ ಗೌಡ ಮಹಿಳಾ ಒಕ್ಕೂಟದ ಮೊದಲ ವಾರ್ಷಿಕೋತ್ಸವ ಹಾಗೂ ವಿಶ್ವ ಮಹಿಳಾ ದಿನಾಚರಣೆಯನ್ನು ಉದ್ಘಾಟಿಸಿ, ಮಹಿಳೆಯರು ಇಂದು ಸಮಾಜಕ್ಕೆ ಉತ್ತಮ ಕೊಡುಗೆಯನ್ನು ಸಲ್ಲಿಸುತ್ತಿದ್ದಾರೆ. ತನಗೆ ವಹಿಸಿದ ಎಲ್ಲಾ ಜವಾಬ್ದಾರಿಯನ್ನು ಯಶಸ್ವಿಯಾಗಿ ನಿಭಾಯಿಸುತ್ತಿದ್ದಾಳೆ. ವಿವಿಧ ರಂಗಗಳಲ್ಲಿ ಸೇವೆ ಸಲ್ಲಿಸುತ್ತಿರುವ ಮಹಿಳೆಯರ ತ್ಯಾಗಮಯಿ ಜೀವನ ಸ್ಮರಣೀಯ ಎಂದರು.

ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕಿ ಮಿಲನ ಭರತ್ ಸಭಾ ಲೋಗೋ ಬಿಡುಗಡೆ ಮಾಡಿ ಭಾಷೆ ಒಂದು ಜನಾಂಗದ ಅಸ್ತಿತ್ವಕ್ಕೆ ಮೂಲವಾಗಿದ್ದು, ಇದಿಲ್ಲದಿದ್ದರೆ ಸಂಸ್ಕೃತಿ ನಾಶವಾದಂತೆ ಆಗುತ್ತದೆ. ಭಾಷೆ ಮತ್ತು ಸಂಸ್ಕೃತಿಗೆ ಅವಿನಾಭಾವ ಸಂಬಂಧವಿದ್ದು ಒಂದು ಸಮಾಜ ಅವೆರಡನ್ನು ದೂರ ಮಾಡಿದಲ್ಲಿ ನಾಗರಿಕತೆ ಅವಸಾನವಾದಂತೆ ಎಂದರು.

ಕೊಡಗು ದಕ್ಷಿಣ ಕನ್ನಡ ಒಕ್ಕಲಿಗ ಗೌಡ ಮಹಿಳಾ ಒಕ್ಕೂಟದ ಸ್ಥಾಪಕ ಅಧ್ಯಕ್ಷೆ ಪುದಿಯನೆರವನ ರೇವತಿ ರಮೇಶ್ ಬೆಂಕಿ ಇಲ್ಲದ ಅಡುಗೆ ಪದಾರ್ಥಗಳ ಪ್ರದರ್ಶನ ಉದ್ಘಾಟಿಸಿ ಮಾತನಾಡಿದರು.

ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆ ಕಡ್ಲೆರ ತುಳಸಿ ಮೋಹನ್ ಅಧ್ಯಕ್ಷತೆ ವಹಿಸಿದ್ದರು. ಕರಕುಶಲ ವಸ್ತು ಪ್ರದರ್ಶನವನ್ನು ಕುಶಲನಗರದ ಗೌಡ ಮಹಿಳಾ ಸ್ವ ಸಹಾಯ ಸಂಘದ ಅಧ್ಯಕ್ಷೆ ಕಲಾ ಆನಂದ್ ಕರಂದ್ಲಾಜೆ ಉದ್ಘಾಟಿಸಿದರು.

ಮಹಿಳೆಯರಿಂದ ಸಿದ್ಧಪಡಿಸಿದ ಕರ ಕುಶಲ ವಸ್ತುಗಳ ಮತ್ತು ಖಾದ್ಯ ಪದಾರ್ಥಗಳ ಮಾರಾಟ ಮಳಿಗೆಗಳ ಉದ್ಘಾಟನೆಯನ್ನು ಗೌಡ ಮಹಿಳಾ ಒಕ್ಕೂಟದ ಉಪಾಧ್ಯಕ್ಷೆ ಲತಾ ಮೊಣ್ಣಪ್ಪ ಮಾಡಿದರು. ಆರೋಗ್ಯ ತಪಾಸಣಾ ಶಿಬಿರ ಉದ್ಘಾಟನೆಯನ್ನು ಕಾರುಗುಂದ ಗೌಡ ಸಮಾಜದ ನಿರ್ದೇಶಕಿ ಹೇಮಲತಾ ತಾರೇಂದ್ರ ನೆರವೇರಿಸಿದರು.

ಕುಶಾಲನಗರದ ಗೋಶಾಲೆಗೆ ವಿಹೆಚ್‌ಪಿ ನಿಯೋಗ ಭೇಟಿ



ಕುಶಾಲನಗರದ ಗೋಶಾಲೆಗೆ ವಿಹೆಚ್‌ಪಿ, ಹುಲ್ಲಿನ ಮೆದೆ ಕೊಡುಗೆಯಾಗಿ ನೀಡಿತು.

ಮಡಿಕೇರಿ, ಮಾ.8–ಕುಶಾಲನಗರದ ಪುಣ್ಯಕೋಟಿ ಗೋಶಾಲೆಗೆ ವಿಶ್ವ ಹಿಂದೂ ಪರಿಷತ್‌ನ ಕೊಡಗು ಜಿಲ್ಲಾ ಘಟಕದ ನಿಯೋಗ ಭೇಟಿ ನೀಡಿತು.

ಸುಮಾರು 60 ಗೋವುಗಳಿರುವ ಗೋಶಾಲೆಯ ಮೂಲ ಸೌಲಭ್ಯಗಳ ಸ್ಥಿತಿಗತಿಯನ್ನು ಪರಿಶೀಲಿಸಿದ ಪ್ರಮುಖರು, ಗೋಪೂಜೆ ಮಾಡಿ ಗೋವುಗಳ ಕಲ್ಯಾಣಕ್ಕಾಗಿ ಪ್ರಾರ್ಥಿಸಿದರು. ನಂತರ ಒಂದು ಲಾರಿ ಒಣ ಹುಲ್ಲು, ಹಸಿ ಹುಲ್ಲು ಮತ್ತು ಏಳು ಚೀಲ ತೆಂಗಿನ ಹಿಂಡಿಯನ್ನು ಗೋವುಗಳಿಗೆ ಮೇವಾಗಿ ನೀಡಲು ಹಸ್ತಾಂತರಿಸಿದರು.

ವಿಶ್ವ ಹಿಂದೂ ಪರಿಷತ್ ನ ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಪ್ರಮುಖರಾದ ಸಂಪತ್ ಕುಮಾರ್ ಮಡಿಕೇರಿ, ಪರಮೇಶ್ ಸೋಮವಾರಪೇಟೆ, ನರಸಿಂಹ ಸುಂಟಿಕೊಪ್ಪ, ಬಜರಂಗದಳದ ಪ್ರಮುಖರಾದ ವಿನಯ್, ತನ್ಮಯ್ ಸೋಮವಾರಪೇಟೆ, ಮೂರ್ನಾಡು ಘಟಕದ ಕಾರ್ಯಕರ್ತರು, ಮಾತೆಯರು ಮತ್ತಿತರರು ಹಾಜರಿದ್ದು ಗೋಶಾಲೆಯ ಅಭಿವೃದ್ಧಿ ಹಾಗೂ ಗೋವುಗಳ ರಕ್ಷಣೆಗಾಗಿ ಅಗತ್ಯ ಸಲಹೆಗಳನ್ನು ನೀಡಿದರು.

ಶಿರಂಗಾಲ ಗ್ರಾಪಂನಲ್ಲಿ ಪೋಷಣ ಅಭಿಯಾನ

ಸುಂಟಿಕೊಪ್ಪ, ಮಾ.8–ನಾಕೂರು ಶಿರಂಗಾಲ ಗ್ರಾಮ ಪಂಚಾಯಿತಿ ಮತ್ತು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಪೋಷಣ ಅಭಿಯಾನವನ್ನು ನಡೆಸಲಾಯಿತು.

ಕಾನ್‌ಬೈಲ್ ಸರಕಾರಿ ಪ್ರಾಥಮಿಕ ಶಾಲಾ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ನಾಕೂರು ಶಿರಂಗಾಲ ಗ್ರಾಪಂ ಅಭಿವೃದ್ಧಿ ಅಧಿಕಾರಿ ವಿ.ಯು. ಆಸ್ಮಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಮೇಲ್ವಿಚಾರಕಿ ಸಾವಿತ್ರವ್ವ ಪಾಲ್ಗೊಂಡು ಸರಕಾರದ ಮಹತ್ತರ ಯೋಜನೆಯ ಬಗ್ಗೆ ಮಾಹಿತಿ ನೀಡಿದರು.

ಆರೋಗ್ಯ ಸುರಕ್ಷಾ ಅಧಿಕಾರಿ ಸಿ. ಲತಾ ಕುಮಾರಿ ರೋಶಿತ ಮಾತನಾಡಿ ಇಂದಿನ ದಿನಗಳಲ್ಲಿ ಗ್ರಾಮೀಣ ಮಹಿಳೆಯರು ಮತ್ತು ಮಕ್ಕಳಲ್ಲಿ ಅನಾರೋಗ್ಯ ಕಾಣಿಸಿಕೊಂಡಾಗ ನಿರ್ಲಕ್ಷ್ಯ ವಹಿಸುತ್ತಿರುವುದರಿಂದ ರೋಗಗಳು ಉಲ್ಬಣಗೊಳ್ಳಲು ಕಾರಣವಾಗುತ್ತಿದೆ. ಸರಕಾರ ಪೋಷಣ ಅಭಿಯಾನ ಯೋಜನೆಯನ್ನು ಜಾರಿಗೆ ತಂದಿದ್ದು ಜನತೆ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೆ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ನಾಕೂರು ಶಿರಂಗಾಲ ಗ್ರಾಪಂ ನಿಕಟಪೂರ್ವ ಅಧ್ಯಕ್ಷ ಮಂದೋಡಿ ಜಗನ್ನಾಥ್, ನಿಕಟಪೂರ್ವ ಉಪಾಧ್ಯಕ್ಷ ಬಿ.ಈ.ಸತೀಶ, ಸದಸ್ಯರಾದ ರಾಧಾಮಣಿ, ಅರುಣ್ ಕುಮಾರಿ, ಗ್ರಾ. ಪಂ. ಕಾರ್ಯದರ್ಶಿ ಚಂದ್ರ ಶೇಖರ್, ಶಿಕ್ಷಕರುಗಳಾದ ಪಾರ್ವತಿ, ಮಾಲಾದೇವಿ, ಸುಂಟಿಕೊಪ್ಪ ವಾಹನ ಚಾಲಕರ ಸಂಘದ ಅಧ್ಯಕ್ಷ ಕಿಟ್ಟಣ್ಣ ರೈ, ಫ್ರೆಂಡ್ಸ್ ಯೂತ್ ಕ್ಲಬ್‌ನ ಅಧ್ಯಕ್ಷ ಶಂಕರನಾರಾಯಣ ಇದ್ದರು.

ಅಂಗನವಾಡಿ ಕಾರ್ಯಕರ್ತೆಯರಾದ ಯೋಗಿತ, ಶುಭ, ವಿಶಾಲಕ್ಷಿ, ಧನಲಕ್ಷ್ಮಿ, ಶೋಭಾವತಿ, ಸರಳಾ, ಕಾವ್ಯ, ಕೆ.ಜೆ. ಲೀಲಾವತಿ, ಎಸ್.ಎನ್. ಸಾವಿತ್ರಿ ಮತ್ತಿತರರು ಇದ್ದರು.

ಸರಕಾರಿ ಪ್ರೌಢಶಾಲೆಯ ಮುಖ್ಯ ಶಿಕ್ಷಕ ಕೆ.ಎಸ್.ಮೂರ್ತಿನಾಕೂರು ಶಿರಂಗಾಲ ಗ್ರಾಪಂ ನಿಕಟಪೂರ್ವ ಅಧ್ಯಕ್ಷ ಮಂದೋಡಿ ಜಗನ್ನಾಥ್, ನಿಕಟಪೂರ್ವ ಉಪಾಧ್ಯಕ್ಷ ಬಿ.ಈ. ಸತೀಶ, ಸದಸ್ಯರಾದ ರಾಧಾಮಣಿ, ಅರುಣ್ ಕುಮಾರಿ, ಗ್ರಾಪಂ ಕಾರ್ಯದರ್ಶಿ ಚಂದ್ರಶೇಖರ್, ಶಿಕ್ಷಕರು ಹಾಜರಿದ್ದರು.



ಶಿರಂಗಾಲ ಗ್ರಾಪಂನಲ್ಲಿ ಪೋಷಣ ಅಭಿಯಾನವನ್ನು ಗಣ್ಯರು ಉದ್ಘಾಟಿಸಿದರು.

ಉತ್ತಮ ಎಸ್‌ಡಿಎಂಸಿ ಪ್ರಶಸ್ತಿ

ನಾಪೋಕ್ಲು: ಕುಂದಲ್ಪಾಡಿ ಪೆರಾಜೆಯ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಅತ್ಯುತ್ತಮ ಎಸ್‌ಡಿಎಂಸಿ ಪ್ರಶಸ್ತಿಗೆ ಭಾಜನವಾಗಿದೆ. ಎಸ್‌ಡಿಎಂಸಿ ಶಾಲಾ ಅಭಿವೃದ್ಧಿಗಾಗಿ ಶ್ರಮಿಸುತ್ತಾ ಬಂದಿದೆ. ಶಾಲೆಯಲ್ಲಿ ಉತ್ತಮ ಕೊಠಡಿಗಳಿದ್ದು ವಿಶಾಲ ಆಟದ ಮೈದಾನವಿದೆ. ಎಸ್‌ಡಿಎಂಸಿ ಶ್ರಮದಿಂದ ಶಾಲೆಯಲ್ಲಿ ವಿವಿಧ ರೀತಿಯ ಹಣ್ಣಿನ ಮರಗಳನ್ನು ಬೆಳೆಸಲಾಗಿದೆ.

ಮಹಿಳಾ ಸಬಲೀಕರಣವೇ ಕಾಂಗ್ರೆಸ್‌ನ ಪ್ರಮುಖ ಉದ್ದೇಶ



ಶಾಸಕ ಎ.ಎಸ್.ಪೊನ್ನಣ್ಣ ಹಿಂದುಳಿದ ವರ್ಗಗಳ 15 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಿಸಿದರು.

ವಿರಾಜಪೇಟೆ, ಮಾ.8–ಮಹಿಳೆಯರ ಸ್ವಾವಲಂಬಿ ಬದುಕಿಗೆ ರಾಜ್ಯ ಕಾಂಗ್ರೆಸ್ ಸರಕಾರ ಸತತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದ್ದು ಮಹಿಳಾ ಸಬಲೀಕರಣವೇ ಕಾಂಗ್ರೆಸ್ ಪಕ್ಷದ ಪ್ರಮುಖ ಉದ್ದೇಶಗಳಲ್ಲೊಂದಾಗಿದೆ ಎಂದು ಶಾಸಕ ಎ.ಎಸ್.ಪೊನ್ನಣ್ಣ ಹೇಳಿದರು.

ಮಹಿಳಾ ದಿನಾಚರಣೆಯ ಅಂಗವಾಗಿ ದಿವಂಗತ ದೇವರಾಜು ಅರಸು ಅವರ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕೊಡಗು ಶಾಖೆ ವತಿಯಿಂದ ಶಾಸಕರ ಗೃಹ ಕಚೇರಿಯಲ್ಲಿ ಹಿಂದುಳಿದ ವರ್ಗಗಳ 15 ಮಹಿಳೆಯರಿಗೆ ಉಚಿತ ಹೊಲಿಗೆ ಯಂತ್ರ ವಿತರಿಸಿ ಶುಭ ಕೋರಿದರು.

ಹೊಲಿಗೆಯಂತ್ರ ವಿತರಣೆ ಕಾರ್ಯಕ್ರಮದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಟ್ಟಡ ರಂಜಿ ಪೂಣಚ್ಚ, ತಾಲೂಕು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಜಾನ್ಸನ್, ಪ್ರಚಾರ ಸಮಿತಿ ಅಧ್ಯಕ್ಷ ಮತೀನ್, ಪುರಸಭೆ ಮಾಜಿ ಅಧ್ಯಕ್ಷ ದೇಚಮ್ಮ, ಮಾಜಿ ಸದಸ್ಯ ಮಹ್ಮದ್ ರಫಿ, ಪಕ್ಷದ ಪ್ರಮುಖರಾದ ಸೂರಜ್ ಹೊಸೂರು, ಎ.ಗಿರೀಸ್, ಅಪ್ಪು ರವೀಂದ್ರ, ಮೊಹ್ಮದ್ ಆಲಿ, ಉದಯ ಮಾದಪ್ಪ, ಮಂಜುನಾಥ್ ಇತರರು ಉಪಸ್ಥಿತರಿದ್ದರು.

ರೋಟರಿ ಸಮಾಜಮುಖಿ ಸೇವೆಗೆ ಡಿಡಿಪಿಐ ಮೆಚ್ಚುಗೆ

ರೋಟರಿ ಸಂಸ್ಥೆಯಿಂದ ವಿದ್ಯಾರ್ಥಿಗಳಿಗೆ ಉಪಾಹಾರ ವ್ಯವಸ್ಥೆ



ಚಾಮರಾಜನಗರ: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಯಲ್ಲಿ ಶೇ 100 ರಷ್ಟು ಫಲಿತಾಂಶ ತರುವ ನಿಟ್ಟಿನಲ್ಲಿ ನಗರದ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಸರ್ಕಾರಿ ಬಾಲಕರ ಪದವಿಪೂರ್ವ ಕಾಲೇಜುಗಳಲ್ಲಿ ವಿಶೇಷ ತರಗತಿಯ ವಿದ್ಯಾರ್ಥಿಗಳಿಗೆ ರೋಟರಿ ಸಂಸ್ಥೆಯ ವತಿಯಿಂದ ಮಾ.18 ರವರೆಗೆ ಉಪಾಹಾರ ವ್ಯವಸ್ಥೆ ಮಾಡಲಾಗಿದೆ.

ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಣ ಇಲಾಖೆ ಡಿಡಿಪಿಐ ಜವರೇಗೌಡ ಮಾತನಾಡಿ, ಸಾರ್ವಜನಿಕ ಶಿಕ್ಷಣ ಇಲಾಖೆಯೊಂದಿಗೆ ರೋಟರಿ ಸಂಸ್ಥೆಯ ಎಸ್‌ಎಸ್‌ಎಲ್‌ಸಿ ಫಲಿತಾಂಶ ತರುವ ನಿಟ್ಟಿನಲ್ಲಿ ಇಲಾಖೆಯೊಂದಿಗೆ ಕೈಜೋಡಿಸಿರುವುದು ತುಂಬಾ ಸಂತಸವಾಗಿದೆ ಎಂದು ರೋಟರಿ ಸೇವೆಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಎಸ್‌ಎಸ್‌ಎಲ್‌ಸಿ ಪ್ರಮುಖಘಟ್ಟ ವಾಗಿದ್ದು ವಿದ್ಯಾರ್ಥಿಗಳು ಸಾರ್ವಜನಿಕ ಶಿಕ್ಷಣ ಇಲಾಖೆ, ಸಂಘ, ಸಂಸ್ಥೆಗಳು ನೀಡುವ ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಚೆನ್ನಾಗಿ ಓದುವ ಮೂಲಕ ಜಿಲ್ಲೆಗೆ ಉತ್ತಮ ಫಲಿತಾಂಶ ತಂದುಕೊಡಬೇಕು ಎಂದರು.

ರೋಟರಿ ಸದಸ್ಯ ನಾರಾಯಣ ಮಾತನಾಡಿ, ರೋಟರಿ ಸಂಸ್ಥೆಯು ಶಿಕ್ಷಣ, ಆರೋಗ್ಯ, ಪರಿಸರ ಕ್ಷೇತ್ರದಲ್ಲಿ ಹೆಚ್ಚಿನ ಸೇವೆ ಮಾಡುತ್ತಿದ್ದು, ಸರ್ಕಾರಿ ಬಾಲಕ, ಬಾಲಕಿಯರ ಕಾಲೇಜಿನಲ್ಲಿ ಶೇ.100 ರಷ್ಟು ಫಲಿತಾಂಶ ತರುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ಹಮ್ಮಿಕೊಳ್ಳಲಾಗಿದ್ದು, ತರಗತಿ ವಿದ್ಯಾರ್ಥಿಗಳಿಗೆ ಸಾಯಂಕಾಲದ ಉಪಹಾರ ವ್ಯವಸ್ಥೆ ಮಾಡಲಾಗಿದೆ. ಎಲ್ಲಾ ಮಕ್ಕಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆಯಾಗಿ ರಾಜ್ಯದಲ್ಲಿ ಜಿಲ್ಲೆಯು ಉತ್ತಮ ಸ್ಥಾನ ಗಳಿಸಲಿ ಎಂದು ಶುಭ ಕೋರಿದರು.

ಈ ಸಂದರ್ಭದಲ್ಲಿ ರೋಟರಿ ಸಂಸ್ಥೆ ಕಾರ್ಯದರ್ಶಿ ಕೆಂಪನಪುರ ಸಿದ್ದರಾಜು, ಸದಸ್ಯರಾದ ಮಹಾದೇವಸ್ವಾಮಿ, ಭವಾನಿ ದೇವಿ, ಮಹದೇವಸ್ವಾಮಿ, ಸರ್ಕಾರಿ ನೌಕರರ ಸಂಘದ ಜಿಲ್ಲಾ ಖಜಾಂಚಿ ಶಿವಕುಮಾರಯ್ಯ, ಆರೋಗ್ಯ ಅಧಿಕಾರಿ ನಾರಾಯಣ, ಮುಖ್ಯ ಶಿಕ್ಷಕಿ ಜಿ.ಶೀಲಾರಾಣಿ, ಶಿಕ್ಷಕ ವೃಂದ, ಶಾಲೆಯ ಶಿಕ್ಷಕರಾದ ನಿರ್ಮಲ, ತ್ರಿವೇಣಿ, ಮಂಜುಳ, ಯತಿರಾಜ್, ಉಮಾಮಹೇಶ್ವರಿ, ಗೌರಮ್ಮ, ಬಾಲಕರ ಶಾಲೆಯ ಮುಖ್ಯಶಿಕ್ಷಕ ಮಹದೇವಸ್ವಾಮಿ, ಶಿಕ್ಷಕ ಬಸವಲಿಂಗಪ್ಪ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಬಜೆಟ್ ವಿರುದ್ಧ ಕರ್ನಾಟಕ ಸೇನಾಪಡೆ ವಿನೂತನ ಪ್ರತಿಭಟನೆ

● ರಾಷ್ಟ್ರೀಯ ಹೆದ್ದಾರಿ ತಡೆದು ಖಾಲಿಡಬ್ಬ ಪ್ರದರ್ಶಿಸಿ ಆಕ್ರೋಶ ● ರಾಜ್ಯ ಸರ್ಕಾರ ಖಾಲಿ ಡಬ್ಬ : ಶ್ರೀನಿವಾಸಗೌಡ ಆರೋಪ



ಚಾಮರಾಜನಗರ ಜಿಲ್ಲೆಯನ್ನು ಬಜೆಟ್‌ನಲ್ಲಿ ಕಡೆಗಣಿಸಲಾಗಿದೆ ಎಂದು ಆರೋಪಿಸಿ ಕರ್ನಾಟಕ ಸೇನಾಪಡೆಯ ಕಾರ್ಯಕರ್ತರು ಖಾಲಿಬಾಕ್ಸ್ ಪ್ರದರ್ಶಿಸುವ ಮೂಲಕ ವಿನೂತನ ಪ್ರತಿಭಟನೆ ನಡೆಸಿದರು.

ಚಾಮರಾಜನಗರ: ರಾಜ್ಯ ಸರ್ಕಾರ ಬಜೆಟ್‌ನಲ್ಲಿ ಚಾಮರಾಜನಗರ ತಾಲೂಕು ಮತ್ತು ಜಿಲ್ಲೆಯನ್ನು ಕಡೆಗಣಿಸಿದೆ ಎಂದು ಆರೋಪಿಸಿ ಕರ್ನಾಟಕ ಸೇನಾಪಡೆಯು ನಗರದಲ್ಲಿ ಖಾಲಿಡಬ್ಬ ಹಿಡಿದು ಪ್ರದರ್ಶಿಸುವ ಮೂಲಕ ರಾಜ್ಯ ಬಜೆಟ್ ಖಾಲಿಡಬ್ಬ ಎಂದು ವಿನೂತನ ಪ್ರತಿಭಟನೆ ನಡೆಸಿದರು.

ನಗರದ ಭುವನೇಶ್ವರಿ ವೃತ್ತದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಯಲ್ಲಿ ಜಮಾಯಿಸಿದ ಪ್ರತಿಭಟನಾಕಾರರು ರಾಜ್ಯ ಬಜೆಟ್‌ನಿಂದ ಚಾಮರಾಜನಗರಕ್ಕೆ ಶೂನ್ಯ. ಖಾಲಿ ಡಬ್ಬ ಬಜೆಟ್, ಚಾಮರಾಜನಗರ ಕಡೆಗಣಿಸಿರುವ ಬಜೆಟ್ ಗೆ ಧಿಕ್ಕಾರ ಎಂದು ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ನೇತೃತ್ವ ವಹಿಸಿದ್ದ ಕರ್ನಾಟಕ ಸೇನಾಪಡೆ ಅಧ್ಯಕ್ಷ ಚಾ.ರಂ.ಶ್ರೀನಿವಾಸಗೌಡ ಮಾತನಾಡಿ, ರಾಜ್ಯ ಸರ್ಕಾರದ ಈ ಸಾಲಿನಲ್ಲಿ ಬಜೆಟ್‌ನಲ್ಲಿ ಚಾಮರಾಜನಗರ ತಾಲೂಕು, ಜಿಲ್ಲೆಯನ್ನು ಸಂಪೂರ್ಣ ಕಡೆಗಣಿಸಿ ಜಿಲ್ಲೆಗೆ ಅನ್ಯಾಯ ಮಾಡಿದೆ ಎಂದರು ಆರೋಪಿಸಿದರು.

ರಾಜ್ಯ ಬಜೆಟ್‌ನಲ್ಲಿ ಚಾಮರಾಜನಗರ ಜಿಲ್ಲೆ ಕಡೆಗಣಿಸಿರುವುದನ್ನು ಖಂಡಿಸಿ ರಾಜ್ಯ ಸರ್ಕಾರದ ಬಜೆಟ್ ಖಾಲಿಡಬ್ಬ ಎಂದು ಆರೋಪಿಸಿ ಇಂದು ಖಾಲಿಡಬ್ಬ ಪ್ರದರ್ಶಿಸುವ ಮೂಲಕ ವಿನೂತನ ಪ್ರತಿಭಟನೆ ಮಾಡಲಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಮಾತೆತ್ತಿದರೆ' ಚಾಮರಾಜನಗರ ಎನ್ನುತ್ತಾರೆ. ಆದರೆ ಚಾಮರಾಜನಗರಕ್ಕೆ ಯಾವುದೇ ಅನುದಾನವನ್ನು ಬಜೆಟ್‌ನಲ್ಲಿ ಕೊಟ್ಟಿಲ್ಲ. ಜಿಲ್ಲೆಗೆ ಸೊನ್ನೆ ಕೊಟ್ಟಿದ್ದಾರೆ. ಎಂದು ಆರೋಪಿಸಿದರು.

ನಾಡಿನ ವಿಚಾರದಲ್ಲೂ ಅನ್ಯಾಯ ಮಾಡಿದೆ. ಮೇಕೆದಾಟು 'ಯೋಜನೆ ಮಾಡುವುದಾಗಿ ಪಾದಯಾತ್ರೆ ಮಾಡಿದ್ದೀರಿ. ಅದರ ಬಗ್ಗೆ ಬಜೆಟ್‌ನಲ್ಲಿ ಧ್ವನಿ ಎತ್ತಿಲ್ಲ. ನಿಮಗೆ ನಾಚಿಕೆ ಆಗಬೇಕು. ನೀರಿನ ಹೆಸರಿನಲ್ಲಿ ರಾಜಕೀಯ ಮಾಡಿ ಅಧಿಕಾರಕ್ಕೆ ಬಂದ ನೀವು ರಾಜ್ಯಕ್ಕೆ ದ್ರೋಹ ಮಾಡಿದ್ದೀರಿ ಎಂದು ಕಿಡಿಕಾರಿದರು.

ಪ್ರತಿಭಟನೆಯಲ್ಲಿ ಶಾ.ಮುರಳಿ, ಪಣ್ಯದ ಹುಂಡಿ ರಾಜು, ನಿಜಧ್ವನಿ ಗೋವಿಂದ, ಮುತ್ತು, ಮುತ್ತಿಗೆ ಗೋವಿಂದರಾಜ, ರಾಚಪ್ಪ, ತಾಲಕಾಡು ಮಹದೇವು, ಅಮಚವಾಡಿ ರಾಜು, ಆಟೋ ಲಿಂಗರಾಜು, ಬಸವರಾಜು, ತಾಂಡವಮೂರ್ತಿ, ಜಗದೀಶ್, ಚಂದ್ರು ಹಾಜರಿದ್ದರು.

ಅಂಗನವಾಡಿ ಕೇಂದ್ರ ನಿರ್ಮಾಣಕ್ಕೆ ಭೂಮಿಪೂಜೆ




ಚಾಮರಾಜನಗರ, ತಾಲೂಕಿನ ಕೋಡಿಮೋಳೆ, ಬಸವನಪುರ ಗ್ರಾಮದಲ್ಲಿ ನೂತನ ಅಂಗನವಾಡಿ ಕೇಂದ್ರ ನಿರ್ಮಾಣಕ್ಕೆ ಶಾಸಕ ಸಿ. ಪುಟ್ಟರಂಗಶೆಟ್ಟಿ ಭೂಮಿಪೂಜೆ ನೆರವೇರಿಸಿದರು. ನಂತರ ಮಾತನಾಡಿ, ಚಾಮರಾಜನಗರ ವಿಧಾನಸಭಾ ಕ್ಷೇತ್ರದಲ್ಲಿ ಶಿಕ್ಷಣ, ಆರೋಗ್ಯ ಕ್ಷೇತ್ರಕ್ಕೆ ಹೆಚ್ಚಿನ ಒತ್ತು ನೀಡಲಾಗಿದೆ ಎಂದು ಹೇಳಿದರು.

ಗ್ರಾಮದಲ್ಲಿ ನೂತನ ಅಂಗನವಾಡಿ ಕೇಂದ್ರ ನಿರ್ಮಾಣಕ್ಕೆ 20ಲಕ್ಷ ರೂ. ಮಂಜೂರಾಗಿದ್ದು, ಸುಸಜ್ಜಿತವಾದ ಅಂಗನವಾಡಿ ಕೇಂದ್ರ ನಿರ್ಮಾಣವಾಗಲಿದೆ. ಮುಂದಿನ ದಿನಗಳಲ್ಲಿ ಗ್ರಾಮದ ಅಭಿವೃದ್ಧಿಗೆ ಹೆಚ್ಚಿನ ಅನುದಾನ ನೀಡಲಾಗುವುದು ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಸವನಪುರ ರಾಜಶೇಖರ್, ಕೋಡಿಮೋಳೆ ಗೋವಿಂದಶೆಟ್ಟಿ, ಗ್ರಾಪಂ ಮಾಜಿ ಸದಸ್ಯರಾದ ಚಿನ್ನಸ್ವಾಮಿ, ಮಂಜು, ಪುಟ್ಟಮಾದಯ್ಯ, ಮುಖಂಡರಾದ ಲಿಂಗರಾಜು, ಜೆಇ ಕವಿತಾ, ಗುತ್ತಿಗೆದಾರ ಅಭಿಷೇಕ್, ಪಣ್ಯದಹುಂಡಿ ದೇವರಾಜು, ನಟರಾಜು, ಯಜಮಾನರಾದ ಪುಟ್ಟಮಾದಯ್ಯ, ಸಣ್ಣಯ್ಯ, ಮಹದೇವಸ್ವಾಮಿ, ರಾಜು, ದೇವರಗುಡ್ಡ ಸಿದ್ದಯ್ಯ, ಇತರರು ಹಾಜರಿದ್ದರು.

ಜಮಾಲ್ ಪಾಷಾ ನಿಧನ



ಚಾಮರಾಜನಗರ, ಮಾ.8– ನಗರದ ಜೆಡಿಎಸ್ ಮುಖಂಡ ಹಾಗೂ ಚಾಮರಾಜನಗರ ನಗರ ಸಭಾ ನಾಮನಿರ್ದೇಶನ ಮಾಜಿ ಸದಸ್ಯರಾದ ಎ ಆರ್ ಜಮಾಲ್ ಪಾಷಾ (79) ಭಾನುವಾರ ಸಂಜೆ ನಿಧನರಾಗಿದ್ದಾರೆ. ಮೃತರು ಪತ್ನಿ, ಆರು ಗಂಡು, ಓರ್ವ ಹೆಣ್ಣು ಮಕ್ಕಳನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆ ಗುಂಡ್ಲುಪೇಟೆ ರಸ್ತೆಯಲ್ಲಿರುವ ಖಬರ್ ಸ್ಥಾನದಲ್ಲಿ ಮೈದಾನದಲ್ಲಿ ನೆರವೇರಲಿದೆ. ಮೃತರ ನಿಧನಕ್ಕೆ ಜೂಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ (ಮುನ್ನಾ) ಸಂತಾಪ ಸೂಚಿಸಿದ್ದಾರೆ.

ಇಂದಿನಿಂದ ಹರದನಹಳ್ಳಿ ದಿವ್ಯ ಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ರಥೋತ್ಸವ

ಚಾಮರಾಜನಗರ, ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣದೇವರಾಯ ತನ್ನ ವಿಜಯದ ಸ್ಮರಣಾರ್ಥ ಕ್ರಿ.ಶ. 1511 ರಲ್ಲಿ ಚಾಮರಾಜನಗರ ತಾಲೂಕಿನ ಹರದನಹಳ್ಳಿ ಗ್ರಾಮದಲ್ಲಿರುವ ಶ್ರೀದಿವ್ಯ ಲಿಂಗೇಶ್ವರ ಸ್ವಾಮಿ ದೇವಾಲಯ ನಿರ್ಮಿಸಿದ್ದು, ಮಾ.9 ರಿಂದ ರಥೋತ್ಸವ ನಡೆಯಲಿದೆ.

ಈ ಬಗ್ಗೆ ದೇವಾಲಯದ ಆವರಣದಲ್ಲಿ ದೊರಕಿರುವ ಶಾಸನವೊಂದರಲ್ಲಿ ಮಾಹಿತಿ ಲಭಿಸುತ್ತದೆ. ಮುಂದಿನ ದಿನಗಳಲ್ಲಿ ಮೈಸೂರು ಒಡೆಯರು ಈ ದೇವಾಲಯವನ್ನು ಪೋಷಿಸಿಕೊಂಡು ಬಂದರು. ದೇವಾಲಯವು ಗೋಪುರ, ಗರುಡಗಂಭ ಹಾಗೂ ವಾಸ್ತುಶಿಲ್ಪವು ವಿಜಯನಗರ ಸಾಮ್ರಾಜ್ಯ ಕಾಲಘಟ್ಟದಲ್ಲಿ ನಿರ್ಮಾಣವಾಗಿರುವ ದೇವಾಲಯಗಳ ಮಾದರಿಯನ್ನು ಒಳಗೊಂಡಿದ್ದು, ಇದೊಂದು ಐತಿಹಾಸಿಕ ಹಾಗೂ ಧಾರ್ಮಿಕ ಕೇಂದ್ರವಾಗಿದೆ.

ಶರಣ ಕೇಂದ್ರವಾಗಿದ್ದ ಹರದನಹಳ್ಳಿ: ಹರದನಹಳ್ಳಿ ಗ್ರಾಮವು ಶರಣ ಧರ್ಮ ಕೇಂದ್ರವಾಗಿತ್ತು ಎಂದು ಇತಿಹಾಸದಲ್ಲಿ ದಾಖಲಾಗಿದೆ. ಈ ಕಾರಣಕ್ಕೆ ಈ ಕೇಂದ್ರವನ್ನು ಶ್ರೀಯಡಿಯೂರು ಸಿದ್ದಲಿಂಗೇಶ್ವರರ ಜನ್ಮಸ್ಥಳ ಎಂದು ಕರೆಯಲಾಗುತ್ತಿದೆ.

ದೇವಾಲಯದ ಆವರಣದಲ್ಲಿ ಸುಮಾರು 15ಕ್ಕೂ ಹೆಚ್ಚು ಕನ್ನಡ ಶಾಸನಗಳು ಇರುವುದು ಮತ್ತೊಂದು ವಿಶೇಷವಾಗಿದೆ.

ಹಲವು ವರ್ಷಗಳಿಂದಲೂ ರಥೋತ್ಸವ:



ಕ್ರಿಶ. 1316ರಲ್ಲಿ ಹೊಯ್ಸಳ ಚಕ್ರವರ್ತಿ ಮೂರನೇ ಬಲ್ಲಾಳ ಈ ದೇವಸ್ಥಾನ ನಿರ್ಮಿಸಿದ್ದು ಎಂದು ಸಹ ಹೇಳಲಾಗುತ್ತಿದೆ. ಅಂದಿನಿಂದಲೂ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಪ್ರತಿ ವರ್ಷ ರಥೋತ್ಸವ ನಡೆಸಲಾಗುತ್ತಿದೆ.

ಮಾ. 9ರಿಂದ ರಥೋತ್ಸವ: ಮಾ. 9ರಿಂದ ಗ್ರಾಮದಲ್ಲಿ ದಿವ್ಯಲಿಂಗೇಶ್ವರಸ್ವಾಮಿ ರಥೋತ್ಸವ ಆರಂಭವಾಗಲಿದ್ದು, ಮಾ. 10 ಗಜವಾಹನೋತ್ಸವ, ಮಾ. 11ರಂದು ಬೆಳಗ್ಗೆ 10.02ರಿಂದ 10.17ರೊಳಗೆ ಸಲ್ಲುವ ಶುಭಲಗ್ನದಲ್ಲಿ ರಥೋತ್ಸವಕ್ಕೆ ಚಾಲನೆ ನೀಡಲಾಗುವುದು. ಮಾ. 12ರಂದು ಸ್ವಾಮಿಗೆ ಶಯನೋತ್ಸವ, ಮಾ. 13ರಂದು ರಾತ್ರಿ ಪಲ್ಲಕ್ಕಿ ಉತ್ಸವ ಮೆರವಣಿಗೆ ಹಾಗೂ ಮಾ. 14ರಂದು ಮಂಟಪೋತ್ಸವದ ಮೂಲಕ ರಥೋತ್ಸವಕ್ಕೆ ತೆರೆಬೀಳಲಿದೆ.

ಗ್ರಾಮದಲ್ಲಿ ವಿದ್ಯುತ್ ದೀಪಾಲಂಕಾರ: ದಿವ್ಯಲಿಂಗೇಶ್ವರಸ್ವಾಮಿ ರಥೋತ್ಸವ ಅಂಗವಾಗಿ ತಾಲೂಕಿನ ಬಂಡಿಗೆರೆ–ಹರದನಹಳ್ಳಿ ಗ್ರಾಮದ ಪ್ರಮುಖ ಬೀದಿಗಳಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿದೆ. ಗ್ರಾಮದ ಪ್ರತಿ ಮನೆಗಳಲ್ಲೂ ಹಬ್ಬದ ವಾತಾವರಣ ನಿರ್ಮಾಣವಾಗಿದೆ.

ತಮಿಳುನಾಡಿನ ಭಕ್ತರು ಭಾಗಿ: ದೇವಾಲಯವು ತಮಿಳುನಾಡಿಗೆ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿ ಸಮೀಪದಲ್ಲೇ ಇರುವುದರಿಂದ ಪ್ರತಿ ವರ್ಷವೂ ತಮಿಳುನಾಡಿನಿಂದ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಲಿದ್ದಾರೆ. ಈ ಹಿನ್ನೆಲೆಯಲ್ಲಿ ಗ್ರಾಮದಲ್ಲಿ ಸೂಕ್ತ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.

ದೇವಸ್ಥಾನದ ಜೀರ್ಣೋದ್ಧಾರಕ್ಕೆ ಒತ್ತಾಯ: ದೇವಾಲಯದಲ್ಲಿ ಮುಖ ಮಂಟಪ, ನಂದಿ ಮಂಟಪ, ಕಲ್ಯಾಣ ಮಂಟಪ ಹಾಗೂ ದೇವ– ದೇವತೆಗಳ ಶಿಲ್ಪಗಳಿವೆ. ದೇವಸ್ಥಾನದ ಮುಖ್ಯದ್ವಾರದ ಮೇಲ್ಭಾಗದಲ್ಲಿ 5 ಅಂತಸ್ತಿನ ರಾಜ ಗೋಪುರವಿತ್ತು. 2005ರಲ್ಲಿ ಸಿಡಿಲಿಗೆ ಗೋಪುರ ಕುಸಿದು ನಾಶವಾಯಿತು. ಅಂದಿನಿಂದಲೂ ಜೀರ್ಣೋದ್ಧಾರವಾಗಿಲ್ಲ. ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ಇತ್ತ ಗಮನಹರಿಸಿ ದೇವಸ್ಥಾನದ ಜೀರ್ಣೋದ್ಧಾರಕ್ಕೆ ಮುಂದಾಗಬೇಕು ಎಂದು ಗ್ರಾಮಸ್ಥರು ಹಾಗೂ ಭಕ್ತರು ಒತ್ತಾಯಿಸಿದ್ದಾರೆ.

ಮುಸ್ಲಿಂ ಸಮಾಜ ಉನ್ನತ ಹುದ್ದೆಗಳನ್ನು ಅಲಂಕರಿಸುವಂತಾಗಬೇಕು: ಮಹದೇವಕುಮಾರ್



ಫಾತಿಮಾ ಶೇಖ್ ರವರ ಜನ್ಮದಿನದ ಅಂಗವಾಗಿ ಶೈಕ್ಷಣಿಕ ಕ್ಷೇತ್ರದಲ್ಲಿ ಸಾಧನೆಗೈದ ಶಿಕ್ಷಕರಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು.

ಕೊಳ್ಳೇಗಾಲ. ಮಾ.8– ಮುಸ್ಲಿಂ ಸಮಾಜ ಆರ್ಥಿಕವಾಗಿ, ಶೈಕ್ಷಣಿಕವಾಗಿ ಪ್ರಭಲವಾಗುವ ಮೂಲಕ ಉನ್ನತ ಸರ್ಕಾರಿ ಹುದ್ದೆಗಳನ್ನು ಅಲಂಕರಿಸುವಂತಾಗಬೇಕು, ಕರ್ನಾಟಕ ರಾಜ್ಯ ಸರ್ಕಾರ ಮುಸ್ಲಿಂ ನೌಕರರ ಕಲ್ಯಾಣ ಸಂಘವು ತನ್ನ ಸಮಾಜ ಮುಖಿ ಸೇವಾ ಕಾರ್ಯಗಳನ್ನು ನಿರಂತರವಾಗಿ ನೆಡಸುವ ಜೊತೆ ಜೊತೆಗೆ ಸಾಧಕರನ್ನು ಪುರಸ್ಕರಿಸಿ ಅಭಿನಂದಿಸುವ ಇಂತಹ ಕಾರ್ಯಕ್ರಮಗಳು ನಿರಂತರವಾಗಿ ಸಾಗಬೇಕು ಎಂದು ಶಿಕ್ಷಣ ಇಲಾಖೆಯ ಬಿಆರ್‌ಸಿ ಮಹದೇವಕುಮಾರ್ ಹೇಳಿದರು.

ಅವರು ಸರ್ಕಾರಿ ನೌಕರರ ಸಂಘದಲ್ಲಿ ಶಿಕ್ಷಕಿ ಶ್ರೀಮತಿ ಫಾತಿಮಾ ಶೇಖ್ ಅವರ ಜನ್ಮದಿನದ ಅಂಗವಾಗಿ ವಿಶೇಷ ಅಗತ್ಯವುಳ್ಳ ಮಕ್ಕಳಿಗೆ ಸನ್ಮಾನ ಹಾಗೂ ಸರ್ಕಾರಿ ನೌಕರಿಗೆ ಪ್ರಶಸ್ತಿ, ಗೌರವ ಸಮರ್ಪಣಾ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ, ಮುಸ್ಲಿಂ ಜನಾಂಗದ ಪ್ರಥಮ ಶಿಕ್ಷಕಿ ಫಾತಿಮಾ ಶೇಖ್ ಅವರ ಜನ್ಮದಿನದ ಮೂಲಕ ಸಂಘಟನೆಯ ಮುಖ್ಯಸ್ಥರಾದ ಕಲಿಂ ಜನರಲ್ಲಿ ಅರಿವು ಮೂಡಿಸುತ್ತಿರುವುದು ಸಂತಸದ ವಿಷಯ ಎಂದರು.

ಈ ವೇಳೆ ರಾಜ್ಯ ಸರ್ಕಾರ ಮುಸ್ಲಿಂ ನೌಕರರ ಕಲ್ಯಾಣ ಸಂಘದ ಅಧ್ಯಕ್ಷ ಕಲೀಮ್ ಷರೀಫ್ ಅವರು 15ಮಂದಿ ವಿಶೇಷ ಚೇತನ ಮಕ್ಕಳು ಹಾಗೂ 25ಮಂದಿ ಸಾಧಕ ಶಿಕ್ಷಕರಿಗೆ ಪ್ರಶಸ್ತಿ ನೀಡಿ ಅಭಿನಂದಿಸಿದರು

ಈಸಂದರ್ಭದಲ್ಲಿ ರಾಜ್ಯ ಉಪಾಧ್ಯಕ್ಷೆ ಹೀನಾ ಕೌಶರ್, ಕಾರ್ಯದರ್ಶಿ ಶಬಾನ ಬಾನು, ಸಮೀಉಲ್ಲಾ, ರಿಜ್ವಾನ್, ಎಸ್ಸಿ ಎಸ್ಟಿ ಶಿಕ್ಷಕರ ಸಂಘದ ಅಧ್ಯಕ್ಷ ಸಿದ್ದರಾಜು, ಪ್ರೌಢಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಅಕ್ಬರ್, ಅಲ್ಪಸಂಖ್ಯಾತರ ಘಟಕ ಟೌನ್ ಅಧ್ಯಕ್ಷರು ಮನ್ಸೂರ್ ಪಾಷ, ಜಿಲ್ಲಾ ಉಪಾಧ್ಯಕ್ಷ ಇನಾಯತ್ ಪಾಷ, ದೊರೆಸ್ವಾಮಿ, ಆನಂದರಾಜು, ಶಾಂತರಾಜು ಇನ್ನಿತರಿದ್ದರು

ಮೈಸೂರು ಮಿತ್ರ

ಬಂಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ

ಗ್ರಾಮೀಣ ಭಾಗದ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ: ಸಂಸದ ಸುನೀಲ್ ಬೋಸ್



ಬಂಡಿ ರಸ್ತೆ ಕಾಮಗಾರಿಗೆ ಸಂಸದ ಸುನೀಲ್ ಬೋಸ್ ಭೂಮಿ ಪೂಜೆ ನೆರವೇರಿಸಿದರು.

ತಿ.ನರಸೀಪುರ, ಮಾ.8– ಗ್ರಾಮೀಣ ಪ್ರದೇಶಗಳ ಮೂಲ ಸೌಕರ್ಯಕ್ಕೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಕ್ಷೇತ್ರ ವ್ಯಾಪಿ ಅಭಿವೃದ್ಧಿ ಕಾಮಗಾರಿ ಹಮ್ಮಿಕೊಳ್ಳಲಾಗಿದೆ ಎಂದು ಸಂಸದ ಸುನೀಲ್ ಬೋಸ್ ತಿಳಿಸಿದರು.

ತಾಲೂಕಿನ ಮೂಗೂರಲ್ಲಿ 1.40 ಕೋಟಿ ರೂ. ವೆಚ್ಚದ ಬಂಡಿ ರಸ್ತೆ ಅಭಿವೃದ್ಧಿ ಕಾಮಗಾರಿಗೆ ಭೂಮಿ ಪೂಜೆ ನೆರವೇರಿಸಿ ಅವರು ಮಾತನಾಡಿದರು.

ಕ್ಷೇತ್ರದಾದ್ಯಂತ ಅಭಿವೃದ್ಧಿ ಕಾಮಗಾರಿಗಳು ಬಿರುಸು ಪಡೆದುಕೊಂಡಿವೆ. ಗ್ರಾಮಗಳ ಅಭಿವೃದ್ಧಿಯನ್ನು ಗುರಿಯನ್ನಾಗಿಸಿಕೊಂಡು ವಿಶೇಷ ಅನುದಾನದಡಿ ರಸ್ತೆ, ಚರಂಡಿ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲಾಗುತ್ತಿದೆ. ಸೋಸಲೆ, ತಲಕಾಡು, ಬನ್ನೂರು ಸೇರಿದಂತೆ ಮೂಗೂರು ಹೋಬಳಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾಮಗಾರಿಗಳು ಆಗಿವೆ. ಇನ್ನೂ ಹೆಚ್ಚಿನ ಬೇಡಿಕೆಗಳಿದ್ದಲ್ಲಿ ಮುಂದಿನ ದಿನಗಳಲ್ಲಿ ಮತ್ತಷ್ಟು ಅನುದಾನ ತಂದು ಕ್ಷೇತ್ರವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲು ನಮ್ಮ ತಂದೆ ಸಚಿವ ಮಹದೇವಪ್ಪರೊಡಗೂಡಿ ಪ್ರಾಮಾಣಿಕ ಪ್ರಯತ್ನ ಮಾಡುವುದಾಗಿ ಭರವಸೆ ನೀಡಿದರು.

ಮುಖ್ಯಮಂತ್ರಿಗಳ ವಿಶೇಷ ಅನುದಾನದಡಿ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಗ್ರಾಮಗಳಲ್ಲಿ 11.60 ಕೋಟಿ ಅಭಿವೃದ್ಧಿ ಕಾಮಗಾರಿಗೆ ಇಂದು ಭೂಮಿ ಪೂಜೆ ನೆರವೇರಿಸಲಾಗುತ್ತಿದೆ. ಬಹುದಿನಗಳ ಗ್ರಾಮಸ್ಥರ ಬೇಡಿಕೆಯಂತೆ ಕರೋಹಟ್ಟಿ ಪವಾಡ ಬಸವೇಶ್ವರ ದೇವಸ್ಥಾನವನ್ನು 3 ಕೋಟಿ ರೂ. ವೆಚ್ಚದಲ್ಲಿ, 2 ಕೋಟಿ ರೂ. ವೆಚ್ಚದಲ್ಲಿ ಕುರುಬೂರು–ವಾಟಾಳು ರಸ್ತೆ ಅಭಿವೃದ್ಧಿ, ಹ್ಯಾಕನೂರು ಬಂಡಿ ರಸ್ತೆಯನ್ನು 1.20 ಕೋಟಿ ಅನುದಾನದಲ್ಲಿ, ಮೂಗೂರು–ಹೊಸಹಳ್ಳಿ ರಸ್ತೆ ಅಭಿವೃದ್ಧಿ ಕಾಮಗಾರಿಯನ್ನು 4 ಕೋಟಿ ರೂ.ಗಳ ವೆಚ್ಚದಲ್ಲಿ ಹಾಗೂ ಮೂಗೂರು ಬಂಡಿ ರಸ್ತೆಯನ್ನು 1.40 ಕೋಟಿ ರೂ. ವೆಚ್ಚದಲ್ಲಿ ಅಭಿವೃದ್ಧಿ ಪಡಿಸಲಾಗುತ್ತಿದೆ ಎಂದರು.

ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಎಂ.ಡಿ.ಬಸವರಾಜು, ಸುಂದರಪ್ಪ, ಹ್ಯಾಕನೂರು ನಾಗರಾಜ್, ಶ್ರೀಕಂಠಸ್ವಾಮಿ, ಕಂಬೇಗೌಡ, ಪಟೇಲ್‌ಗೌಡ, ಮಹದೇವನಾಯಕ, ಪಿಎಸಿಎಸ್ ಮಾಜಿ ಅಧ್ಯಕ್ಷ ಶಿವಮೂರ್ತಿ, ಗ್ರಾಮ ಉಪಾಧ್ಯಕ್ಷ ಎಂ.ಎಸ್.ಕಿರಣ್, ಪಾರುಪತ್ತೇದಾರ್ ಎಂ.ಜಿ.ಸಾಗರ್, ಡೈರಿ ನಾಗೇಂದ್ರ, ಎಂ.ಎಂ.ಬಸವಣ್ಣ ಶಂಕರ್, ಉಪನ್ಯಾಸಕ ಕುಮಾರಸ್ವಾಮಿ, ಕನ್ನಹಳ್ಳಿ ಶಿವಕುಮಾರ್, ಲಕ್ಷ್ಮಣ್, ತಹಸೀಲ್ದಾರ್ ಸುರೇಶಾಚಾರ್, ಜಿಪಂ ಎಇಇ ಚರಿತ, ಲೋಕೋಪಯೋಗಿ ಎಇಇ ಸತೀಶ್ ಚಂದ್ರ ಸೇರಿದಂತೆ ಗ್ರಾಮಸ್ಥರು, ಮುಖಂಡರು ಹಾಜರಿದ್ದರು.

ಕವಿ ಸರ್ವಜ್ಞರ ಸಂದೇಶ ಇಂದಿಗೂ ಜೀವಂತ

ಶಾಸಕ ದರ್ಶನ್ ಧ್ರುವನಾರಾಯಣ್



ಕಾರ್ಯಕ್ರಮದಲ್ಲಿ ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿದರು.

ನಂಜನಗೂಡು, ಮಾ.8– ಕವಿ ಸರ್ವಜ್ಞರು ತಮ್ಮ ತ್ರಿಪದಿಗಳ ಮೂಲಕ ನೀಡಿರುವ ಸಾಮಾಜಿಕ ಸಂದೇಶಗಳು ಇಂದಿಗೂ ಜೀವಂತವಾಗಿವೆ. ಸರ್ವಜ್ಞರ ಸಾಮಾಜಿಕ ಸಂದೇಶಗಳು ಮತ್ತು ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಆದರ್ಶ ಸಮಾಜ ನಿರ್ಮಿಸಲು ಸಹಕಾರಿ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಎಂದರು.

ನಗರದ ಕುಂಬಾರ ಸಮುದಾಯ ಭವನದಲ್ಲಿ ತಾಲೂಕು ಕುಲಾಲ ಬ್ರಾಹ್ಮಣ ಕುಂಬಾರ ಸಂಘದಿಂದ ಆಯೋಜಿಸಿದ್ದ ಸಂತ ಕವಿ ಸರ್ವಜ್ಞರ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕವಿ ಸರ್ವಜ್ಞರು ವಿಶ್ವ ಕಂಡ ಮಹಾಕವಿ. ಅವರು ತಮ್ಮ ತ್ರಿಪದಿ ಮಾಲಿಕೆ ಸಾಹಿತ್ಯದ ಮೂಲಕ ಸಮಾಜದ ಅಂಕುಡೊಂಕುಗಳನ್ನು ತಿದ್ದಿ ಎಲ್ಲರೂ ಒಂದೇ ಎಂಬ ಸಾಮಾಜಿಕ ಸಂದೇಶವನ್ನು ಸಾರಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ್ದಾರೆ. ಅಲ್ಲದೇ ಜೀವನದ ಸಾರವನ್ನು ಸರಳವಾಗಿ ಜನರಿಗೆ ತಿಳಿಸಿದ ಪರಿಣಾಮ ಅವರ ತ್ರಿಪದಿಗಳು ಇಂದಿಗೂ ಜೀವಂತವಾಗಿವೆ. ಅವರು ಸಾರಿರುವ ತತ್ವ ಸಿದ್ಧಾಂತಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಸಮ ಸಮಾಜದ ನಿರ್ಮಾಣ ಸಾಧ್ಯ ಎಂದರು.


ಮುಖ್ಯ ಭಾಷಣಕಾರ, ಸರ್ಕಾರಿ ಅಭಿಯೋಜಕ ವಕೀಲ ರಾಜಣ್ಣ ಮಾತನಾಡಿ, ಕವಿ ಸರ್ವಜ್ಞರು 7020 ವಚನಗಳನ್ನು ರಚಿಸಿದ್ದು, ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮದೇ ಆದ ಕೊಡುಗೆ ನೀಡಿದ್ದಾರೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಮಾತನಾಡಿ, ಕುಂಬಾರ ಸಮುದಾಯ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಬಹಳ ಹಿಂದುಳಿದ ಸಮಾಜವಾಗಿದ್ದು, ಶಾಸಕರು ಸಮುದಾಯಕ್ಕೆ ಹೆಚ್ಚಿನ ಸವಲತ್ತುಗಳನ್ನು ನೀಡಿ ರಾಜಕೀಯ ಪ್ರಾತಿನಿಧ್ಯವನ್ನು ದೊರಕಿಸಿ ಕೊಟ್ಟು ಸಮುದಾಯವನ್ನು ಮುನ್ನೆಲೆಗೆ ತರಲು ಮುಂದಾಗಬೇಕು ಎಂದರು.

ಕಾರ್ಯಕ್ರಮದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಇದಕ್ಕೂ ಮುನ್ನಾ ಕವಿ ಸರ್ವಜ್ಞರ ಭಾವಚಿತ್ರವನ್ನು ನಗರದ ಶ್ರೀಕಂಠೇಶ್ವರ ದೇವಾಲಯದಿಂದ ಕುಂಬಾರ ಸಮುದಾಯ ಭವನದವರೆಗೆ ವಿವಿಧ ಜಾನಪದ ಕಲಾತಂಡಗಳೊಂದಿಗೆ ಅದ್ದೂರಿಯಾಗಿ ಮೆರವಣಿಗೆ ಮಾಡಲಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕೇಶವಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ.ಶಂಕರ್, ಮುಖಂಡರಾದ ಗೋವಿಂದರಾಜು, ಕುಂಬಾರ ಸಮಾಜದ ಶಿವಣ್ಣ ಕಾರ್ಯದರ್ಶಿ ಪ್ರಕಾಶ್ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ನಾಳೆಯಿಂದ ಶ್ರೀ ದುರ್ಗಮ್ಮ–ಮರ್ಗಮ್ಮ ದೇವಿಯ ಅಡ್ಡಪಲ್ಲಕ್ಕಿ ಉತ್ಸವ



ಶ್ರೀ ದುರ್ಗಮ್ಮ–ಮರ್ಗಮ್ಮ ದೇವಿ

ಹುಣಸೂರು: ನಗರದ ಸರಸ್ವತಿಪುರಂನಲ್ಲಿರುವ ಶ್ರೀದುರ್ಗಮ್ಮ–ಮರ್ಗಮ್ಮ ದೇವಿ 119ನೇ ವಾರ್ಷಿಕೋತ್ಸವ ಮತ್ತು ಅಡ್ಡಪಲ್ಲಕ್ಕಿ ಉತ್ಸವ ಮಾ.10ರಿಂದ 12ರವರೆಗೆ ನಡೆಯಲಿದೆ ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮಾ.10ರಂದು ಬೆಳಗ್ಗೆ 6 ಗಂಟೆಗೆ ದೇವಾಲಯದಲ್ಲಿ ದೇವರಿಗೆ ಅಭಿಷೇಕ, ಹೂವಿನ ಅಲಂಕಾರ, ಕುಂಕುಮಾರ್ಚನೆ ನಡೆಯಲಿದೆ. ಬೆಳಗ್ಗೆ 11 ಗಂಟೆಗೆ ಮಹಾ ಮಂಗಳಾರತಿ, ಸಂಜೆ 4 ಗಂಟೆಗೆ ಲಕ್ಷ್ಮಣ ತೀರ್ಥ ನದಿಯಿಂದ ಅಡ್ಡಪಲ್ಲಕ್ಕಿಯಲ್ಲಿ ಶುದ್ಧ ಗಂಗಾ ಜಲದೊಂದಿಗೆ ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ಹೋಮ ಹವನ ಹಾಗೂ ದೇವರ ಪೂಜಾ ಅಲಂಕಾರದೊಂದಿಗೆ ನಗರದ ಪ್ರಮುಖ ಬೀದಿಗಳಲ್ಲಿ ಡೊಳ್ಳು ಕುಣಿತ, ನಗಾರಿ, ವಾದ್ಯಮೇಳ, ತಮಟೆ ಮತ್ತಿತರೆ ಜಾನಪದ ಕಲಾ ತಂಡಗಳೊಂದಿಗೆ ಪಟಾಕಿ ಸಿಡಿಸುವ ಮೂಲಕ ಮೆರವಣಿಗೆಯಲ್ಲಿ ದೇವಸ್ಥಾನಕ್ಕೆ ಶ್ರೀದೇವಿಯರನ್ನು ಕರೆ ತರಲಾಗುವುದು.

ಮಾ.11 ಬುಧವಾರ ಬೆಳಗ್ಗೆ 5.30ಕ್ಕೆ ಸರಸ್ವತಿಪುರಂನಿಂದ ನಗರದ ಪ್ರಮುಖ ಬೀದಿಗಳಲ್ಲಿ ತಂಬಿಟ್ಟು ಆರತಿ ಮೆರವಣಿಗೆಯಲ್ಲಿ ಬಂದು ಶ್ರೀದುರ್ಗಮ್ಮ–ಮರ್ಗಮ್ಮ ದೇವಿಯರಿಗೆ ತಂಬಿಟ್ಟು ಆರತಿ, ತಂಪು ತಲುಪಿದ ನಂತರ ಮಹಾ ಮಂಗಳಾರತಿ ನೆರವೇರಿಸಲಾಗುವುದು. ಮಾ.12ರಂದು ಬೆಳಗ್ಗೆ 8ರಿಂದ ಹೋಳಿ ಹಬ್ಬ ಆಚರಿಸಲಾಗುವುದು. ಹೀಗಾಗಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೇವಿ ಕೃಪೆಗೆ ಪಾತ್ರರಾಗಬೇಕು ಎಂದು ಪ್ರಕಟಣೆ ತಿಳಿಸಿದೆ.

ಕಪಿಲಾ ನದಿ ತೀರದಲ್ಲಿ 46ಕ್ಕೂ ಅಧಿಕ ಮರಗಳ ಹನನ

ನಂಜನಗೂಡು: ತಾಲೂಕಿನ ಹೆಜ್ಜಿಗೆ ಗ್ರಾಮದ ಕಪಿಲಾ ನದಿ ತೀರದಲ್ಲಿ 46ಕ್ಕೂ ಹೆಚ್ಚು ಮರಗಳನ್ನು ದುಷ್ಕರ್ಮಿಗಳು ಕಡಿದಿದ್ದು, ಮಾಹಿತಿ ಪಡೆದು ಅರಣ್ಯ ಇಲಾಖೆ ಅಧಿಕಾರಿಗಳು ಸ್ಥಳಕ್ಕಾಗಮಿಸಿದ್ದರಿಂದ ಮರಗಳನ್ನು ಅಲ್ಲೇ ಬಿಟ್ಟು ಪರಾರಿಯಾಗಿದ್ದಾರೆ.

ಹೆಜ್ಜಿಗೆ ಗ್ರಾಮದ ಸರ್ವೆ ನಂ.263/1ಕ್ಕೆ ಸೇರಿದಂತಿರುವ ಖರಾಬು ಭೂಮಿಗೆ ಹೊಂದಿಕೊಂಡಂತೆ ತೊರೆಮಾವಿನವರೆಗೆ ಹೊಳೆಯಂಚಿನ ಖರಾಬು ಭೂಮಿಯಲ್ಲಿ ಬೆಳೆದಿದ್ದ ಭಾರೀ ಗಾತ್ರದ ಮರಗಳನ್ನು ಕೆಲವರು ಕಡಿದು ಹೊತ್ತೊಯ್ದಿದ್ದಾರೆ. ಇನ್ನು ಕೆಲ ಮರಗಳು ಸ್ಥಳದಲ್ಲೇ ಬಿದ್ದಿವೆ. ಮಾಹಿತಿ ಪಡೆದು ಭಾನುವಾರ ಸ್ಥಳಕ್ಕಾಗಮಿಸಿದ ಸಾಮಾಜಿಕ ವಲಯ ಅರಣ್ಯಾಧಿಕಾರಿ ನಿತಿನ್ ಕುಮಾರ್ ಪರಿಶೀಲಿಸಿ ಈ ಸಂಬಂಧ ಆಯಾಜ್ ಅಹಮದ್ ಹಾಗೂ ಇತರರ ವಿರುದ್ಧ ದೂರು ದಾಖಲಿಸಿಕೊಂಡಿದ್ದು, ಮರಗಳನ್ನು ವಶಕ್ಕೆ ಪಡೆದಿರುವುದಾಗಿ ತಿಳಿಸಿದ್ದಾರೆ.

ನಾಲೆಯಲ್ಲಿ ಈಜಲು ಹೋದ ವಿದ್ಯಾರ್ಥಿ ಸಾವು



ನಂಜನಗೂಡು, ಮಾ.8– ನಾಲೆಯಲ್ಲಿ ಈಜಲು ಹೋದ ವಿದ್ಯಾರ್ಥಿ ನೀರು ಪಾಲಾಗಿರುವ ಘಟನೆ ತಾಲೂಕಿನಲ್ಲಿ ಭಾನುವಾರ ನಡೆದಿದೆ.

ನಂಜನಗೂಡು ನಗರದ ಚಾಮಲಾಪುರ ಹುಂಡಿ ಬಳಿಯ ಎನ್‌ಜಿಓ ಕಾಲೋನಿ ನಿವಾಸಿ, ನೆಸ್ಲೆ ಕಂಪನಿ ನೌಕರ ಯೋಗೀಶ್ ಮತ್ತು ಪ್ರೇಮ ದಂಪತಿ ಪುತ್ರ ದರ್ಶನ್(21) ಸಾವನ್ನಪ್ಪಿದವರು. ಈತ ಮೈಸೂರಿನ ಕಾವೇರಿ ಕಾಲೇಜಿನಲ್ಲಿ ಡಿ.ಫಾರ್ಮ ವಿದ್ಯಾಭ್ಯಾಸ ಮಾಡುತ್ತಿದ್ದ ಎನ್ನಲಾಗಿದೆ. ಭಾನುವಾರ ರಜಾ ಇದ್ದ ಕಾರಣ ನಾಲ್ವರು ಸ್ನೇಹಿತರೊಂದಿಗೆ ನಂಜನಗೂಡು ಸಮೀಪದ ದೇಬೂರು ಗ್ರಾಮದ ಬಳಿ ಹುಲ್ಲಹಳ್ಳಿ ನಾಲೆಯಲ್ಲಿ ಭಾನುವಾರ ಮಧ್ಯಾಹ್ನ ಈಜಲು ಹೋಗಿದ್ದ ವೇಳೆ ದರ್ಶನ್ ನೀರಿನಲ್ಲಿ ಮುಳುಗಿದವನು ಮತ್ತೆ ಮೇಲೆ ಬರಲಿಲ್ಲ ಎನ್ನಲಾಗಿದೆ. ಜೊತೆಯಲ್ಲಿದ್ದ ಸ್ನೇಹಿತರು ಗಾಬರಿಗೊಂಡು ಅಕ್ಕಪಕ್ಕದ ಗದ್ದೆಯಲ್ಲಿ ಕೆಲಸ ಮಾಡುತ್ತಿದ್ದವರಿಗೆ ವಿಷಯ ಮುಟ್ಟಿಸಿದ್ದಾರೆ. ಅಷ್ಟರಲ್ಲಾಗಲೇ ಆತ ಸಾವನ್ನಪ್ಪಿರುವುದು ತಿಳಿದು ಬಂದಿದೆ.

ಬಳಿಕ ಕುಟುಂಬದವರು ಆಗಮಿಸಿ ಅಗ್ನಿಶಾಮಕ ಸಿಬ್ಬಂದಿ ಮತ್ತು ನುರಿತ ಈಜುಗಾರರು ಸಹಾಯದಿಂದ ಶವವನ್ನು ಮೇಲೆತ್ತಲಾಯಿತು. ಈ ಸಂಬಂಧ ನಂಜನಗೂಡು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಕ್ಕುಪತ್ರ ನೀಡಿ 22 ವರ್ಷವಾದರೂ ನಿವೇಶನ ನೀಡದ ಅಧಿಕಾರಿಗಳು

ರೊಚ್ಚಿಗೆದ್ದ ಫಲಾನುಭವಿಗಳು ತಾವೇ ನಿವೇಶನದಲ್ಲಿ ಕೂರಲು ನಿರ್ಧಾರ



ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸ್ವಾಮಿಗೌಡ ಮಾತನಾಡಿದರು.

ಹುಣಸೂರು, ಮಾ.8– ಮಾಜಿ ಶಾಸಕ ವಿ.ಪಾಪಣ್ಣ ಅವರು ಪಟ್ಟಣದಲ್ಲಿ ನಿವೇಶನ ರಹಿತ ಹಿಂದುಳಿದ ಮತ್ತು ದುರ್ಬಲ ವರ್ಗದವರಿಗೆ ಆಶ್ರಯ ಯೋಜನೆಯಡಿ 870 ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಿಸಿ 22 ವರ್ಷಗಳಾದರೂ ನಿವೇಶನ ನೀಡದಿರುವುದು ದುರಾದೃಷ್ಟಕರ ಎಂದು ತಾಲೂಕು ನಾಗರಿಕ ಹಿತರಕ್ಷಣಾ ಸಮಿತಿ ಅಧ್ಯಕ್ಷ ಸ್ವಾಮಿಗೌಡ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಗರದ ವಿಜಯನಗರ ಬಡಾವಣೆಯಲ್ಲಿ ಸರ್ವೆ ನಂ.207, 208, 209, 166/2 ಮತ್ತು 167ರಲ್ಲಿ ನಿವೇಶನಗಳನ್ನು ಗುರುತಿಸಿ 2004, 2005ರಲ್ಲಿ ಹಕ್ಕು ಪತ್ರಗಳನ್ನು ವಿತರಿಸಿದ್ದರು. ಆದರೆ ಇದುವರೆಗೆ ಚುನಾಯಿತ ಜನಪ್ರತಿನಿಧಿಗಳಾಗಲಿ ಅಥವಾ ನಗರಸಭೆ ಅಧಿಕಾರಿಗಳಾಗಲಿ ಫಲಾನುಭವಿಗಳಿಗೆ ನಿವೇಶನಗಳನ್ನು ನೀಡಲು ಮುಂದಾಗದೆ ಅನ್ಯಾಯ ಮಾಡಿದ್ದಾರೆ ಎಂದು ಆರೋಪಿಸಿದರು.

2009ರಲ್ಲಿ ಶಾಸಕರಾಗಿದ್ದ ಹೆಚ್.ಪಿ ಮಂಜುನಾಥ್ ಅವರು ನಿವೇಶನ ವಿತರಣೆಗೆ ಸಂಬಂಧಿಸಿದಂತೆ 2011ರ ಜ.25, ನ.12, 2012ರ ಆ.8, 2014ರ ನ.6ರಂದು ಸಭೆ ನಡೆಸಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಲ್ಲದೇ ಬದಲಾದ ರಾಜಕೀಯ ಸನ್ನಿವೇಶದಲ್ಲಿ ನೂತನ ಶಾಸಕರಾದ ಹೆಚ್.ವಿಶ್ವನಾಥ್ ಅವರು 2018ರ ಡಿ.5ರಂದು, ನಂತರ ಶಾಸಕರಾದ ಜಿ.ಡಿ.ಹರೀಶ್‌ಗೌಡರು 2024ರ ಡಿ.6ರಂದು ಸಭೆ ನಡೆಸಿದರೂ ಬಡವರು ನಿವೇಶನ ಸಿಗದೇ ಪರಿತಪಿಸುತ್ತಿದ್ದಾರೆ ಎಂದರು.

ಸದರಿ ಹಕ್ಕುಪತ್ರಗಳನ್ನು ನೀಡಿರುವ ಜಮೀನು ಪಟ್ಟಣದ ಸಾರ್ವಜನಿಕರ ಕಂದಾಯದ ಹಣದಿಂದ 35 ವರ್ಷಗಳ ಹಿಂದೆ ಅಧಿಕಾರದಲ್ಲಿದ್ದ ಪುರಸಭೆ ಅಧ್ಯಕ್ಷರು ಮತ್ತು ಸದಸ್ಯರು ಖರೀದಿಸಿದ್ದಾರೆ. ನಂತರ ಮಾಜಿ ಶಾಸಕ ವಿ.ಪಾಪಣ್ಣ ಅವರು ಅರ್ಹ 870 ಫಲಾನುಭವಿಗಳನ್ನು ಆಯ್ಕೆ ಮಾಡಿ ಜಿಲ್ಲಾಧಿಕಾರಿಗಳಿಂದ ಅನುಮೋದನೆ ಪಡೆದು ಹಕ್ಕುಪತ್ರ ವಿತರಿಸಿದ್ದಾರೆ. ನಂತರ ಬಂದ ರಾಜಕಾರಣಿಗಳು ನಿವೇಶನ ನೀಡಲು ಮುಂದಾಗಲಿಲ್ಲ. ಈ ಬಗ್ಗೆ ಪ್ರಗತಿಪರ ಸಂಘಟನೆಗಳು ಹೋರಾಟ ಮಾಡಿದರೂ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗಿಲ್ಲ ಎಂದರು.

ಇದರಿಂದ ಬೇಸತ್ತ ಫಲಾನುಭವಿಗಳು ನಿವೇಶನಕ್ಕಾಗಿ ಹೋರಾಟ, ಪ್ರತಿಭಟನೆ ಮಾಡಿದರೂ ಜಗ್ಗದ ಅಧಿಕಾರಿಗಳು ನಿವೇಶನ ಹಂಚಿಕೆಗೆ ಮುಂದಾಗಲಿಲ್ಲ. ಹೀಗಾಗಿ ಅರ್ಹ ಫಲಾನುಭವಿಗಳಿಗೆ ನಿವೇಶನ ನೀಡಲು ಮುಂದಾಗದಿದ್ದಲ್ಲಿ ನೀಡಿರುವ ಹಕ್ಕುಪತ್ರಗಳ ಆಧಾರದ ಮೇಲೆ ನಾವೇ ಹೋಗಿ ಜಾಗದಲ್ಲಿ ಕುಳಿತು ನಮ್ಮ ನಿವೇಶನಗಳನ್ನು ಆಕ್ರಮಿಸುತ್ತೇವೆ. ಈ ಹೋರಾಟದಿಂದ ನಾವು ಜೈಲಿಗೆ ಹೋಗಲು ಸಿದ್ಧರಿದ್ದೇವೆ ಎಂದು ಎಚ್ಚರಿಕೆ ನೀಡಿದರು.

ಉಪಾಧ್ಯಕ್ಷ ರಾಜು ಮಾತನಾಡಿದರು. ಸುದ್ದಿಗೋಷ್ಠಿಯಲ್ಲಿ ಕಾರ್ಯದರ್ಶಿ ಸುರೇಶ್, ಸಂಘಟನೆ ಕಾರ್ಯದರ್ಶಿ ವಿಷಕಂಠ, ಸಂಚಾಲಕ ಶ್ರೀನಿವಾಸ್ ಹಾಜರಿದ್ದರು.

ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ಸೇರಿಸಿ



ಬನ್ನೂರು: ಸರ್ಕಾರಿ ಶಾಲೆಗಳ ಉಳಿವಿಗೆ, ನಿಮ್ಮ ಮಕ್ಕಳ ಉತ್ತಮ ಭವಿಷ್ಯಕ್ಕೆ, ಮಕ್ಕಳು ಸರ್ಕಾರಿ ಸೌಲಭ್ಯ ಪಡೆಯಲು, ಅನುಭವಿ ಉತ್ತಮ ಶಿಕ್ಷಕರಿಂದ ಪಾಠ ಕಲಿತು ಭವಿಷ್ಯ ರೂಪಿಸಿಕೊಳ್ಳಲು ಮಕ್ಕಳನ್ನು ಕಡ್ಡಾಯವಾಗಿ ಸರ್ಕಾರಿ ಶಾಲೆಗೆ ಸೇರಿಸಿ ಎಂದು ಶಿಕ್ಷಕರ ಸಂಘದ ಉಪಾಧ್ಯಕ್ಷ ಸುಬ್ರಹ್ಮಣ್ಯ ತಿಳಿಸಿದರು.

ಇಲ್ಲಿನ ಬೀಡನಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆದ ಶಾಲಾ ವಾರ್ಷಿಕೋತ್ಸವ ಮತ್ತು ಸಾಂಸ್ಕೃತಿಕ ಹಬ್ಬ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಇಂದು ಪೋಷಕರು ನಾಜೂಕಿನ ಶಿಕ್ಷಣದ ಕಡೆ ವಾಲುತ್ತಾ, ಉತ್ತಮ ಶಿಕ್ಷಣವನ್ನು ಮಕ್ಕಳಿಗೆ ನೀಡುವಲ್ಲಿ ವಿಫಲರಾಗಿದ್ದಾರೆ ಎಂದರು.

ಸರ್ಕಾರ ಮಕ್ಕಳ ಭವಿಷ್ಯ ರೂಪಿಸಲು ಉತ್ತಮ ಶಿಕ್ಷಣ ನೀಡುವುದರ ಜೊತೆಗೆ ಹಲವಾರು ಸೌಲಭ್ಯವನ್ನು ನೀಡುತ್ತಿದ್ದು, ಪೋಷಕರು ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಬೇಕು ಎಂದು ಅವರು ಪ್ರಸ್ತುತ ಖಾಸಗಿ ಶಾಲೆಯ ವ್ಯಾಮೋಹಕ್ಕೆ ಒಳಗಾದ ಪೋಷಕರು ಹೂದ ಸುಲಿಗೆಗೆ ನಿಂತಿರುವಂತ ಖಾಸಗಿ ಶಾಲೆಗಳಿಗೆ ಸೇರಿಸುವ ಮೂಲಕ ತಮ್ಮ ದುಡಿಮೆ ಹಣವನ್ನು ವ್ಯಯಿಸುತ್ತಿದ್ದಾರೆ ಎಂದರು.

ಇದೇ ವೇಳೆ ಕಾರ್ಯಕ್ರಮದಲ್ಲಿ ಗಣ್ಯರನ್ನು ಸನ್ಮಾನಿಸಲಾಯಿತು. ಹಳೆ ವಿದ್ಯಾರ್ಥಿಗಳ ಸಂಘದಿಂದ ಶಾಲೆಗೆ ಪ್ರಿಂಟರ್ ಸೇರಿದಂತೆ ಮಕ್ಕಳಿಗೆ ಬ್ಯಾಗ್‌ಗಳನ್ನು ನೀಡಲಾಯಿತು.

ಕಾರ್ಯಕ್ರಮದಲ್ಲಿ ಕ್ಷೇತ್ರ ಸಂಪನ್ಮೂಲ ಅಧಿಕಾರಿ ನಾಗೇಶ್, ಸಂಪನ್ಮೂಲ ವ್ಯಕ್ತಿ ಬೋರೇಗೌಡ, ಗ್ರಾಮದ ಮುಖಂಡ ವೆಂಕಟೇಗೌಡ, ನವೀನ್ ಪ್ರಕಾಶ, ಅಪ್ಪುಗೌಡ, ದೇವರಾಜು, ರೇವಣ್ಣ, ಮುಖ್ಯೋಪಾಧ್ಯಾಯ ವಿಷಕಂಠೇಗೌಡ, ಶಿಕ್ಷಕರಾದ ಚಂದ್ರಮ್ಮ, ಶಿವಣ್ಣ, ಪ್ರಸನ್ನ, ವೀರಭದ್ರ, ಎಸ್‌ಡಿಎಂಸಿ ಅಧ್ಯಕ್ಷ ಮಂಗಳ, ಕೃಷ್ಣೇಗೌಡ, ಮಂಜು, ಭವಿತ, ಪೂರ್ಣಿಮಾ ಇತರರಿದ್ದರು.

ತಿ.ನರಸೀಪುರ ಸರ್ಕಾರಿ ಕಾಲೇಜಲ್ಲಿ

ವಂದೇ ಮಾತರಂ 150ನೇ ವರ್ಷಾಚರಣೆ



ತಿ.ನರಸೀಪುರ ಸರ್ಕಾರಿ ಕಾಲೇಜಲ್ಲಿ ವಂದೇ ಮಾತರಂ 150ನೇ ವರ್ಷಾಚರಣೆ ನಡೆಯಿತು.

ತಿ.ನರಸೀಪುರ, ಮಾ.8– ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಆವರಣದಲ್ಲಿ ಸಾವರ್ಕರ್ ಪ್ರತಿಷ್ಠಾನ(ರಿ) ಮೈಸೂರು ವತಿಯಿಂದ ವಂದೇ ಮಾತರಂ 150ನೇ ವರ್ಷಾಚರಣೆ ನಡೆಸಲಾಯಿತು.

ಪ್ರತಿಷ್ಠಾನದ ಮೋಹನ್ ಮಾತನಾಡಿ, ದೇಶದ ಸ್ವಾತಂತ್ರ್ಯ ಹೋರಾಟದಲ್ಲಿ ಒಂದೇ ಮಾತರಂ ಗೀತೆ ತರುಣರ ಮನಸ್ಸಿನಲ್ಲಿ ದೇಶ ಭಕ್ತಿಯ ಜ್ವಾಲೆ ಪ್ರಜ್ವಲಿಸಲು ಪ್ರೇರಣೆಯಾಯಿತು. ಬಂಕಿಮ ಚಂದ್ರರು ದೇಶದ ಯುವಜನತೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಲು ಬೇಕಾದ ಪ್ರೇರಣೆ ಗೀತೆ ರಚಿಸಿದರು. ಇದರಿಂದಾಗಿ ಲಕ್ಷಾಂತರ ತರುಣರು ಸ್ವಾತಂತ್ರ್ಯ ಸಂಗ್ರಾಮದಲ್ಲಿ ತೊಡಗಿದರು. ಈ ಸಂಗ್ರಾಮದಲ್ಲಿ ಸಾಕಷ್ಟು ಮಂದಿ ಬಲಿದಾನವಾಯಿತು. ಇದರ ಫಲವೇ ಪ್ರಸ್ತುತ ಎಲ್ಲಾ ಕಡೆ ಯುದ್ಧಗಳು ನಡೆದರೂ ಭಾರತದಲ್ಲಿ ಜನರು ಸುಖ, ಶಾಂತಿ, ನೆಮ್ಮದಿಯಿಂದ ಬದುಕುತ್ತಿದ್ದಾರೆ. ಈ ಪರಿಸ್ಥಿತಿಯನ್ನು ಕಾಪಾಡಿಕೊಳ್ಳಲು ಯುವ ಜನರು ಕೂಡ ಒಂದೇ ಮಾತರಂ ಗೀತೆಯನ್ನು ಪ್ರೇರಣೆಯಾಗಿಟ್ಟುಕೊಂಡು ದೇಶದ ಅಭಿವೃದ್ಧಿ, ದೇಶದ ರಕ್ಷಣೆಯಲ್ಲಿ ತಮ್ಮನ್ನು ತಾವು ತೊಡಗಿಸಿಕೊಳ್ಳಬೇಕೆಂದು ಕರೆ ನೀಡಿದರು.

ವಂದೇ ಮಾತರಂ ಗೀತೆ ಕೇವಲ ಗೀತೆಯಾಗದೆ ದೇಶಭಕ್ತಿ ಮೂಡಿಸುವ ಅದ್ಭುತ ಶಕ್ತಿಯಾಗಿದೆ. ಇಂದು ವಂದೇ ಮಾತರಂ ಗೀತೆಗೆ 150 ವರ್ಷವಾದ ಹಿನ್ನೆಲೆಯಲ್ಲಿ ಅದರ ಮಹತ್ವ ಇವತ್ತು ನಮಗೆ ತಿಳಿಯುತ್ತದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಉದಯ ಕುಮಾರ್, ಉಪನ್ಯಾಸಕ ವೃಂದ, ಪ್ರತಿಷ್ಠಾನದ ಸಂತೋಷ್, ಅವಿನಾಶ್, ಕಾಲೇಜಿನ ವಿದ್ಯಾರ್ಥಿಗಳು ಹಾಗೂ ವಿದ್ಯಾರ್ಥಿನಿಯರು ಭಾಗವಹಿಸಿದ್ದರು.

ಶಾಲಾಭಿವೃದ್ಧಿಗೆ ಪೋಷಕರು, ಸಾರ್ವಜನಿಕರು ಸಹಕರಿಸಿ



ಮುಖ್ಯ ಶಿಕ್ಷಕ ಭಾಸ್ಕರ್, ಎಸ್‌ಡಿಎಂಸಿ ಅಧ್ಯಕ್ಷ ಎ.ಸಿ.ಮಹೇಶ್ ಮತ್ತು ಉಪಾಧ್ಯಕ್ಷೆ ರಮ್ಯ ಅವರನ್ನು ಅಭಿನಂದಿಸಲಾಯಿತು.

ಕೆ.ಆರ್.ನಗರ: ಶಾಲೆ ಸರ್ವಾಂಗೀಣ ಅಭಿವೃದ್ಧಿಗೆ ಶಾಲಾಭಿವೃದ್ಧಿ ಸಮಿತಿಯೊಂದಿಗೆ ಪೋಷಕರು ಹಾಗೂ ಸಾರ್ವಜನಿಕರು ಸಹಕರಿಸಿದರೆ ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡಿ ಅವರಿಗೆ ಉತ್ತಮ ಭವಿಷ್ಯ ರೂಪಿಸಲಾಗುವುದು ಎಂದು ಶಿಕ್ಷಣ ಇಲಾಖೆ ಕ್ಷೇತ್ರ ಸಮನ್ವಯಾಧಿಕಾರಿ ವೆಂಕಟೇಶ್ ಅಭಿಪ್ರಾಯಪಟ್ಟರು.

ತಾಲೂಕಿನ ಬ್ಯಾಡರಹಳ್ಳಿ ಕ್ಲಸ್ಟರ್ ವ್ಯಾಪ್ತಿ ಕಂಚುಗಾರ ಕೊಪ್ಪಲು ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆಯೋಜಿಸಿದ್ದ ಕ್ಲಸ್ಟರ್ ಮಟ್ಟದ ಎಸ್‌ಡಿಎಂಸಿ ಸದಸ್ಯರಿಗೆ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಇತ್ತೀಚಿನ ದಿನಗಳಲ್ಲಿ ಶಾಲಾಭಿವೃದ್ಧಿ ಸಮಿತಿಗಳಲ್ಲಿ ರಾಜಕೀಯ ಹೆಚ್ಚಾಗಿದ್ದು, ಶೈಕ್ಷಣಿಕ ಪ್ರಗತಿ ಮೇಲೆ ಪರಿಣಾಮ ಬೀರುತ್ತಿದೆ ಎಂದು ವಿಷಾದ ವ್ಯಕ್ತಪಡಿಸಿದ ಅವರು ಶಾಲಾಭಿವೃದ್ಧಿ ಸಮಿತಿಯವರು ಕಲಿಕಾ ಪ್ರಗತಿಗೆ ಮುಖ್ಯ ಶಿಕ್ಷಕರ ಜೊತೆ ಸಹಕರಿಸಬೇಕು. ಹಾಗೆಯೇ ಶಾಲಾ ಅನುದಾನವನ್ನು ಸಮನ್ವಯ ಸಭೆ ನಡೆಸಿ ಶಾಲೆಯ ಅಭಿವೃದ್ಧಿಗೆ ಬಳಸಬೇಕು ಎಂದರು

ಶಾಲಾಭಿವೃದ್ಧಿ ಸಮಿತಿ ಉತ್ತಮ ಯೋಜನೆಗಳನ್ನು ರೂಪಿಸಿ ಶಾಲೆ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಬೇಕು. ಹಾಗಾಗಿ ಸದಸ್ಯರು ಸೇವಾ ಮನೋಭಾವದಿಂದ ಕೆಲಸ ಮಾಡಬೇಕು ಎಂದು ಸಲಹೆ ನೀಡಿದರು. ಸಮಿತಿ ಸದಸ್ಯರು ಸ್ಥಳೀಯರು ಭಾಗವಹಿಸಿದ್ದರು

ನಂ.ಗೂಡು ನಾಯಕರ ಸಂಘದಿಂದ ಸಾಮೂಹಿಕ ವಿವಾಹ

ಸಾಮೂಹಿಕ ವಿವಾಹಕ್ಕೆ ಪ್ರೋತ್ಸಾಹ ನೀಡಿ: ಶಾಸಕ ದರ್ಶನ್ ಧ್ರುವನಾರಾಯಣ್



ಸಾಮೂಹಿಕ ವಿವಾಹದಲ್ಲಿ 4 ಜೋಡಿ ವಧು–ವರರು ಸತಿಪತಿಗಳಾದರು.

ನಂಜನಗೂಡು, ಮಾ.8– ಅದ್ದೂರಿ ಮದುವೆಗಳು ನಡೆಯುತ್ತಿರುವ ಕಾಲಘಟ್ಟದಲ್ಲಿ ತಾಲೂಕು ನಾಯಕರ ಸಂಘ ಸರಳ ಸಾಮೂಹಿಕ ವಿವಾಹ ನಡೆಸುವ ಮೂಲಕ ಮಾದರಿಯಾಗಿದೆ ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ತಿಳಿಸಿದರು.

ನಗರದ ವಾಲ್ಮೀಕಿ ನಾಯಕರ ಸಮುದಾಯ ಭವನದಲ್ಲಿ ಭಾನುವಾರ ನಡೆದ ಸಾಮೂಹಿಕ ವಿವಾಹ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಕ್ಕಳ ಮದುವೆಗಾಗಿ ಕೋಟ್ಯಾಂತರ ರೂಪಾಯಿ ದುಂದು ವೆಚ್ಚ ಮಾಡಿ ಜನ ಸಂಕಷ್ಟಕ್ಕೆ ಸಿಲುಕುತ್ತಿದ್ದಾರೆ. ಸರಳ ಸಾಮೂಹಿಕ ವಿವಾಹಕ್ಕೆ ಸಮುದಾಯ ಪ್ರೋತ್ಸಾಹ ನೀಡಬೇಕು. ಸರ್ಕಾರ ಸರಳ ಸಾಮೂಹಿಕ ವಿವಾಹವಾದವರಿಗೆ 50 ಸಾವಿರ ಸಹಾಯಧನ ನೀಡಿ ಪ್ರೋತ್ಸಾಹಿಸುತ್ತಿದೆ. ವಾಲ್ಮೀಕಿ ಸಮುದಾಯ ಭವನಕ್ಕೆ ನಾನು ಶಾಸಕನಾದ ನಂತರ 50 ಲಕ್ಷಕ್ಕಿಂತಲೂ ಹೆಚ್ಚಿನ ಅನುದಾನ ನೀಡಿ ಕಾಮಗಾರಿ ನಡೆಸಲಾಗಿದೆ. ಅಲ್ಲದೇ ಸಮುದಾಯ ಭವನಕ್ಕೆ ಬೇಕಾದ ಪಾತ್ರೆ ಪರಿಕರಗಳನ್ನು ವಿತರಿಸಲಾಗಿದೆ. ಸಮುದಾಯ ಭವನ ಸುಸಜ್ಜಿತವಾಗಿ ನಿರ್ಮಾಣವಾಗಿದ್ದು, ಅರ್ಥಪೂರ್ಣ ಕಾರ್ಯಕ್ರಮದ ಮೂಲಕ ಶುಭ ಚಾಲನೆಗೆ ಮುಂದಾಗಬೇಕೆಂಬ ಹಿತದೃಷ್ಟಿಯಿಂದ ತಾಲೂಕು ನಾಯಕರ ಸಂಘ ಉಚಿತ ಸಾಮೂಹಿಕ ವಿವಾಹ ಏರ್ಪಡಿಸಿರುವುದು ಶ್ಲಾಘನೀಯ. ಭವನಕ್ಕೆ ಅಗತ್ಯ ಸೌಲಭ್ಯಗಳನ್ನು ಒದಗಿಸಲು ಬದ್ಧನಾಗಿದ್ದೇನೆ ಎಂದರು.

ಶಾಸಕ ಡಾ.ಯತೀಂದ್ರ ಸಿದ್ದರಾಮಯ್ಯ ಮಾತನಾಡಿ, 6.5 ಕೋಟಿ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಾಣವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅಗತ್ಯ ಅನುದಾನ ನೀಡಿ ಸಹಕರಿಸಿದ್ದಾರೆ. ಭವನಕ್ಕೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಲು ನಾಯಕರ ಸಂಘ 2 ಕೋಟಿ ಅನುದಾನಕ್ಕಾಗಿ ಬೇಡಿಕೆ ಸಲ್ಲಿಸಿದೆ. ಅಗತ್ಯವಾದ ಎಲ್ಲಾ ನೆರವನ್ನು ನೀಡಲಾಗುವುದು. ಕಾಂಗ್ರೆಸ್ ಸರ್ಕಾರ ದೀನ, ದಲಿತ, ಅಲ್ಪಸಂಖ್ಯಾತ ಹಾಗೂ ಹಿಂದುಳಿದವರ ಪರವಾಗಿದೆ. ಸಮಾಜದ ಕಟ್ಟಕಡೆ ವ್ಯಕ್ತಿಗೆ ಸೌಲಭ್ಯ ಒದಗಿಸಲು ಬದ್ಧವಾಗಿದೆ. ಈ ನಿಟ್ಟಿನಲ್ಲಿ ಬಜೆಟ್‌ನಲ್ಲೂ ಕೂಡ ಅವಕಾಶ ವಂಚಿತರ ಪರವಾಗಿ ಯೋಜನೆ ರೂಪಿಸಲಾಗಿದ್ದು, ಎಸ್ಸಿ–ಎಸ್ಟಿ ಸಮುದಾಯಕ್ಕೆ 45,ಸಾವಿರ ಕೋಟಿ ಮೀಸಲಿಡಲಾಗಿದೆ ಎಂದರು.

ಕಾರ್ಯಕ್ರಮದಲ್ಲಿ ನೂತನ ವಧು–ವರರಿಗೆ ಶಾಸಕ ಅನಿಲ್‌ಚಿಕ್ಕಮಾದು ಹಾಗೂ ಪತ್ನಿ ಸೌಮ್ಯ ಅನಿಲ್ ಚಿಕ್ಕಮಾದು ಅವರು ಮಾಂಗಲ್ಯ ವಿತರಣೆ ಮಾಡಿದರು. ಕಾರ್ಯಕ್ರಮದಲ್ಲಿ ಸಂಜಯ ಕುಮಾರನಂದ ಸ್ವಾಮೀಜಿ 4 ಜೋಡಿ ವಧು–ವರರನ್ನು ಹರಸಿ ಆಶೀರ್ವಚನ ನೀಡಿದರು.

ಸಮಾರಂಭದಲ್ಲಿ ಮಾಜಿ ಶಾಸಕರಾದ ಬಿ.ಹರ್ಷವರ್ಧನ್, ಕೇಶವಮೂರ್ತಿ, ವಾಲ್ಮೀಕಿ ಅಭಿವೃದ್ಧಿ ನಿಗಮ ಮಾಜಿ ಅಧ್ಯಕ್ಷ ಹೆಚ್. ಸಿ.ಬಸವರಾಜು, ಬಿಜೆಪಿ ಜಿಲ್ಲಾಧ್ಯಕ್ಷ ಕುಂಬ್ರಹಳ್ಳಿ ಸುಬ್ಬಣ್ಣ, ಜಿಪಂ ಮಾಜಿ ಸದಸ್ಯ ಸಿ.ಚಿಕ್ಕರಂಗನಾಯಕ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಶ್ರೀಕಂಠನಾಯಕ, ತಾಲೂಕು ನಾಯಕರ ಸಂಘದ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಶ್ರೀಕಂಠ, ಸೂರಹಳ್ಳಿ ಲಕ್ಷ್ಮಣ, ಮುಖಂಡರಾದ ದೊರೆಸ್ವಾಮಿ ನಾಯಕ, ನಗರ್ಲೆ ಮಹ ದೇವಸ್ವಾಮಿ, ಕಳಲೆ ಮಹೇಶ್, ಶಿವನಂಜನಾಯಕ, ಕಳಲೆ ರವಿ, ತಾಪಂ ಮಾಜಿ ಸದಸ್ಯರಾದ ಚಾಮರಾಜು, ಜಿಪಂ ಮಾಜಿ ಸದಸ್ಯ ಚೋಳರಾಜು ಸೇರಿದಂತೆ ಹಲವರಿದ್ದರು.

ಜೆಡಿಎಸ್,ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್‌ಗೆ ಸೇರ್ಪಡೆ

ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ: ಶಾಸಕ ಅನಿಲ್ ಚಿಕ್ಕಮಾದು



ಬಿಜೆಪಿ, ಜೆಡಿಎಸ್ ತೊರೆದು 200ಕ್ಕೂ ಹೆಚ್ಚು ಮಂದಿ ಕಾಂಗ್ರೆಸ್‌ಗೆ ಸೇರ್ಪಡೆಗೊಂಡರು.

ಹೆಚ್.ಡಿ.ಕೋಟೆ, ಮಾ.8– ತಾಲೂಕಿನ ಬೀಚನಹಳ್ಳಿ ಗ್ರಾಮದ ಪ್ರವಾಸಿ ಮಂದಿರದಲ್ಲಿ ಶಾಸಕ ಅನಿಲ್ ಚಿಕ್ಕಮಾದು ನೇತೃತ್ವದಲ್ಲಿ 200ಕ್ಕೂ ಹೆಚ್ಚು ಜೆಡಿಎಸ್, ಬಿಜೆಪಿ ಕಾರ್ಯಕರ್ತರು ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಗೊಂಡರು.

ಕಾಂಗ್ರೆಸ್ ಸರ್ಕಾರದ ಜನಪರ ಯೋಜನೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಮೆಚ್ಚಿ ಸ್ವಯಂ ಪ್ರೇರಿತರಾಗಿ ಪಕ್ಷಕ್ಕೆ ಸೇರ್ಪಡೆಗೊಂಡ ಬಿಜೆಪಿ, ಜೆಡಿಎಸ್ ಕಾರ್ಯಕರ್ತರನ್ನು ಬರಮಾಡಿಕೊಂಡು ಮಾತನಾಡಿದ ಶಾಸಕ ಅನಿಲ್ ಚಿಕ್ಕಮಾದು, ರಾಜ್ಯ ಕಾಂಗ್ರೆಸ್ ಸರ್ಕಾರ ಅನೇಕ ಜನಪರ ಯೋಜನೆಗಳನ್ನು ಜಾರಿಗೆ ತಂದು ಸಮಾಜದ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಶ್ರಮಿಸುತ್ತಿದೆ. ಸರ್ಕಾರದ ಕೆಲಸಗಳನ್ನು ನೋಡಿ ಎಂ.ಸಿ.ತಳಲು, ಎತ್ತಿಗೆ, ಕಲ್ಲಂಬಾಳು, ಕಟ್ಟೆ ಹುಣಸೂರು, ಲಂಕೆ, ಹುಣಸಹಳ್ಳಿ, ದಡದಹಳ್ಳಿ, ಮುಳ್ಳೂರು, ಮನುಗನಹಳ್ಳಿ ಹಾಗೂ ಶಾಂತಿಪುರ ಸೇರಿದಂತೆ ಹಲವು ಗ್ರಾಮಗಳ ಬಿಜೆಪಿ, ಜೆಡಿಎಸ್ ಕಾರ್ಯಕರ್ತರು ಸ್ವಯಂಪ್ರೇರಿತರಾಗಿ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾಗುತ್ತಿರುವುದು ಸಂತೋಷದ ವಿಷಯ ಎಂದರು.

ನಾನು ತಾಲೂಕಿನ ಜನರ ಆಶೀರ್ವಾದದಿಂದ ಶಾಸಕನಾಗಿ ಆಯ್ಕೆಯಾಗಿದ್ದೇನೆ. ನನ್ನ ಕ್ಷೇತ್ರದ ಜನರ ಕಷ್ಟ ಸುಖಗಳಿಗೆ ಭಾಗಿಯಾಗಿ ತಾಲೂಕನ್ನು ಅಭಿವೃದ್ಧಿಪಡಿಸುವುದೆ ನನ್ನ ಗುರಿ. ನಾನು ನನ್ನ ತಂದೆ, ಮಾಜಿ ಶಾಸಕ ದಿ.ಚಿಕ್ಕಮಾದು ಹಾಗೂ ಮಾಜಿ ಸಂಸದ ದಿ.ಆರ್.ಧ್ರುವನಾರಾಯಣ್ ಅವರು ಹಾಕಿಕೊಟ್ಟ ದಾರಿಯಲ್ಲಿ ಸಾಗುವ ಮೂಲಕ ತಾಲೂಕಿನ ಅಭಿವೃದ್ಧಿಗೆ ಶ್ರಮಿಸುತ್ತೇನೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಾಲೂಕಿನ ಅಭಿವೃದ್ಧಿಗೆ ಈಗಾಗಲೇ ಸಾಕಷ್ಟು ಅನುದಾನ ನೀಡಿದ್ದಾರೆ. ಮುಂದಿನ ದಿನಗಳಲ್ಲಿ ಇನ್ನು ಹೆಚ್ಚಿನ ಅನುದಾನ ತರಲು ಮುಂದಾಗುತ್ತೇನೆ. ಇದೀಗ ನೂರಾರು ಮಂದಿ ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದು, ಮುಂದಿನ ದಿನಗಳಲ್ಲೂ ಇನ್ನೂ ಹೆಚ್ಚಿನ ಸಂಖ್ಯೆಯಲ್ಲಿ ಸೇರ್ಪಡೆಗೊಳ್ಳಲಿದ್ದಾರೆ.

ಇದೇ ವೇಳೆ ಪಕ್ಷಕ್ಕೆ ಸೇರ್ಪಡೆಗೊಂಡವರನ್ನು ಶಾಸಕರು ಕಾಂಗ್ರೆಸ್ ಪಕ್ಷದ ಶಾಲು ಹೊದಿಸಿ, ಬರಮಾಡಿಕೊಂಡರು. ಈ ವೇಳೆ ಮುಖಂಡರಾದ ಮನುಗನಹಳ್ಳಿ ಗುರುಸ್ವಾಮಿ, ಪುರದಕಟ್ಟೆ ಬಸವರಾಜು, ನಾಗನಹಳ್ಳಿ ಪ್ರದೀಪ, ಶಿವಮಲ್ಲಪ್ಪ ಹೊಂಡಾ ನಯಾಜ್, ರಾಜು ವಿಶ್ವಕರ್ಮ, ಗಣೇಶಾಚಾರ್, ನಾಗೇಶ, ಗುತ್ತಿಗೆದಾರ ಪರಶಿವಮೂರ್ತಿ, ಇನ್ನಿತರ ಸ್ಥಳೀಯ ಕಾಂಗ್ರೆಸ್ ಮುಖಂಡರು, ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಹಾಜರಿದ್ದರು.

ಪುರುಷರಿಗೆ ಸಮಾನವಾಗಿ ಮಹಿಳೆಯರಿಗೂ ಹಕ್ಕು ನೀಡಿದ ಅಂಬೇಡ್ಕರರನ್ನು ಸ್ಮರಿಸಬೇಕು

ಧರಂಸಿಂಗ್ ಕಾಲೋನಿಯಲ್ಲಿ ಮಹಿಳೆಯರ ದಿನಾಚರಣೆ



ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರಾದ ಜಯನಗರ ಸರ್ಕಾರಿ ಆಸ್ಪತ್ರೆಯ ಖ್ಯಾತ ಪ್ರಸೂತಿ ವೈದ್ಯರಾದ ಡಾ.ವೀಣಾ, ಮಹಿಳಾ ಹೆಡ್ ಕಾನ್ಸ್ಟೇಬಲ್ ಧನಲಕ್ಷ್ಮಿ, ಆಶಾ ಕಾರ್ಯಕರ್ತೆಯರಾದ ಕೋಮಲ, ಗೀತಾ, ಆಟೋ ಚಾಲಕರಾದ ರೇಣುಕಾದೇವಿ, ಶಿಲ್ಪ ಅವರನ್ನು ಶಾಸಕ ಎಂ.ಕೆ.ಸೋಮಶೇಖರ್ ಸನ್ಮಾನಿಸಿದರು.

ಮೈಸೂರು, ಮಾ.8(ವಿವಿಹೆಚ್)– ಮಹಿಳೆಯರು ನೆಮ್ಮದಿಯ ಸ್ವಾವಲಂಬಿಗಳಾಗಿ ಪುರುಷರಿಗೆ ಸಮಾನವಾಗಿ ತಮ್ಮ ಹಕ್ಕುಗಳನ್ನು ಪಡೆದು ಎಲ್ಲಾ ರಂಗದಲ್ಲೂ ಸಾಧನೆ ಮಾಡುವ ಮೂಲಕ ತಮ್ಮ ಬದುಕು ರೂಪಿಸಿಕೊಳ್ಳುತ್ತಿರುವುದು ಡಾ.ಬಿ.ಆರ್.ಅಂಬೇಡ್ಕರ್ ಅವರು ಕೊಟ್ಟ ಸಂವಿಧಾನದ ಹಕ್ಕಿನಿಂದ. ಪ್ರತಿಯೊಬ್ಬ ಮಹಿಳೆಯೂ ಅವರನ್ನು ಸ್ಮರಿಸಲೇಬೇಕು ಎಂದು ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಅಭಿಪ್ರಾಯಪಟ್ಟರು.

ಭಾರತ್ ಭೀಮ್ ಸೇನೆ ಮಹಿಳಾ ಘಟಕ ಹಾಗೂ ತುಳಸಿ ಮಹಿಳಾ ಸ್ವಸಹಾಯ ಸಂಘದ ಸಹಯೋಗದೊಂದಿಗೆ ಮೈಸೂರಿನ ವಿದ್ಯಾರಣ್ಯಪುರಂನ ಧರಂಸಿಂಗ್ ಕಾಲೋನಿ "ಬಿ "ಬ್ಲಾಕ್‌ನಲ್ಲಿ ಭಾನುವಾರ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮಹಿಳೆಯರ ಸಾಧನೆಗಳನ್ನು ಗುರುತಿಸಿ, ಅವರ ಹಕ್ಕುಗಳನ್ನು ಎತ್ತಿ ಹಿಡಿಯುವ ಮೂಲಕ ಲಿಂಗ ತಾರತಮ್ಯದ ವಿರುದ್ಧ ಜಾಗೃತಿ ಮೂಡಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ. ಪ್ರತಿಯೊಬ್ಬ ಮಹಿಳೆಯೂ ಉತ್ತಮ ಜ್ಞಾನ, ಕೌಶಲ್ಯಗಳನ್ನು ಹೊಂದಿದ್ದು, ಉತ್ತಮ ಅವಕಾಶಗಳು ದೊರೆತದ್ದೆ ಆದಲ್ಲಿ ಸಾಧನೆ ಶಿಖರವನ್ನೇರುತ್ತಾರೆ ಎಂದರು.

ಶಿಕ್ಷಣ ಮಹಿಳೆಯರ ಮೊದಲ ಆದ್ಯತೆಯಾಗಬೇಕು. ಶಿಕ್ಷಣ ಕಲಿತ ಹೆಣ್ಣು ದೇಶದ ಶಕ್ತಿಯಾಗಿ ರೂಪುಗೊಳ್ಳುವುದರಲ್ಲಿ ಯಾವ ಅನುಮಾನ ಇಲ್ಲ. ಶಿಕ್ಷಣದ ಮೂಲಕ ಸಂಘಟಿತರಾಗಿ, ಒಗ್ಗಟ್ಟಿನ ಮಂತ್ರ ಜಪಿಸಬೇಕು. ಆ ಮೂಲಕ ತಮ್ಮ ಹಕ್ಕುಗಳನ್ನು ಪಡೆಯಬೇಕು. ಅಂದು ಮಹಿಳಾ ದಿನಾಚರಣೆಗೆ ನಿಜವಾದ ಅರ್ಥ ಬರುತ್ತದೆ ಎಂದು ತಿಳಿಸಿದರು.

ಪ್ರಸೂತಿ ತಜ್ಞರಾದ ಡಾ.ವೀಣಾ ಮಾತನಾಡಿ, ಮಹಿಳಾ ದಿನಾಚರಣೆಯಲ್ಲಿ ಸಮಾಜದ ಮುಖ್ಯವಾಹಿನಿಯಲ್ಲಿ ಇರುವವರನ್ನು ಗುರುತಿಸಿ ಅಭಿನಂದಿಸಲಾಗುತ್ತದೆ. ಇಂತಹ ಸಾಧನೆಗೆ ಪ್ರೇರಣೆಯಾದ ಗೃಹಿಣಿಯನ್ನು ಮರೆಯುತ್ತಿದ್ದೇವೆ. ಮುಂದಿನ ದಿನಗಳಲ್ಲಿ ಅವರನ್ನು ಒಳಗೊಂಡಂತೆ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಬೇಕು ಎಂದರು.

ಭಾರತ್ ಭೀಮ್ ಸೇನೆ ಜಿಲ್ಲಾಧ್ಯಕ್ಷರಾದ ಮಹದೇವಮ್ಮ, ತುಳಸಿ ಮಹಿಳಾ ಸ್ವಸಹಾಯ ಸಂಘದ ಕಾರ್ಯದರ್ಶಿ ಮಂಜುಳಾ, ಭಾರತ್ ಭೀಮ್ ಸೇನೆ ಸಂಸ್ಥಾಪಕ ರಾಜ್ಯಾಧ್ಯಕ್ಷ ದಿನೇಶ್, ಭಾರತ್ ಭೀಮ್ ಸೇನೆ ಜಿಲ್ಲಾಧ್ಯಕ್ಷ ಯಶವಂತ್ ಕುಮಾರ್, ವಿದ್ಯಾರಣ್ಯಪುರಂ ಪೊಲೀಸ್ ಠಾಣೆಯ ಮಹಿಳಾ ಪೊಲೀಸ್ ಹೆಡ್ ಕಾನ್ಸ್ಟೇಬಲ್ ಧನಲಕ್ಷ್ಮಿ, ಸಮಾಜ ಸೇವಕಿ ಸುಹಾಸಿನಿ, ದೈಹಿಕ ಶಿಕ್ಷಕಿ ನಿರ್ಮಲ, ಕರ್ನಾಟಕ ರಾಜ್ಯ ಮಾನವ ಹಕ್ಕುಗಳ ಸಮಿತಿಯ ರಾಜ್ಯಾಧ್ಯಕ್ಷೆ ವಿ.ಪಿ.ಸುಶೀಲ, ಸಮತಾ ಸೊಸೈಟಿ ಅಧ್ಯಕ್ಷರಾದ ದೀಪಬುದ್ದೆ, ಮೈತ್ರಿ ರಾಜ್, ಮೈಸೂರು ವಿವಿ ಉಪನ್ಯಾಸಕ ರಾಘವೇಂದ್ರ ಪಾಲಿಕೆ ಮಾಜಿ ಸದಸ್ಯೆ ಶೋಭಾ ಸುನೀಲ್, ಎಂ ಸುನೀಲ್, ಉಮಾಮಣಿ ಮಾದೇಗೌಡ, ಗ್ರಾಮ ಪಂಚಾಯಿತಿ ಸದಸ್ಯರಾದ ಕಮಲಾ ನಟರಾಜ್ ಮತ್ತಿತರರು ಉಪಸ್ಥಿತರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ವಾದಂ (ತ) + ಮುಸ್ತಫಾ ಮುಸ್ತಫಾ (ತ)	2+2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೈಸ್ ಆಫ್ ಅಶೋಕ (ಕ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಓ ರೋಮಿಯೋ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ರಕ್ಕಸ ಪುರದೋಳ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಸಂಪತ್ತಿಗೆ ಸವಾಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ತಾಯಿ ಕಿಳವಿ (ತ)	4 ಪ್ರದರ್ಶನಗಳು
ಸಂಗಂ	
ಹಯಗ್ರೀವ (ಕ)	4 ಪ್ರದರ್ಶನಗಳು
ಲಿಡೋ	
ಮೆಜೆಸ್ಟಿಕ್–2 (ಕ)	2 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಓರಿಯೋ (ಕ) + ಜಯಕೃಷ್ಣ (ಕ)	2+2 ಪ್ರದರ್ಶನಗಳು

ಮಹಿಳಾ ದಿನಾಚರಣೆ ಅಂಗವಾಗಿ 16 ಮಂದಿ ಸಾಧಕಿಯರಿಗೆ ಸನ್ಮಾನ



ಮೈಸೂರು, ಮಾ.8(ಜಿಎ)–ಮೈಸೂರಿನ ಜನನಿ ಸೇವಾ ಟ್ರಸ್ಟ್ ವತಿಯಿಂದ ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಆಯೋಜಿಸಿದ್ದ ಅಂತರ ರಾಷ್ಟ್ರೀಯ ಮಹಿಳಾ ದಿನಾಚರಣೆ ಹಾಗೂ ಪಾಲಿಕೆ ಮಾಜಿ ಸದಸ್ಯರಾದ ಕೆ. ಕಮಲಮ್ಮ ಸ್ಮರಣೆ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 16 ಮಂದಿ ಸಾಧಕಿಯರನ್ನು ಅಭಿನಂದಿಸಲಾಯಿತು.

ಈ ವೇಳೆ ಖ್ಯಾತ ಕವಯತ್ರಿ ಕೆರೋಡಿ ಎಂ.ಲೋಲಾಕ್ಷಿ ಮಾತನಾಡಿ, ಪ್ರಶಸ್ತಿಗಳು ಇನ್ನಷ್ಟು ಸಾಧನೆ ಮಾಡಲು ಉತ್ತೇಜನ ನೀಡುತ್ತವೆ. ಸಾಧನೆಗೆ ಎಂದಿಗೂ ಅಂತ್ಯವಿಲ್ಲ. ಮಹಿಳೆ ತನ್ನ ಉದರದಲ್ಲಿ 9 ತಿಂಗಳು ಮಗುವನ್ನು ಹೊರುತ್ತಾಳೆ, ನಂತರ 2–3 ವರ್ಷ ಕಂಕುಳಲ್ಲಿ ಹೊತ್ತು ತಿರುಗುತ್ತಾಳೆ. ಬಳಿಕ ಆ ಮಗುವಿನ ಬಗ್ಗೆಯೇ ಸದಾ ಚಿಂತಿಸುತ್ತಾಳೆ. ಹೀಗಾಗಿ ಪ್ರತಿಯೊಬ್ಬರ ಜೀವನದಲ್ಲಿಯೂ ಮಹಿಳೆ ಇರುತ್ತಾಳೆ ಎಂದರು.

ಪುರುಷರ ಬೆಂಬಲವಿಲ್ಲದೇ ಮಹಿಳೆ ಸಾಧನೆ ಮಾಡಲು ಸಾಧ್ಯವಿಲ್ಲ. ಹೀಗಾಗಿ ಇದಕ್ಕೆ ಅವಕಾಶ ಮಾಡಿಕೊಡುವ ಪುರುಷರನ್ನೂ ಗೌರವಿಸಬೇಕು. ಮಹಿಳಾ ದಿನಾಚರಣೆ ಕೇವಲ ಒಂದು ದಿನಕ್ಕೆ ಸೀಮಿತವಾಗಬಾರದು. ಅದು ನಿತ್ಯವೂ ಆಚರಿಸುವಂತದ್ದಾಗಿರಬೇಕು ಎಂದರು.

ವಿವಿಧ ಕ್ಷೇತ್ರ ಸಾಧಕರಾದ ಎಂ.ಎಸ್. ಸುಜಾತ, ಡಿ.ಪುಷ್ಪ, ನೀಲಮಮ್, ಪವಿತ್ರ, ಡಾ.ಚಿತ್ಕಲಾ ಅರುಣ್, ರಶ್ಮಿ ಚಿಕ್ಕಮಗಳೂರು, ತನುಜಾ ಮಹೇಶ್, ಡಾ.ಸಿರೀಶ್ ಎಸ್.ಕುಮಾರ್, ಕವಿತಾ ಶೆಟ್ಟಿ, ಲತಾ, ಜಯಂತಿ, ಭಾನುಮತಿ, ಕುಮಲ ಆನಂದ್, ಜೆ.ಎಂ. ಹರ್ಷಿತ ಅವರನ್ನು ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಿ.ಗೌರಿ ಕೆ.ಹರೀಶ್‌ಗೌಡ, ನಿರ್ಮಲ ಶ್ರೀನಿವಾಸ್, ಕೆ.ಆರ್.ವಿಭಾವಸು ದೀಪಕ್, ಸೌಮ್ಯ ಅಶೋಕ್, ಎಂ.ಕೆ.ಅಶೋಕ್ ಮತ್ತಿತರರು ಉಪಸ್ಥಿತರಿದ್ದರು.

ಯೋಗನರಸಿಂಹಸ್ವಾಮಿ ದೇವಸ್ಥಾನದಲ್ಲಿ ಅಂತಾರಾಷ್ಟ್ರೀಯ ಮಹಿಳೆಯರ ದಿನ ಆಚರಣೆ



ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಆವರಣದಲ್ಲಿ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಮೈಸೂರು, ಮಾ.8(ಎಂಕೆ)– ಮೈಸೂರಿನ ವಿಜಯನಗರದಲ್ಲಿರುವ ಶ್ರೀ ಯೋಗನರಸಿಂಹಸ್ವಾಮಿ ದೇವಸ್ಥಾನದ ಆವರಣ ದಲ್ಲಿ ಮೈಸೂರು ಮಹಿಳಾ ಸಂಘದ ಭಜನಾ ಮಂಡಳಿ ವತಿಯಿಂದ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ಆಚರಿಸಲಾಯಿತು.

ಸಾವಿರಾರು ಭಕ್ತಾದಿಗಳಿಗೆ ಪ್ರಸಾದ ವಿನಿಯೋಗ ಹಾಗೂ ಭಜನೆ ಮೂಲಕ ಮಹಿಳಾ ದಿನ ಆಚರಿಸಲಾಯಿತು. ಈ ವೇಳೆ ಶ್ರೀ ಯೋಗನರಸಿಂಹ ದೇವಸ್ಥಾನದ ಆಡಳಿತಾಧಿಕಾರಿ ಡಾ.ಎನ್.ಶ್ರೀನಿವಾಸನ್ ಮಾತನಾಡಿ, ಮಹಿಳಾ ದಿನವು ಕೇವಲ ಒಂದು ದಿನದ ಆಚರಣೆಯಲ್ಲ. ಮಹಿಳೆಯರ ಸಮಾನತೆ ಮತ್ತು ಗೌರವಕ್ಕಾಗಿ ಸಮಾಜ ಒಟ್ಟಾಗಿ ಕೆಲಸ ಮಾಡುವ ಸಂಕಲ್ಪದ ದಿನವಾಗಿದೆ ಎಂದರು.

ಮಹಿಳೆಯರು ದೇಶದ ಪ್ರಗತಿಯ ಅಡಿಪಾಯ. ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿ ಮುನ್ನಡೆಯುತ್ತಿದ್ದಾರೆ. ಅದಾಗ್ಯೂ ಲಿಂಗ ತಾರತಮ್ಯ ನಿರ್ಮೂಲನೆ, ಮಹಿಳಾ ದೌರ್ಜನ್ಯದ ವಿರುದ್ಧ ಹೋರಾಟ ಮತ್ತು ಸಮಾನ ಅವಕಾಶಗಳಿಗಾಗಿ ಈ ದಿನವನ್ನು ಆಚರಿಸಲಾಗುತ್ತದೆ ಎಂದರು.

ಮಹಿಳೆಯರು ಸಶಕ್ತರಾದರೆ ಮಾತ್ರ ದೇಶ ಸಶಕ್ತವಾಗಲು ಸಾಧ್ಯ. ನಮ್ಮ ಜೀವನದಲ್ಲಿ ಪ್ರಮುಖ ಪಾತ್ರ ವಹಿಸುವ ಮಹಿಳೆಯರಿಗೆ ಧನ್ಯವಾದ ತಿಳಿಸಲು ಇದೊಂದು ಉತ್ತಮ ಸಮಯವಾಗಿದೆ ಎಂದು ತಿಳಿಸಿದರು. ಶ್ರೀ ಯೋಗಾನರಸಿಂಹ ಸ್ವಾಮಿ ದೇವಾಲಯದ ಸಂಸ್ಥಾಪಕರಾದ ನಾಡೋಜ ಡಾ.ಭಾಷ್ಯಂ ಸ್ವಾಮೀಜಿ, ಮುಡಾ ಮಾಜಿ ಅಧ್ಯಕ್ಷ ಹೆಚ್. ವಿ.ರಾಜೀವ್ ಮತ್ತಿತರರಿದ್ದರು.

ಮಹಿಳೆಯರಲ್ಲಿ ಚೈತನ್ಯ ವೃದ್ಧಿಸಲು ಚಾಮುಂಡಿಬೆಟ್ಟದಲ್ಲಿ ವಾಕಥಾನ್



ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ನೇಚರ್ ವಾಕಥಾನ್ ನಡೆಯಿತು.

ಮೈಸೂರು, ಮಾ.8(ಎಂಕೆ)– ಮೈಸೂರಿನ ಚಾಮುಂಡಿಬೆಟ್ಟದಲ್ಲಿ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮೈಸೂರು ಅಥ್ಲೀಟ್ಸ್ ಕ್ಲಬ್, ರಾಯಲ್ ರೈಡರ್ಸ್ ಮೈಸೂರು, ಐಎಂಎಎಸ್, ನಾರಾಯಣ ಆಸ್ಪತ್ರೆ, ಸಂದೀಪ್ ಡ್ಯಾನ್ಸ್ ಅಕಾಡೆಮಿ, ಯಂಗ್ ಇಂಡಿಯನ್ಸ್ ಮೈಸೂರು ಮತ್ತು ಮೈಸೂರು ರನ್ನರ್ಸ್ ಸಹಯೋಗದೊಂದಿಗೆ ಮಹಿಳೆಯರ ಚೈತನ್ಯ ಶಕ್ತಿ ವೃದ್ಧಿಸಲು ಮತ್ತು ಯೋಗಕ್ಷೇಮಕ್ಕಾಗಿ ನೇಚರ್ ವಾಕಥಾನ್ ಹಮ್ಮಿಕೊಳ್ಳಲಾಗಿತ್ತು.

ನೇಚರ್ ವಾಕಥಾನ್‌ಗೆ ಚಾಲನೆ ನೀಡಿದ ಬೆಂಗಳೂರಿನ ದಕ್ಷಿಣ ವಲಯದ ಕಾರಾಗೃಹಗಳ ಉಪ ಮಹಾನಿರ್ದೇಶಕಿ(ಡಿಐಜಿ) ಕೆ.ಸಿ.ದಿವ್ಯಶ್ರೀ, ಕುಟುಂಬ ಜವಾಬ್ದಾರಿ ಹೊತ್ತ ಮಹಿಳೆಯರು ಆರೋಗ್ಯ ಕಾಪಾಡಿಕೊಳ್ಳುವುದು ಅತೀ ಮುಖ್ಯವಾಗಿದೆ. ಈ ನಿಟ್ಟಿನಲ್ಲಿ ಚಾಮುಂಡಿ ಬೆಟ್ಟದ ರಮಣೀಯ ಮತ್ತು ಪ್ರಶಾಂತ ವಾತಾವರಣದಲ್ಲಿ ಸುಮಾರು 7 ಕಿಲೋ ಮೀಟರ್ ವಾಕಥಾನ್ ಆಯೋಜನೆ ಶ್ಲಾಘನೀಯ. ಫಿಟ್‌ನೆಸ್ ಮತ್ತು ಸಮುದಾಯ ಬಾಂಧವ್ಯವನ್ನು ಉತ್ತೇಜಿಸುವಲ್ಲಿ ಇದೊಂದು ಮಹತ್ವದ ಕಾರ್ಯಕ್ರಮವಾಗಿದೆ ಎಂದರು.

ಬಳಿಕ ವಿವಿಧ ವಯೋಮಾನದ ವಾಕಥಾನ್‌ನಲ್ಲಿ ವಿಜೇತರಾದವರಿಗೆ ಅಭಿನಂದನೆ ಸಲ್ಲಿಸಲಾಯಿತು. ಫಿಟ್‌ನೆಸ್ ಉತ್ಸಾಹಿಗಳು, ಸಮುದಾಯ ಸಂಸ್ಥೆಗಳು ಮತ್ತು ಬೆಂಬಲಿಗರನ್ನು ಒಟ್ಟುಗೂಡಿಸಿ, ಆರೋಗ್ಯ, ಹೊರಾಂಗಣ ಚಟುವಟಿಕೆ ಮತ್ತು ಸಕ್ರಿಯ ಜೀವನಶೈಲಿಯ ಮಹತ್ವವನ್ನು ಉತ್ತೇಜಿಸುವ ಮೂಲಕ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು.

ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್‌ನಿಂದ ಮಹಿಳಾ ಸಾಧಕರಿಗೆ ಸನ್ಮಾನ



ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ರೋಟರಿ ಸಭಾಂಗಣದಲ್ಲಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಅಶೋಕಪುರಂ ಠಾಣೆಯ ಎಎಸ್‌ಐ ಎಂ.ಬಿಗೀತಾ ಸಿದ್ದರಾಜು ಅವರನ್ನು ಸನ್ಮಾನಿಸಲಾಯಿತು.

ಮೈಸೂರು,ಮಾ.8(ಎಂಟಿವೈ)– ಅಂತರ ರಾಷ್ಟ್ರೀಯ ಮಹಿಳಾ ದಿನದ ಅಂಗವಾಗಿ ಕರ್ನಾಟಕ ಸಾಂಸ್ಕೃತಿಕ ಹಾಗೂ ಸಾಹಿತ್ಯ ಪರಿಷತ್ ವತಿಯಿಂದ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹಿಳೆಯರನ್ನು ಸನ್ಮಾನಿಸಲಾಯಿತು.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿ ರೋಟರಿ ಸಭಾಂಗಣದಲ್ಲಿ ಭಾನುವಾರ ನಡೆದ ಮಹಿಳಾ ದಿನಾಚರಣೆ ಕಾರ್ಯಕ್ರಮದಲ್ಲಿ ಕರೋಕೆ ಗೀತ ಗಾಯನ ಜರುಗಿತು. ವಿವಿಧ ಆರ್ಕೆಸ್ಟ್ರಾ ಸಂಸ್ಥೆಗಳಲ್ಲಿ ಗಾಯನ ಮಾಡುವ ಮಹಿಳಾ ಗಾಯಕಿಯರು ಕರೋಕೆ ಸಂಗೀತದೊಂದಿಗೆ ಜನಪ್ರಿಯ ಗೀತೆಗಳನ್ನು ಹಾಡುವ ಮೂಲಕ ಮಹಿಳಾ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಿದರು. ಬಳಿಕ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಅನ್ನಪೂರ್ಣ, ವಿದ್ಯಾಶ್ರೀ, ಪುಷ್ಪಲತಾ ಶಿವಕುಮಾರ್, ಜಯಲಕ್ಷ್ಮೀ ನಾಯ್ಡು, ಸುಜಾತಾ, ನಳಿನಿ ತಮ್ಮಯ್ಯ, ಎಂ.ಬಿ. ಗೀತಾ, ಡಾ.ಟಿ. ಸಂಧ್ಯಾ ಸೇರಿದಂತೆ ಹಲವರನ್ನು ಸನ್ಮಾನಿಸಲಾಯಿತು.

ಈ ಕಾರ್ಯಕ್ರಮವನ್ನು ಕೆವಿಸಿ ಆಸ್ಪತ್ರೆಯ ಯೂರಾಲಜಿಸ್ಟ್ ಡಾ.ಜಿ.ಎಸ್. ದಯಾನಂದ್ ಉದ್ಘಾಟಿಸಿದರು. ಮನೋವಿಜ್ಞಾನಿ ಡಾ. ರೇಖಾ ಮನಃಶಾಂತಿ ಅಧ್ಯಕ್ಷತೆ ವಹಿಸಿದ್ದರು. ಕುಹೂ ಕುಹೂ ಕಾರ್ಯಕ್ರಮದ ನಿರ್ದೇಶಕ ಸುರೇಶ್ ಬಾಬು, ಕವಿ ಮತ್ತು ಗಾಯಕ ಆದಿಲ್ ಪಾಷ, ಶಿವಣ್ಣ ಪೊಲೀಸ್ ಸಹಾಯವಾಣಿ ಸಮಾಲೋಚಕಿ ನಳಿನಿ ತಮ್ಮಯ್ಯ, ಅಶೋಕಪುರಂ ಠಾಣೆಯ ಎಎಸ್‌ಐ ಎಂ.ಬಿ.ಗೀತಾ ಸಿದ್ದರಾಜು, ಮೈಸೂರು ವೈದ್ಯಕೀಯ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ.ಟಿ. ಸಂಧ್ಯಾ, ಪರಿಷತ್ತಿನ ಕಸ್ತೂರಿ ಚಂದ್ರು ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಬುದ್ಧ ವಿಹಾರದಲ್ಲಿ ವಿಶ್ವ ಮಹಿಳಾ ದಿನ ಆಚರಣೆ



ಮೈಸೂರಿನ ಬುದ್ಧವಿಹಾರ್ ಸಭಾಂಗಣದಲ್ಲಿ ಮಹಾನಾಯಕ ಭೀಮರಾವ್ ಫೌಂಡೇಶನ್ ಹಾಗೂ ಮೈಸೂರಿನ ಲಯನ್ಸ್ ಸೌಹಾರ್ದ ಸಹಕಾರದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.

ಮೈಸೂರು, ಮಾ.8–ಮೈಸೂರಿನ ಬುದ್ಧವಿಹಾರ್ ಸಭಾಂಗಣದಲ್ಲಿ ಮಹಾನಾಯಕ ಭೀಮರಾವ್ ಫೌಂಡೇಶನ್ ಹಾಗೂ ಮೈಸೂರಿನ ಲಯನ್ಸ್ ಸೌಹಾರ್ದ ಸಹಕಾರದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನವನ್ನು ಆಚರಿಸಲಾಯಿತು.

ಕಾರ್ಯಕ್ರಮವನ್ನು ಮಾಜಿ ಮೇಯರ್ ಪುರುಷೋತ್ತಮ್ ಉದ್ಘಾಟಿಸಿ ಮಾತನಾಡಿ, ಮಹಿಳೆಯರು ಎಷ್ಟೇ ಉನ್ನತ ಹುದ್ದೆಗಳಿಗೆ ಏರಿದರು ಇನ್ನೂ ದೇಶಾದ್ಯಂತ ಮಹಿಳೆಯರ ವಿರುದ್ಧ ಶೋಷಣೆ, ದೌರ್ಜನ್ಯಗಳು ನಡೆಯುತ್ತಲೇ ಇವೆ. ಇದನ್ನು ತಡೆಗಟ್ಟಲು ಸರ್ಕಾರಗಳು ವಿಫಲವಾಗಿವೆ ಇದು ಬೇಸರದ ಸಂಗತಿ ಎಂದರು.

ಈ ವೇಳೆ ಪದವಿಪೂರ್ವ ಶಿಕ್ಷಣ ಇಲಾಖೆಯ ಉಪ ನಿರ್ದೇಶಕಿ ಎಂ.ಪಿ. ನಾಗಮ್ಮ, ಚೆಸ್ಕಾಂನ ಕಾರ್ಯನಿರ್ವಾಹಕ ಅಭಿಯಂತರರಾದ ಎಸ್.ಬಿ.ಅನಿತಾ ಅವರನ್ನು ಮಹಿಳೆಯರ ದಿನಾಚರಣೆ ಅಂಗವಾಗಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲೆ ನಂಜನಗೂಡು ನ್ಯಾಯಾಲಯಕ್ಕೆ ನ್ಯಾಯಮೂರ್ತಿಯಾಗಿ ನೂತನವಾಗಿ ನೇಮಕವಾಗಿರುವ ನ್ಯಾಯಮೂರ್ತಿ ಮಹಾದೇವಸ್ವಾಮಿ ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮಹಾನಾಯಕ ಫೌಂಡೇಶನ್ ರಾಜ್ಯಾಧ್ಯಕ್ಷ ನಾರಾಯಣಸ್ವಾಮಿ, ಕಾರ್ಯದರ್ಶಿ ಸಿ.ಚೌಡಯ್ಯ, ಎಂ.ಕೆ.ಶ್ರೀಧರ್, ಜಿಲ್ಲಾಧ್ಯಕ್ಷ ಕುಮಾರಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

'ನಾರಿ ಸಂಭ್ರಮ'ದಲ್ಲಿ ಜಾನಪದ, ಗೀತಾಗಾಯನ ಭರತನಾಟ್ಯ



ಮೈಸೂರು, ಮಾ.8(ಎಸ್‌ಪಿಎನ್)– ಮೈಸೂರು ಇರ್ವಿನ್ ರಸ್ತೆಯಲ್ಲಿರುವ ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದಲ್ಲಿ ಮಹಿಳಾ ದಿನಾಚರಣೆ ಅಂಗವಾಗಿ 'ನಾರಿ ಸಂಭ್ರಮ' ಶೀರ್ಷಿಕೆಯಡಿ ಭಾನುವಾರ ಭರತನಾಟ್ಯ, ಜಾನಪದ ಗೀತಾ ಗಾಯನ ಕಾರ್ಯಕ್ರಮ ನಡೆಯಿತು.

'ನಾರಿ ಸಂಭ್ರಮ' ಕಾರ್ಯಕ್ರಮ ಉದ್ಘಾಟಿಸಿದ ಇಂದಿರಾ ಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ಕಚೇರಿ ಅಧೀಕ್ಷಕ ಅಶೋಕ ವರ್ಧನ ಮಾತನಾಡಿ, ಮೈಸೂರು ಕಲೆಗಳ ತವರೂರು, ಇಲ್ಲಿ ಯಾವುದೇ ಕಾರ್ಯಕ್ರಮಗಳು ಆಯೋಜಿಸಿದರೂ ಯಶಸ್ವಿಯಾಗುತ್ತವೆ. ಎಲ್ಲಾ ಪ್ರಾಕಾರಗಳ ಕಲೆಗೂ ಪ್ರೇಕ್ಷಕರು ಪ್ರೋತ್ಸಾಹಿಸುತ್ತಾರೆ. ಹಾಗಾಗಿ ಮುಂದಿನ ಇಂದಿರಾ ಗಾಂಧಿ ಮಾನವ ಸಂಗ್ರಹಾಲಯದ ವತಿಯಿಂದ ಮತ್ತಷ್ಟು ಸಾಂಸ್ಕೃತಿಕ ಕಾರ್ಯಕ್ರಮಗಳು ಆಯೋಜಿಸುವ ಚಿಂತನೆಯಿದೆ. ಈ ಕಾರ್ಯಕ್ರಮಗಳಿಗೂ ಪ್ರೇಕ್ಷಕರ ಸಹಕಾರ ಮುಖ್ಯ ಎಂದರು.

ಮೈಸೂರಿನಲ್ಲಿ ಪುರುಷರಷ್ಟೇ ಮಹಿಳಾ ಕಲಾವಿದರೂ ಕಲೆಯಲ್ಲಿ ಸಮಾನವಾಗಿ ಕೆಲಸ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲೇ 'ಸಾಂಸ್ಕೃತಿಕ ನಗರಿ ಮೈಸೂರು' ವಿಶೇಷತೆ ಎಂದು ಕರೆಯಲಾಗುತ್ತಿದೆ. ಈ ಕೀರ್ತಿಗೆ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ಕೊಡುಗೆ ಇರಲಿದೆ ಎಂದರು.

ಜಾನಪದ ನೃತ್ಯ, ಗಾಯನ, ಭರತನಾಟ್ಯ ಸೇರಿದಂತೆ ಇತರೆ ಕಲೆಗಳನ್ನು ಪ್ರದರ್ಶಿಸಿ, ಪ್ರೇಕ್ಷಕರ ಮನಸೆಳೆದರು. ಈ ವೇಳೆ ಭರತನಾಟ್ಯ ಶಿಕ್ಷಕಿ ವಿದುಷಿ ಜಯಶ್ರೀ, ಸುಪ್ರಿಯಾ, ಮೈಸೂರು ಪೇಂಟಿಂಗ್ಸ್ ಕಲಾವಿದೆ ಪವಿತ್ರಾ, ರಾಧಾಗೌಡ ಸೇರಿದಂತೆ ಇತರರಿದ್ದರು.

ಸಾಧಕ ಮಹಿಳೆಯರ ಛಾಯಾಚಿತ್ರ, ಪುಸ್ತಕ ಮಾರಾಟದೊಂದಿಗೆ ಚಿಕ್ಕಗಡಿಯಾರದ ಬಳಿ ಮಹಿಳಾ ದಿನ ಆಚರಣೆ



ಮೈಸೂರಿನ ಚಿಕ್ಕ ಗಡಿಯಾರದ ಬಳಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ(ಎಐಎಂಎಸ್‌ಎಸ್) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಮೈಸೂರು, ಮಾ.8(ಎಂಕೆ)– ಮೈಸೂರಿನ ಚಿಕ್ಕ ಗಡಿಯಾರದ ಬಳಿ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆ (ಎಐಎಂಎಸ್‌ಎಸ್) ಮೈಸೂರು ಜಿಲ್ಲಾ ಸಮಿತಿ ವತಿಯಿಂದ ಸಾಧಕ ಮಹಿಳೆಯರ ಛಾಯಾಚಿತ್ರ ಪ್ರದರ್ಶನ ಹಾಗೂ ಪುಸ್ತಕಗಳ ಮಾರಾಟದೊಂದಿಗೆ ಅಂತರರಾಷ್ಟ್ರೀಯ ಮಹಿಳಾ ದಿನ ಆಚರಿಸಲಾಯಿತು.

ಅಂತರರಾಷ್ಟ್ರೀಯ ಮಹಿಳಾ ದಿನದ ರೂವಾರಿ ಜರ್ಮನಿಯ ಸಮಾಜವಾದಿ ನಾಯಕಿ, ಹೋರಾಟಗಾರ್ತಿ ಕ್ಲಾರಾ ಜೆಟ್ಕಿನ್ ಅವರ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದ ಎಐಎಂಎಸ್‌ಎಸ್ ಜಿಲ್ಲಾಧ್ಯಕ್ಷೆ ನಳಿನ ಮಾತನಾಡಿ, ದೇಶದಲ್ಲಾಗುತ್ತಿರುವ ಮಹಿಳೆಯರು ಮತ್ತು ಮಕ್ಕಳ ಮೇಲಿನ ಅಪರಾಧಗಳ ವಿರುದ್ಧ ಇಡೀ ಸಮಾಜವೇ ಎದ್ದು ನಿಲ್ಲಬೇಕಿದೆ. ಹೆಣ್ಣು ಮಕ್ಕಳನ್ನು ಘನತೆಯಿಂದ ಗೌರವದಿಂದ ನಡೆಸಿಕೊಳ್ಳಬೇಕಿದೆ ಎಂದರು.

ಕಾರ್ಯದರ್ಶಿ ಆಸಿಯಾ ಬೇಗಂ ಮಾತನಾಡಿ, ಪ್ರತಿ ವರ್ಷ ಮಾ.8ರಂದು ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಆಚರಿಸಬೇಕಾಗಿರುವುದು ಕೇವಲ ಒಂದು ಸಂಪ್ರದಾಯದಂತೆ ಅಥವಾ ಸಂಭ್ರಮವಾಗಿ ಅಲ್ಲ. ಬದಲಿಗೆ ಈ ದಿನ ಪುರುಷ ಪ್ರಧಾನ ಸಮಾಜದ ಧೋರಣೆಯ ವಿರುದ್ಧ ಸಮರ ಸಾರಲು ವೈಚಾರಿಕ ಆಂದೋಲನ ನಡೆಸಲು ಪಣತೊಡಬೇಕಿದೆ. ಮಹಿಳಾ ಹಕ್ಕುಗಳ ಬಗ್ಗೆ, ಸಮಾನತೆ ಬಗ್ಗೆ ಅರಿವು ಮೂಡಿಸುವ ಮತ್ತು ಅಸಮಾನತೆಯ ಬೇರುಗಳನ್ನು ಪತ್ತೆ ಹಚ್ಚಿ, ಹೆಣ್ಣಿನ ಮೇಲೆ ಹೇರಲ್ಪಟ್ಟ ಅನ್ಯಾಯಗಳ ವಿರುದ್ಧ ಧೈರ್ಯದಿಂದ ಧ್ವನಿ ಎತ್ತಲು ಈ ದಿನ ಪ್ರೇರಣಾದಾಯಕವಾಗಿದೆ ಎಂದು ತಿಳಿಸಿದರು.

ಕಳೆದ ಮೂರು ವರ್ಷಗಳಲ್ಲಿ 1775 ಬಾಲ್ಯವಿವಾಹ ಪ್ರಕರಣಗಳು ದಾಖಲಾಗಿವೆ. ಕಳೆದೊಂದು ವರ್ಷದಲ್ಲಿ 700 ಬಾಲ್ಯ ವಿವಾಹಗಳು ನಡೆದಿವೆ. ಮಂಡ್ಯ ಮೈಸೂರು ಮತ್ತು ಬೆಂಗಳೂರು ಭಾಗಗಳಲ್ಲಿ ಕೇವಲ ಎರಡು ವರ್ಷಗಳಲ್ಲಿ 900 ಹೆಣ್ಣು ಭ್ರೂಣಗಳನ್ನು ಅರಳುವ ಮುನ್ನವೇ ಚಿವುಟಲಾಗಿದೆ. ಸಂತಾನೋತ್ಪತ್ತಿ ಮತ್ತು ಮಕ್ಕಳ ಆರೋಗ್ಯ ಪೋರ್ಟಲ್ ಪ್ರಕಾರ 80,813 ಬಾಲ ಗರ್ಭಿಣಿ ಪ್ರಕರಣಗಳು ದಾಖಲಾಗಿವೆ ಎಂದು ಕಳವಳ ವ್ಯಕ್ತಪಡಿಸಿದರು. ಜಿಲ್ಲಾ ಸಮಿತಿ ಸದಸ್ಯರಾದ ಪದ್ಮಶ್ರೀ, ಗಾಯಿತ್ರಿ, ಉಷಾ ಮತ್ತಿತರರು ಉಪಸ್ಥಿತರಿದ್ದರು.

ಸಾಧಕ ಮಹಿಳೆಯರಲ್ಲಿದೆ ಅಗಾಧವಾದ ಶಕ್ತಿ

ಕೊಲ್ಲಾಪುರದಮ್ಮ ದೇವಸ್ಥಾನದಲ್ಲಿ ಮಹಿಳೆಯರ ದಿನ ಆಚರಣೆ



ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದ ಅಮ್ಮನವರ ದೇವಾಲಯದ ಆವರಣದಲ್ಲಿ ಮೈಸೂರು ಯುವ ಬಳಗ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರನ್ನು ಸನ್ಮಾನಿಸಲಾಯಿತು.

ಮೈಸೂರು,ಮಾ.8(ಎಂಟಿವೈ)– ಎಲ್ಲಾ ಕ್ಷೇತ್ರಗಳಲ್ಲೂ ಸಾಧನೆ ಮಾಡುವ ಅಗಾಧ ಶಕ್ತಿ ಮಹಿಳೆಯರಲ್ಲಿ ದೈವದತ್ತವಾಗಿ ಮೂಡಿ ಬಂದಿದ್ದು, ಮತ್ತಷ್ಟು ಮಹಿಳಾ ಸಾಧಕರ ಸೃಷ್ಟಿಗಾಗಿ ಹೆಣ್ಣು ಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಲು ಪಣ ತೊಡಬೇಕು ಎಂದು ಶಾಸಕ ಕೆ.ಹರೀಶ್‌ಗೌಡ ಸಲಹೆ ನೀಡಿದ್ದಾರೆ.

ಮೈಸೂರಿನ ನಾರಾಯಣ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಹಾಲಕ್ಷ್ಮಿ ಕೊಲ್ಲಾಪುರದ ಅಮ್ಮನವರ ದೇವಾಲಯದ ಆವರಣದಲ್ಲಿ ಮೈಸೂರು ಯುವ ಬಳಗ ಆಯೋಜಿಸಿದ್ದ ಅಂತರಾಷ್ಟ್ರೀಯ ಮಹಿಳಾ ದಿನದ ಕಾರ್ಯಕ್ರಮದಲ್ಲಿ ಸಾಧಕ ಮಹಿಳೆಯರಿಗೆ ಸನ್ಮಾನಿಸಿ ಮಾತನಾಡಿದ ಅವರು, ಸಮಾಜದ ಏಳಿಗೆಯಲ್ಲಿ ಮಹಿಳೆಯರ ಪಾತ್ರ ಪ್ರಮುಖವಾಗಿದೆ ಎಂದರು.

ಮಹಿಳೆಯರಿಗೆ ಸಾಧನೆ ಮಾಡುವ ಗುಣ ಮತ್ತು ಶಕ್ತಿ ಇದೆ. ಮಹಿಳೆಗೆ ಸರಿಸಾಟಿ ಯಾರು ಇಲ್ಲ. ಹೆಣ್ಣು ಅಕ್ಷರ ಕಲಿತರೆ ಶಾಲೆ ತೆರೆದಂತೆ ಎಂಬ ಗಾದೆ ಮಾತಿದೆ. ಅದಕ್ಕೆ ಅನುಗುಣವಾಗಿ ಮಹಿಳೆಯರು ಕಡ್ಡಾಯವಾಗಿ ಶಿಕ್ಷಣ ಪಡೆಯಬೇಕು. ಕೀಳರಿಮೆ ತೊರೆದು ಸಮಾಜದ ಒಳಿತಿಗೆ ದುಡಿಯಬೇಕು. ಮಹಿಳೆ ಎಲ್ಲರಿಗೂ ಸ್ಫೂರ್ತಿಯ ಸೆಲೆಯಾಗಬೇಕು ಎಂದು ಸಲಹೆ ನೀಡಿದರು.

ಸನ್ಮಾನ: ಇದೆ ವೇಳೆ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ಲಿಂಗಮ್ಮ (ಕೆಎಸ್ ಆರ್‌ಟಿಸಿ ಬಸ್ ಚಾಲಕಿ), ಬಿಂದು(ರೈಲಿನ ಲೋಕೋಪೈಲಟ್), ಸಿರಿ(ಛಾಯಾಗ್ರಾಹಕಿ), ಯಶಿಕಾ(ಕ್ರಿಕೆಟ್ ಪಟು), ದೀಕ್ಷಾ(ಕುಸ್ತಿಪಟು), ಅನುಷಾ(ಬಸ್ ಮೆಕಾನಿಕ್), ಶಾಲಿನಿ (ಅಂಚೆ ಸಿಬ್ಬಂದಿ), ಡಾ. ಶೃತಿ(ವೈದ್ಯ), ವಾರಿಜ (ಭರತನಾಟ್ಯ ಶಿಕ್ಷಕಿ), ನೀಲಮ್ಮ(ರುದ್ರ ಭೂಮಿ ಕಾವಲುಗಾರರು) ಅವರನ್ನು ಸನ್ಮಾನಿಸಲಾಯಿತು.

ಕಾರ್ಯಕ್ರಮದಲ್ಲಿ ಮೈಸೂರು ಯುವ ಬಳಗದ ಅಧ್ಯಕ್ಷ ನವೀನ್, ಮುಖಂಡ ರಾಕೇಶ್ ಭಟ್, ಶ್ರೀ ಕನಕದಾಸ ಪತ್ತಿನ ಸಹಕಾರ ಸಂಘದ ನಿರ್ದೇಶಕ ರವಿಚಂದ್ರ ಮುಖಂಡರಾದ ಸಂದೀಪ್, ಮಹದೇವ್, ಶಾಂತ, ಮಂಗಳ, ಹರೀಶ್ ಗೌಡ, ನಂಜುಂಡಿ, ಲೋಕೇಶ್, ಹೇಮಂತ್, ಈರೇಗೌಡ, ಶ್ರೀಕಾಂತ್ ಪಾಪು ಇನ್ನಿತರರು ಉಪಸ್ಥಿತರಿದ್ದರು.

ಕೈವಾರ ತಾತಯ್ಯನವರ ಸಂದೇಶ ಸರ್ವಕಾಲಿಕ

ಕೈವಾರ ತಾತಯ್ಯನವರ ಜಯಂತಿಯಲ್ಲಿ ಶಾಸಕ ಟಿ.ಎಸ್.ಶ್ರೀವತ್ಸ ಅಭಿಮತ



ಮೈಸೂರಿನ ಕಲಾಮಂದಿರದ ಕಿರುರಂಗಮಂದಿರದಲ್ಲಿ ನಡೆದ ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಎಂಎಲ್‌ಸಿ ಸಿ.ಎನ್. ಮಂಜೇಗೌಡ ಯೋಗಿನಾರೇಯಣ ಯತೀಂದ್ರರ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿದರು.

ಮೈಸೂರು,ಮಾ.8(ಎಂಟಿವೈ)– ಸಮ ಸಮಾಜ ನಿರ್ಮಾಣ ಮಾಡಲು ಕೈವಾರ ತಾತಯ್ಯನವರು ಕೈಗೊಂಡಂತಹ ಕೆಲಸ ಕಾರ್ಯ ಮಾದರಿಯಾಗಿದೆ ಎಂದು ಶಾಸಕ ಟಿ.ಎಸ್.ಶ್ರೀವತ್ಸ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರು ಮಹಾನಗರ ಪಾಲಿಕೆ, ಶ್ರೀ ಯೋಗಿನಾರೇಯಣ ಯತೀಂದ್ರರ ಜಯಂತ್ಯೋತ್ಸವ ಸಮಿತಿ ವತಿಯಿಂದ ಆಯೋಜಿಸಲಾಗಿದ್ದ ಶ್ರೀ ಯೋಗಿನಾರೇಯಣ ಯತೀಂದ್ರರ (ಕೈವಾರ ತಾತಯ್ಯ) ಜಯಂತಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 18ನೇ ಶತಮಾನದ ಕೈವಾರ ತಾತಯ್ಯನವರ ಜೀವನ ಚರಿತ್ರೆಯನ್ನು ತಿಳಿದುಕೊಳ್ಳಬೇಕು. ಸಮ ಸಮಾಜ ನಿರ್ಮಿಸಲು ಪ್ರಯತ್ನಿಸಿದ್ದರು. ಅವರ ಸಂದೇಶ ಸರ್ವಕಾಲೀಕವಾಗಿದೆ ಎಂದರು.

ಪ್ರಸ್ತುತ ಸಂದರ್ಭದಲ್ಲಿ ಜಾತಿ ಬೇದಭಾವವಿಲ್ಲದೆ ಅರ್ಚಕರ ವೃತ್ತಿ, ಶಾಸ್ತ್ರೀಯ ಸಂಗೀತ, ಭರತನಾಟ್ಯದಂತಹ ಕಲೆಯ ಕಡೆ ಹೆಚ್ಚು ಒಲವನ್ನು ತೋರುತ್ತಿದ್ದಾರೆ. ಮಹಾನ್ ವ್ಯಕ್ತಿಗಳ ಜಯಂತಿ ಕಾರ್ಯಕ್ರಮಗಳಿಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಆಗಮಿಸಿ, ಮಹನೀಯರ ತತ್ವ ಸಿದ್ಧಾಂತಗಳನ್ನು ತಿಳಿದುಕೊಳ್ಳಬೇಕು. ಆಗ ಮಾತ್ರ ಸಮ ಸಮಾಜ ನಿರ್ಮಾಣ ಮಾಡಲು ಸಾಧ್ಯ ಎಂದರು.

ವಿಧಾನ ಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡ ಮಾತನಾಡಿ, ಜೀವನದಲ್ಲಿ ಸಾಧನೆ ಮಾಡಬೇಕಾದರೆ ಅದು ಶಿಕ್ಷಣದಿಂದ ಮಾತ್ರ ಸಾಧ್ಯ. ಶಿಕ್ಷಣಕ್ಕಿಂತ ಯಾವುದು ದೊಡ್ಡದಿಲ್ಲ. ಮಕ್ಕಳಿಗೆ ಶಿಕ್ಷಣ ನೀಡಿ, ಜ್ಞಾನ ಗ್ರಹಿಸುವುದರೊಂದಿಗೆ ಮಹಾನ್ ವ್ಯಕ್ತಿಗಳ ಬಗ್ಗೆ ತಿಳಿದುಕೊಳ್ಳುವುದು ಮುಖ್ಯ. ಕೈವಾರ ತಾತಯ್ಯ ಅವರ ಆದರ್ಶದ ಹಾದಿಯಲ್ಲಿ ನಾವು ಸಾಗಬೇಕು. ತಾತಯ್ಯನವರ ಬದುಕು ಆದರ್ಶಗಳು ನಮ್ಮ ಜೀವನಕ್ಕೆ ಸ್ಫೂರ್ತಿಯಾಗಬೇಕು. ಸಮಾಜದಲ್ಲಿ ಮಹಾನ್ ವ್ಯಕ್ತಿಗಳ ಬಗ್ಗೆ ತಿಳಿದುಕೊಂಡಾಗ ನಮ್ಮಲ್ಲಿರುವ ಲೋಪದೋಷ ಕಡಿಮೆಯಾಗುತ್ತದೆ. ಕೈವಾರ ತಾತಯ್ಯ ಅವರು ಸಾಕು ತಂದೆ ತಾಯಿಂದ ವಿದ್ಯೆ ಕಲಿತು ಬೆಳೆದು ಬಂದವರು. ಇವರು 1726ರಲ್ಲಿ ಜನಿಸಿ 1836ರಲ್ಲಿ ಸ್ವಯಂಪ್ರೇರಿತವಾಗಿ ಪ್ರಾಣ ತ್ಯಾಗ ಮಾಡಿದರು ಎಂದು ವಿವರಿಸಿದರು.

ಉಪನ್ಯಾಸಕ ಪ್ರೊ.ಹೆಚ್.ಎಸ್. ನರಸಿಂಹಯ್ಯ ಮಾತನಾಡಿ, ಕೈವಾರ ತಾತಯ್ಯನವರು ಬಲಿಜ ಜನಾಂಗಕ್ಕೆ ಸೇರಿದವರಾಗಿದ್ದು, ಇವರ ಮೂಲ ಹೆಸರು ನಾರಾಯಣ, ವಿಜಯನಗರ ಸಾಮ್ರಾಜ್ಯದಲ್ಲಿ ವಾಸವಿದ್ದರೂ ವಿಜಯನಗರ ಸಾಮ್ರಾಜ್ಯ ಪತನದ ನಂತರ ಅಲ್ಲಿಂದ ವಲಸೆ ಹೊರಟರು ಮುಂದೆ ಅವರು ತಮ್ಮ ಜೀವನದಲ್ಲಿ ಬಳೆ ಮಾರುವ ವೃತ್ತಿಯಿಂದ ಜೀವನ ನಡೆಸುತ್ತಿದ್ದರು. ಬಲಿಜ ಸಮುದಾಯದವರು ಹೆಚ್ಚು ಶಿಕ್ಷಣ ಪಡೆಯಬೇಕು ಎಂದು ಆಶಿಸಿದ್ದರು ಎಂದರು.

ಕಾರ್ಯಕ್ರಮದಲ್ಲಿ ಕನ್ನಡ–ಸಂಸ್ಕೃತಿ ಇಲಾಖೆ ನಿರ್ದೇಶಕ ಡಾ.ಸುದರ್ಶನ್, ಅಂಕಣಕಾರ ಗುಬ್ಬಿಗೂಡು ರಮೇಶ್, ಮುಖಂಡರಾದ ಹೆಚ್.ಎ.ವೆಂಕಟೇಶ್, ಮೀನಾ ತೂಗುದೀಪ್, ಶ್ರೀನಾಥ್‌ಬಾಬು, ವಿಜಯ ಸಂಪತ್‌ಕುಮಾರ್, ಕೆ.ಸಿ. ಪ್ರಕಾಶ್, ಗೋಪಾಲಕೃಷ್ಣ, ಆರ್.ಎನ್. ವಿಶ್ವನಾಥ್ ಇನ್ನಿತರರು ಉಪಸ್ಥಿತರಿದ್ದರು.

ಇಂದು ಉಚಿತ ಆಯುರ್ವೇದ ಆರೋಗ್ಯ ತಪಾಸಣೆ ಶಿಬಿರ

ಮೈಸೂರು: ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಶಾರಾವಿ ಫೌಂಡೇಶನ್ ವತಿಯಿಂದ ಮಹಿಳೆಯರಿಗೆ ಉಚಿತ ಆಯುರ್ವೇದ ಆರೋಗ್ಯ ತಪಾಸಣಾ ಶಿಬಿರವನ್ನು ಗೋಕುಲಂ 3ನೇ ಹಂತದಲ್ಲಿರುವ ಭವೇದ್ ಆಯುರ್ವೇದದಲ್ಲಿ ಮಾ.9ರಂದು ಬೆಳಗ್ಗೆ 9 ಗಂಟೆಯಿಂದ ರಾತ್ರಿ 8ರವರೆಗೆ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಮೊ: 9916200341 ಸಂಪರ್ಕಿಸಿ.

ಭರದಿಂದ ಸಾಗುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿ

ಮಣಿಪಾಲ್ ಆಸ್ಪತ್ರೆ ಬಳಿ ಪಿಲ್ಲರ್ ನಿರ್ಮಾಣ ಕಾರ್ಯಕ್ಕೆ ವೇಗ



ಮಣಿಪಾಲ್ ಜಂಕ್ಷನ್‌ನಲ್ಲಿ ಗ್ರೇಡ್ ಸಪರೇಟರ್ ಕಾಮಗಾರಿ ಭರದಿಂದ ಸಾಗುತ್ತಿದೆ.

ಮೈಸೂರು, ಮಾ.8(ಬಿಎಲ್‌ಯು)– ಮೈಸೂರಿನ ಕೆಂಪೇಗೌಡ ವೃತ್ತ (ಮಣಿಪಾಲ್ ಜಂಕ್ಷನ್)ದಲ್ಲಿ ನಿರ್ಮಾಣ ಮಾಡುತ್ತಿರುವ ಗ್ರೇಡ್ ಸಪರೇಟರ್ ಕಾಮಗಾರಿ ಭರದಿಂದ ಸಾಗುತ್ತಿದೆ.

120 ಕೋಟಿ ವೆಚ್ಚದಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಕೈಗೊಂಡಿರುವ ಗ್ರೇಡ್ ಸಪರೇಟರ್ ಕಾಮಗಾರಿ ವೇಗ ಪಡೆದಿದೆ. ಸದ್ಯ ಜಂಕ್ಷನ್‌ನ ಬೆಂಗಳೂರಿಗೆ ಹೋಗುವ ರಸ್ತೆ ಆರಂಭದ ಸ್ಥಳ ಹಾಗೂ ಮಣಿಪಾಲ್ ಆಸ್ಪತ್ರೆ ಎದುರಿನ ಸ್ಥಳದಲ್ಲಿ ಕಾಮಗಾರಿ ಆರಂಭಿಸಲಾಗಿದೆ.

ಎರಡು ಸ್ಥಳದಲ್ಲಿ ಸುಮಾರು 20 ಅಡಿ ಅಡಿಪಾಯದಲ್ಲಿ ಫುಟಿಂಗ್ ಹಾಕಿ ಭಾರೀ ಗಾತ್ರದ ಪಿಲ್ಲರ್ ಮೇಲೆತ್ತಲಾಗುತ್ತಿದೆ. ಪಿಲ್ಲರ್‌ಗೆ ಟಿಎಂಟಿ ಕಬ್ಬಿಣವನ್ನು ಅಳವಡಿಸಿದ್ದು, ಇದಕ್ಕೆ ಕಾಂಕ್ರಿಟ್ ಹಾಕುವ ಕಾರ್ಯ ಇನ್ನೆರಡು ದಿನಗಳಲ್ಲಿ ನಡೆಯಲಿದೆ.

ಎರಡು ವರ್ಷದೊಳಗೆ ಕಾಮಗಾರಿ ಮುಗಿಸಲು ಗಡುವು ವಿಧಿಸಲಾಗಿದೆ. ಈ ಹಿನ್ನೆಲೆಯಲ್ಲಿ ಹಗಲು ರಾತ್ರಿ ಎನ್ನದೆ ಕಾರ್ಮಿಕರು ಕೆಲಸ ಮಾಡುತ್ತಿದ್ದಾರೆ. ಈಗಿನ ಕೆಲಸದ ವೇಗ ನೋಡಿದರೆ ನಿಗದಿತ ಸಮಯದೊಳಗೆ ಯೋಜನೆ ಪೂರ್ಣಗೊಳಿಸುವ ಸಾಧ್ಯತೆ ಇದೆ.

ಕಾಮಗಾರಿ ನಡೆಯುತ್ತಿರುವ ಹಿನ್ನೆಲೆಯಲ್ಲಿ ಅಕ್ಕ ಪಕ್ಕದ ರಸ್ತೆಗಳು ಕಿರಿದಾಗಿದೆ. ಇದರಿಂದ ಸಿಗ್ನಲ್ ಬಿಟ್ಟಾಗ ಈ ಸ್ಥಳದಲ್ಲಿ ಟ್ರಾಫಿಕ್ ಜಾಮ್ ಆಗುತ್ತಿದೆ. ಇಂತಹ ಒಳ್ಳೆಯ ಕೆಲಸ ಮಾಡುವಾಗ ಜನರಿಗೆ ಸ್ವಲ್ಪ ತೊಂದರೆಯಾಗಬಹುದು. ಆದರೆ ಕಾಮಗಾರಿ ಪೂರ್ಣಗೊಂಡರೆ ಈ ಯಾವುದೇ ತೊಂದರೆ ಇರುವುದಿಲ್ಲ.

ಮಣಿಪಾಲ್ ಜಂಕ್ಷನ್‌ನ ಬಾಟಲ್ ನೆಕ್‌ನಲ್ಲಿ ನಡೆಯುತ್ತಿರುವ ಗ್ರೇಡ್ ಸಪರೇಟರ್ ನಿರ್ಮಾಣದಿಂದ ಇನ್ನು ಮುಂದೆ ವಾಹನ ಸಂಚಾರ ಸುಗಮವಾಗಲಿದ್ದು, ಟ್ರಾಫಿಕ್ ಜಾಮ್ ಗೋಳು ತಪ್ಪಲಿದೆ.

ಅಭಿವೃದ್ಧಿ ಕಾಮಗಾರಿಗೆ ಶಾಸಕ ಹರೀಶ್‌ಗೌಡ ಗುದ್ದಲಿಪೂಜೆ



ಚಾಮರಾಜ ಕ್ಷೇತ್ರ ವ್ಯಾಪ್ತಿಯಲ್ಲಿ 50 ಕೋಟಿ ರೂ ವೆಚ್ಚದಲ್ಲಿ ಮಂಜೂರಾಗಿರುವ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿಪೂಜೆ ನೆರವೇರಿಸಿದರು.

ಮೈಸೂರು, ಮಾ.8(ಎಂಕೆ)– ಮುಖ್ಯಮಂತ್ರಿ ಮೂಲಸೌಕರ್ಯ ಅಭಿವೃದ್ಧಿ ಯೋಜನೆಯಡಿ ಚಾಮರಾಜ ಕ್ಷೇತ್ರಕ್ಕೆ ಮಂಜೂರಾಗಿರುವ 50 ಕೋಟಿ ಅನುದಾನ ಹಾಗೂ ಮೈಸೂರು ಪಾಲಿಕೆ 24.10 ಅನುದಾನದಡಿಯಲ್ಲಿ ವಾರ್ಡ್ ನಂ.4ರ ಲೋಕನಾಯಕನಗರ ಮತ್ತು ವಾರ್ಡ್ ನಂ.5ರ ವ್ಯಾಪ್ತಿಯ ಕುಂಬಾರಕೊಪ್ಪಲಿನಲ್ಲಿ ಹಮ್ಮಿಕೊಂಡಿರುವ 16.06 ಕೋಟಿ ರೂ.ವೆಚ್ಚದ ವಿವಿಧ ಅಭಿವೃದ್ಧಿ ಕಾಮಗಾರಿಗೆ ಶಾಸಕ ಕೆ.ಹರೀಶ್‌ಗೌಡ ಭಾನುವಾರ ಗುದ್ದಲಿ ಪೂಜೆ ನೆರವೇರಿಸಿದರು.

ಬಳಿಕ ಮಾತನಾಡಿದ ಅವರು, ಹೆಬ್ಬಾಳು, ಕುಂಬಾರಕೊಪ್ಪಲು, ಲೋಕನಾಯಕನಗರ, ಭೈರವೇಶ್ವರ ನಗರ ಸೇರಿದಂತೆ ಕ್ಷೇತ್ರದ ಎಲ್ಲಾ ವಾರ್ಡ್‌ಗಳ ಅಭಿವೃದ್ಧಿ ನಿಟ್ಟಿನಲ್ಲಿ ರಸ್ತೆ, ಚರಂಡಿ ಹಾಗೂ ಇನ್ನಿತರೆ ಅಗತ್ಯ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. ಕ್ಷೇತ್ರದಲ್ಲಿರುವ ಮೂಲ ಗ್ರಾಮಗಳು ರೆವಿನ್ಯೂ ಬಡಾವಣೆಗಳಾಗಿರುವುದರಿಂದ ಸಮಸ್ಯೆಗಳು ಹೆಚ್ಚಾಗಿರಲಿದೆ ಆದ್ದರಿಂದ ಮೂಲ ಗ್ರಾಮಗಳ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುತ್ತಿದೆ ಎಂದರು.

ಸಿಎಂ ವಿಶೇಷ ಅನುದಾನವನ್ನು ಎಲ್ಲಾ ವಾರ್ಡ್‌ಗಳಿಗೂ ಹಂಚಿಕೆ ಮಾಡಿದ್ದು, ಕಳೆದೊಂದು ವಾರದಿಂದ ನಿರಂತರವಾಗಿ ಗುದ್ದಲಿ ಪೂಜೆ ಕಾರ್ಯಕ್ರಮ ನಡೆಸಲಾಗುತ್ತಿದೆ. ಅಲ್ಲದೆ ನಾನಿಂದು ಶಾಸಕನಾಗಲೂ ಹೆಚ್ಚಿನ ಮತಗಳನ್ನು ನೀಡಲು ಕಾರಣಕರ್ತರಾದ ಕುಂಬಾರಕೊಪ್ಪಲು ಭಾಗದ ಜನರ ಸೇವೆಗೆ ಸದಾ ಸಿದ್ದನಿದ್ದೇನೆ ಎಂದು ತಿಳಿಸಿದರು.

ಚಾಮರಾಜ ಕ್ಷೇತ್ರದಲ್ಲಿ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿರುವ ಶಾಸಕ ಕೆ.ಹರೀಶ್‌ಗೌಡ ಜನಪರ ಕಾರ್ಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತು. ಕುಂಬಾರಕೊಪ್ಪಲು ಅಭಿವೃದ್ಧಿ ವಿಚಾರದಲ್ಲಿ ಇಷ್ಟು ಆಸಕ್ತಿ ವಹಿಸಿದ ಶಾಸಕರಲ್ಲಿ ಹರೀಶ್‌ಗೌಡರೇ ಮೊದಲಿಗರು ಎಂದು ನಿವಾಸಿಗಳು ಬಣ್ಣಿಸಿದರು.

ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಪಾಲಿಕೆ ಮಾಜಿ ಸದಸ್ಯರಾದ ಪೈಲ್ವಾನ್ ಶ್ರೀನಿವಾಸ್, ಶಿವಮಾದು, ಉಷಾ ಕುಮಾರ್, ಕೆಪಿಸಿಸಿ ಸದಸ್ಯೆ ರತ್ನಮ್ಮ, ಇಂದಿರಾಗಾಂಧಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ರವಿ ಮಂಚೇಗೌಡನಕೊಪ್ಪಲು, ದೇವರಾಜ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ನಾಗಭೂಷಣ್, ವಾರ್ಡ್ ಅಧ್ಯಕ್ಷರಾದ ಕೇಬಲ್ ನಾಗಣ್ಣ, ಮಹೇಶ್, ಮುಖಂಡರಾದ ಸುಶೀಲ, ಅಪ್ಪಾಜಿಗೌಡ, ಕೇಬಲ್ ಮಹೇಶ್, ಪ್ರಕಾಶ್, ಜಯರಾಂ, ರಾಂಪ್ರಸಾದ್, ಮಂಜು, ಮನೋಹರ್, ದಿನೇಶ್, ಮಂಜು, ವೆಂಕಟೇಶ್, ಪಾಲಿಕೆ ಸೂಪರಿಂಟೆಂಡೆಂಟ್ ಇಂಜಿನಿಯರ್ ಮಂಜು, ಎಕ್ಸಿಕ್ಯೂಟಿವ್ ಇಂಜಿನಿಯರ್ ಶ್ರೀನಿವಾಸ್, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಾದ ಹಿತೇಂದ್ರ, ಶುಶ್ರುತ್, ಇಂಜಿನಿಯರ್‌ಗಳಾದ ಮಣಿ, ಶಿಲ್ಪ ಮತ್ತಿತರರಿದ್ದರು.